بِسۡمِ اللّٰہِ الرَّحۡمٰنِ الرَّحِیۡمِ نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ وَعَلٰی عَبۡدِہِ الۡمَسِیۡحِ الۡمَوۡعُوۡدِ


ಮಸೀಹ್ ಮೌಊದ್(ಅ) ವಿಶೇಷ ಸಂಚಿಕೆ

ಸಂಚಿಕೆ: 10–11

ವಾರ್ಷಿಕ ಶುಲ್ಕ: ರೂ.500/–


وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

# ಕನ್ನಡ ಬದರ್ ವಾರ ಪತ್ರಿಕೆ

Weekly **BADAR** Qadian KANNADA


ವರ್ಷ: 03

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

Postal Reg. No: 3000039689/2020-22 | 10–17 ಮಾರ್ಚ್ 2022 | 10–17 ಅಮಾನ್ 1401 ತಬ್‌ಲೀಗ್ ಹಿಜರಿ ಶಮ್‌ಸಿ | 06–13 ಶಅ್‌ಬಾನ್ 1443 ಹಿಜರಿ ಖಮರಿ


## “ನಾನು ನಿನ್ನ ಸಂದೇಶವನ್ನು ಭೂಮಿಯ ಅಂಚುಗಳಿಗೆ ತಲುಪಿಸುತ್ತೇನೆ”

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ದಿವ್ಯವಾಣಿ


(ತಝ್‌ಕಿರಃ, ಪುಟ–260, ಆವೃತ್ತಿ ಡಿಸೆಂಬರ್ 2006 ಖಾದಿಯಾನ್)

“ನಾವು ಜಮಾಅತಿನ ಹೆಸರನ್ನು ಲೋಕದಿಂದ ಅಳಿಸುವೆವು ಎಂದು ನಮ್ಮ ವಿರೋಧಿಗಳು ಹೇಳುತ್ತಾರೆ. ಅಲ್ಲಾಹನನ್ನು ಈ ರೀತಿಯಲ್ಲಿ ಪ್ರೀತಿಸುವ ಮತ್ತು ನಿಷ್ಠೆ ತೋರಿಸುವವರನ್ನು ಅಳಿಸಲು ಯಾರಿಗೆ ಸಾಧ್ಯ? ವಿರೋಧಿಗಳು ಎಷ್ಟು ಶಕ್ತವಾಗಿ ಎದುರಿಸಿದರೂ ಸರಿ. ಅಲ್ಲಾಹನು ತನ್ನ ಧರ್ಮವನ್ನು ಲೋಕದಲ್ಲಿ ಹರಡಲು ಈ ಜಮಾಅತನ್ನು ಸ್ಥಾಪಿಸಿದ್ದಾನೆ. ಆದ್ದರಿಂದ ಪ್ರತಿ ಸಂದರ್ಭದಲ್ಲಿ ಅಲ್ಲಾಹನೇ ಅದಕ್ಕೆ ಆಸರೆಯಾಗುತ್ತಾನೆ, ಸಹಾಯ ಮಾಡುತ್ತಾನೆ. ಒಂದು ಪೀಳಿಗೆಯ ನಂತರ ಇನ್ನೊಂದು ಪೀಳಿಗೆಯ ಹೃದಯಗಳಲ್ಲಿ ಅದರ ಪ್ರೇಮ ಮತ್ತು ಅದರ ಉದ್ದೇಶವನ್ನು ಪೂರ್ತಿಮಾಡುವ ಹುರುಪನ್ನು ಉಂಟುಮಾಡುತ್ತಾ ಹೋಗುತ್ತಾನೆ.”

**(ಅಧ್ಯಾಪನೆ ಹಝ್‌ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಅಲ್‌ಖಾಮಿಸ್(ಅತಬಿಅ), ಖುತ್‌ಬ ಜುಮುಅ 08–01–2021)**











ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್(ಅತಬಅ)ರವರು ದಿನಾಂಕ 15 ಜನವರಿ 2021ರಂದು MTA Ghana ದ ಹೊಸ ಚೇನಲನ್ನು ಉದ್ಘಾಟಿಸುತ್ತಿರುವುದು





ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್(ಅತಬಅ)ರವರು ದಿನಾಂಕ 02 ಏಪ್ರೆಲ್ 2021ರಂದು ಚೈನಿಸ್ ಭಾಷೆಯಲ್ಲಿ ಅಹ್ಮದಿಯಾ ಜಮಾಅತ್ತಿನ ಹೊಸ ವೆಬ್‌ಸೈಟನ್ನು ಉದ್ಘಾಟಿಸುತ್ತಿರುವುದು





ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್(ಅತಬಅ)ರವರು ದಿನಾಂಕ 09 ಏಪ್ರೆಲ್ 2021ರಂದು ಖುರ್‌ಆನ್ ವೆಬ್‌ಸೈಟನ್ನು ಉದ್ಘಾಟಿಸುತ್ತಿರುವುದು





ದಿನಾಂಕ 02 ಜುಲೈ 2021ರಂದು ಹುಝೂರ್ ಅನ್ವರ್(ಅತಬಅ) ರವರು AhmadiPedia website ಅನ್ನು ಉದ್ಘಾಟಿಸುತ್ತಿರುವುದು



ದಿನಾಂಕ 27 ಜೂನ್ 2021ರಂದು ಹುಝೂರ್ ಅನ್ವರ್(ಅತಬಅ) ರವರು MTA international ನ Online conference ನಲ್ಲಿ ಸಂಬೋಧಿಸುತ್ತಿರುವುದು






ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್(ಅತಬಿಅ)ರವರು ಜಲ್ಸ ಸಲಾನ ಖಾದಿಯಾನ್ 2021ರ ಸಂದರ್ಭದಲ್ಲಿ ಲಂಡನ್‌ನಿಂದ ಸಮಾರೋಪ ಸಮಾರಂಭದಲ್ಲಿ ಸಂಬೋಧನೆ ಮತ್ತು ದುಆ ನಿರ್ವಹಿಸುತ್ತ












ದಿನಾಂಕ 24,25,26 ಡಿಸೆಂಬರ್ 2021ರಲ್ಲಿ ಆಯೋಜಿಸಲಾದ ಜಲ್ಸ ಸಾಲಾನ ಖಾದಿಯಾನ್‌ನ ಕೆಲವು ಸುಂದರ ನೋಟಗಳು

## ಕನ್ನಡ ವಾರಪತ್ರಿಕೆ ಬದರ್ "ಮಸೀಹೆ ಮೌಊದ್(ಅ) ವಿಷೇಶ ಸಂಚಿಕೆ"


| | ವಿಷಯ ಸೂಚಿಕೆ | ಪುಟ |
|---|---|---|
| * | ವಿಷಯ ಸೂಚಿಕೆ ಮತ್ತು ಸಂಪಾದಕೀಯ | 1 |
| * | ಪವಿತ್ರ ಖುರ್‌ಆನ್ ಹಾಗೂ ಪ್ರವಾದಿ ಮುಹಮ್ಮದ್(ಸ)ರ ಅಧ್ಯಾಪನೆಗಳು | 02 |
| * | ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು | 03 |
| * | ದೇವಾಸ್ತಿತ್ವ ಪ್ರಾರ್ಥನಾ ಸ್ವೀಕೃ ಪ್ರಕಾಶದಲ್ಲಿ | 04 |
| * | ಹಝ್ರತ್ ಮಸಿಹ್ ಮೌಊದ್ ಅಲೈಹಿಸ್ಸಲಾಮ್ ಅವರ ಜೀವನಚರಿತ್ರೆ ಖುರ್‌ಆನ್ ಮಜೀದ್‌ನೊಂದಿಗೆ ನಿಮ್ಮ ಪ್ರೀತಿ ಮತ್ತು ಸೇವೆ. | 08 |
| * | ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಸತ್ಯತೆ (ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಭವಿಷ್ಯವಾಣಿಗಳ ಬೆಳಕಿನಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಅಭಿವೃದ್ಧಿ) | 12 |


## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**
ಎಲ್ಲಾ ವಿರೋಧಿಯರನು, ಪ್ರತಿವಾದಿಸಲು ಆಹ್ವಾನಿಸಿದೆವು ನಾವು.
إِنَّ السُّمُومَ لَشَرُّ مَا فِي الْعَالَمِ ۞ شَرُّ السُّمُومِ عَدَاوَةُ الصُّلَحَاءِ

**"ಪೀರ್ ಮಹೆರ್ ಅಲಿ ಶಹ್ ಗೊಲಡ್ವಿ ಅವರಿಗಾಗಿ ವೈಭವಯುತ ಬಹುಮಾನದ ಪಂಥಾಹ್ವಾನ"**
ಪ್ರತಿರೂಪವಾಗಿ ವ್ಯಾಖ್ಯಾನ ಬರೆದ ಮೇಲೆ, ಆ ವ್ಯಾಖ್ಯಾನ ಅರ್ಥವತ್ತಾಗಿ ಹಾಗೂ ವಿಷಯಾಧಾರಿತವಾಗಿ ಇದ್ದರೆ, ಹಾಗೂ ನೀವು ನನ್ನ ವ್ಯಾಖ್ಯಾನದಿಂದ ತಪ್ಪುಗಳನ್ನು ಹುಡುಕಿ ತೋರಿಸಿದರೆ ಪ್ರತಿಯೊಂದು ತಪ್ಪಿಗೆ ಐದು ರೂಪಾಯಿ ಬಹುಮಾನ ನೀಡುವೆನು.

ಸಯ್ಯದ್‌ನಾ ಹಜ್‌ರತ್ ಮಸೀಹ್ ಮೌಊದ್(ಅ) ರವರ ಈ ವೈಭವಯುತ ಬಹುಮಾನದ ಪಂಥಾಹ್ವಾನ ನಾವು ಅವರ ಗ್ರಂಥ "ನುಝೂಲುಲ್ ಮಸೀಹ್" ರೂಹಾನಿ ಖಝಾಈನ್, ಸಂಪುಟ 8 ರಿಂದ ಪ್ರಸ್ತುತಪಡಿಸುತ್ತಿದ್ದೇವೆ. ನಾವು ಈ ಮೊದಲು ಹೇಳಿದಂತೆ ಎಪ್ಪತ್ತು ದಿನಗಳ ಒಳಗೆ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅರಬಿಯಲ್ಲಿ ಸೂರಃ ಫಾತಿಹದ ವ್ಯಾಖ್ಯಾನ "ಇಜಾಝುಲ್ ಮಸೀಹ್" ಹೆಸರಿನಲ್ಲಿ ಅರ್ಥಗರ್ಭಿತ ಹಾಗೂ ತತ್ವಪೂರ್ಣವಾಗಿ ಬರೆದು ಪ್ರಕಟಿಸಿರುವರು. ಆದರೆ ಪೀರ್ ಮಹರ್ ಶಾಹ್ ಗೊಳಳವಿ ಅವರು ಯಾವ ವ್ಯಾಖ್ಯಾನವನ್ನು ಬರೆದು ಕಳುಹಿಸಲಿಲ್ಲ. ಆದರೆ ಒಂದೂವರೆ ವರ್ಷ ನಂತರ ಅವರು ಒಂದು ಗ್ರಂಥ "ಸೈಫ್ ಚಿಶ್ತಿಯಾಯಿ" ಹೆಸರಿನಿಂದ ಉರ್ದುವಿನಲ್ಲಿ ಬರೆದು ಕಳುಹಿಸಿದ್ದರು. ಅದರಲ್ಲಿ ವ್ಯಾಖ್ಯಾನದ ವಿಷಯವೇ ಇರಲಿಲ್ಲ. ಕೇವಲ ನಿರರ್ಥಕ ಆರೋಪಗಳು ಮಾತ್ರ ಇದ್ದವು. ಈ ಸಂಬಂಧ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಉತ್ತರ ಹಿಂದಿನ ಸಂಚಿಕೆಯಲ್ಲಿ ನಾವು ಪ್ರಸ್ತುತಪಡಿಸಿದ್ದೆವು. ಅವರ ಇನ್ನಷ್ಟು ಉತ್ತರಗಳು ಮತ್ತು ವೈಭವಯುತ ಅಧ್ಯಾಪನೆಗಳು ಹಾಗೂ ಅವರ ಬಹುಮಾನದ ಪಂಥಾಹ್ವಾನ ನಾವು ಪ್ರಸ್ತುತಪಡಿಸುವೆವು.

### ತಫ್ಸೀರ್‌ನ (ವ್ಯಾಖ್ಯಾನದಲ್ಲಿ) ದಲ್ಲಿ ತಪ್ಪು ಹುಡುಕಿ ಕೊಟ್ಟಲ್ಲಿ ಒಂದು ತಪ್ಪಿಗೆ ಐದು ರೂಪಾಯಿ ಬಹುಮಾನದ ಪಂಥಾಹ್ವಾನ.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ನಾವು ಎಷ್ಟೋ ಸಲ ಈ ಜಾಹೀರಾತು ಸಹ ನೀಡಿದ್ದೆವು. ನಮ್ಮ ಎದುರಾಗಿ ಯಾವುದೆ ಅರಬಿ ಪತ್ರಿಕೆ(ನಿಯತಕಾಲಿಕ) ಬರೆಯಿರಿ, ಮತ್ತು ಅರಬಿ ಭಾಷೆಯ ತಜ್ಞರು ಅದರ ತೀರ್ಪುಗಾರರಾಗಲಿ, ನಿಮ್ಮ ಪತ್ರಿಕೆ(ನಿಯತಕಾಲಿಕ) ಅರ್ಥಗರ್ಭಿತವಾಗಿಯೂ ಮತ್ತು ತತ್ವಾಧಾರಿತವಾಗಿದ್ದರೆ ನನ್ನ ಸಂಪೂರ್ಣ ದಾವೆಯು ಸುಳ್ಳಾಗುವುದು. ಮತ್ತು ನಾನು ಈಗಲೂ ಸಹ

لَا إِلٰهَ إِلَّا اللّٰهُ مُحَمَّدٌ رَّسُوْلُ اللّٰهِ

ಒಪ್ಪಿಕೊಳ್ಳುವುದೇನೆಂದರೆ ನೀವು ಬರೆದಿರುವ ತಫ್ಸೀರ್ ನಲ್ಲಿ ಯಾವುದೇ ರೀತಿಯ ತಪ್ಪುಗಳು ಇಲ್ಲ ಎಂದು ಸ್ಪಷ್ಟವಾದಾಗ ನೀವು ನನ್ನ ತಫ್ಸೀರ್ ವ್ಯಾಖ್ಯಾನದಿಂದ ತಪ್ಪುಗಳನ್ನು ಹುಡುಕಿಕೊಟ್ಟರೆ ಒಂದು ತಪ್ಪಿಗೆ ಐದು ರೂಪಾಯಿ ಬಹುಮಾನ ನೀಡುವೆನು. ಆದ್ದರಿಂದ ನಿಷ್ಪ್ರಯೋಜಕ ಆಕ್ಷೇಪ ಎತ್ತುವ ಬದಲು ಅರಬಿಯಲ್ಲಿ ವ್ಯಾಖ್ಯಾನ ಬರೆದು ತನ್ನ ಪ್ರೌಢತೆ ಸಾಬೀತು ಮಾಡಬೇಕು. ಏಕೆಂದರೆ ಯಾವ ವಿಷಯದಲ್ಲಿ ಒಬ್ಬನು ಪರಿಪೂರ್ಣತೆ ಸಾಧಿಸಲಿಲ್ಲ ಎಂದಾದರೆ ಅವನಿಗೆ ಆ ವಿಷಯದಲ್ಲಿ ಆಕ್ಷೇಪ ಎತ್ತಲು ಹಕ್ಕಿರುವುದಿಲ್ಲ. ಒಬ್ಬ ಶಿಲ್ಪಿಯು ಶಿಲ್ಪಕಲೆಯ ಮೇಲೆ ಆಕ್ಷೇಪ ಎತ್ತಬಹುದು. ಒಬ್ಬ ಕುಲುಮೆಗಾರ ಕುಲುಮೆಗಾರರನ್ನು ಆಕ್ಷೇಪಿಸಬಹುದು. ಆದರೆ ಒಬ್ಬ ಸಿಪಾಯಿ ಕರ್ಮಚಾರಿಗೆ ಜಾಣ ಮೇಸ್ತ್ರಿಯ ಮೇಲೆ ಆಕ್ಷೇಪ ಮಾಡಲು ಹಕ್ಕಿರುವುದಿಲ್ಲ. (ನುಝೂಲುಲ್ ಮಸೀಹ್, ರೂಹಾನಿ ಖಝಾಈನ್, ಸಂಪುಟ–18, ಪುಟ–400)

### ಅರಬಿ ಬರೆಯಲಾಗದವನು ಅರಬಿಯ ತಪ್ಪುಗಳನ್ನು ಹೆಕ್ಕಿ ತೋರಿಸಲು ಹಕ್ಕುದಾರನಾಗಬಹುದೇ?

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಿಮಗೆ ಸ್ವಂತವಾಗಿ ಒಂದು ಸಾಲು ಸಹ ಅರಬಿ ಬರೆಯುವ ಅರ್ಹತೆ ಇಲ್ಲ ಎಂದ ಮೇಲೆ, ಸೈಫ್ ಚಿಶ್ತಿಯಾಯಿನಲ್ಲಿ ಸಹ ನೀವು ಕದ್ದ ಮಾಲನ್ನು ತನ್ನ ಮಾಲು ಎಂದ ಹಾಗಾಯಿತು. ಹೀಗಿರುವಾಗ ಏಕೆ ನಿಮಗೆ ನಾಚಿಕೆಯಾಗುವುದಿಲ್ಲ. ಓ ಭಲೆ ಮನುಷ್ಯ ಮೊದಲು ತಮ್ಮ ಅರಬಿ ಪಾಂಡಿತ್ಯ ಆದರೂ ಸಾಬೀತು ಮಾಡಿ ತೋರಿಸಿರಿ. ನಂತರ ನನ್ನ ಗ್ರಂಥದಿಂದ ತಪ್ಪು ಹುಡುಕಿ ತೋರಿಸಿರಿ. ಆಗ ಒಂದೊಂದು ತಪ್ಪಿಗೆ ಒಂದೊಂದು ರೂಪಾಯಿ ನಮ್ಮಿಂದ ಪಡೆಯಿರಿ. ನನ್ನ ಎದುರಾಗಿ ಅರಬಿಯಲ್ಲಿ ಪತ್ರಿಕೆ ಬರೆದು ನನ್ನ ಗ್ರಂಥದ ಪವಾಡವನ್ನು ಸುಳ್ಳಾಗಿಸಿ ತೋರಿಸಿರಿ. ಅಕಟಾಕಟ! ಹತ್ತು ವರ್ಷಗಳ ಅವಧಿ ಕಳೆಯಿತು. ಯಾರೂ ಸಹ ಸಜ್ಜನಿಕೆಯ ರೀತಿಯಲ್ಲಿ ನನ್ನನ್ನು ಎದುರಿಸಲಿಲ್ಲ. ಹಾಗೆ ಮಾಡಿದ್ದೆನಾದರೂ ಇದ್ದರೆ ಕೇವಲ ನಿಮ್ಮ ಗ್ರಂಥದಲ್ಲಿ ಅದು ತಪ್ಪಾಗಿದೆ, ಇದು ತಪ್ಪಾಗಿದೆ ಅನ್ನುವುದು ಹಾಗೂ ಆ ವಾಕ್ಯ, ಈ ವಾಕ್ಯ ಕದ್ದು ಬರೆಯಲಾಗಿದೆ ಎನ್ನುವುದು ಎಷ್ಟು ಸರಿ? ಅವರಿಂದ ಸಾಧ್ಯವಾದರೆ ಎದುರು ಏಕೆ ಬರುವುದಿಲ್ಲ? ನರಿಯ ಹಾಗೆ ಏಕೆ ಓಡಿ ಹೋಗುತ್ತಾನೆ? ಓ ಮೂಢನೆ ಮೊದಲು ಯಾವುದೇ ವ್ಯಾಖ್ಯಾವಾದರೂ ಅರಬಿಯಲ್ಲಿ ಬರೆದು ತನ್ನ ಅರಬಿ ಪಾಂಡಿತ್ಯವನ್ನು ಸಾಬೀತು ಮಾಡು. ಆಗ ನಿನಗೆ ಆಕ್ಷೇಪ ಎತ್ತುವುದು ಹಕ್ಕು ಸಿಗಬಹುದು. ಸಾಕ್ಷ್ಯಗಳಿಲ್ಲದೆ ಅರಬಿ ಶಿಕ್ಷಣದ ಬಗ್ಗೆ ನನ್ನನ್ನು ಎತ್ತಿ ತೋರಿಸುವುದು, ಕೃತಿ ಚೌರ್ಯದ ಆರೋಪ ಹಚ್ಚುವುದು, ವ್ಯಾಕರಣದ ತಪ್ಪು ತಿಳಿಸುವುದು, ಇವೆಲ್ಲ ಕೇವಲ ಎಂಜಲು ತಿನ್ನುವ ಮಾತಾಗಿದೆ. ಓ ಅಜ್ಞಾನಿಯೇ, ಲಜ್ಜೆಗೇಡಿಯೇ ಮೊದಲು ಅರಬಿಯಲ್ಲಿ ಅರ್ಥಗರ್ಭಿತ ಹಾಗೂ ತಫ್ಸಿರ್ ಆಧಾರವಾಗಿ ಯಾವುದೇ ಸೂರಃ (ಅನ್ಯಾಯ)ದ ವ್ಯಾಖ್ಯಾನ ಬರೆದು ಪ್ರಕಟಿಸು. ಆಗ ನಿನಗೆ ಬೆರೊಬ್ಬರ ಹತ್ತಿರ ನನ್ನ ಗ್ರಂಥದಿಂದ ತಪ್ಪು ಹುಡುಕುವ, ಕೃತಿಚೌರ್ಯದ ಆರೋಪ ಹಚ್ಚಲು ನಿನಗೆ ಹಕ್ಕು ಇರುತ್ತದೆ. ಯಾವ ವ್ಯಕ್ತಿ ಸಾವಿರಾರು ಭಾಗಗಳನ್ನು ಅರಬಿಯಲ್ಲಿ ಬರೆದು ತೋರಿಸಿರುವನೇ ಹೊರತು ಕೇವಲ ಭೂಟಾಟಿಕೆ ಮಾಡಲಿಲ್ಲ, ಬದಲು ಸತ್ಯವಾದ ಸಾಕ್ಷ್ಯಗಳನ್ನು ವಿವರಿಸಿರುವನು. ಕೇವಲ ಅವನನ್ನು ನಿರಾಕರಿಸುವುದು ಅವನಿಗೆ ಉತ್ತರವಾಗಬಹುದೇ ಅಥವಾ ಎಲ್ಲಿಯವರೆಗೆ ಕಾರ್ಯದ ಎದುರು ಕಾರ್ಯ ಮಾಡಿ ತೋರಿಸುವುದಿಲ್ಲ, ಕೇವಲ ಭೂಟಾಟಿಕೆಯಿಂದ ನ್ಯಾಯ ತೀರ್ಪು ಕಾರಣವಾಗಲು ಸಾಧ್ಯವೇ. ಅದರಿಂದ ಯಾವ ಅರ್ಹತೆ ಸಾಬೀತಾಗಲು ಸಾಧ್ಯ? ಕೇವಲ ನಾಲಿಗೆಯಿಂದ ಅದು ತಪ್ಪು, ಇದು ತಪ್ಪು, ಆ ವಾಕ್ಯಗಳನ್ನು ಕದ್ದು ಬರೆಯಲಾಗಿದೆ ಎನ್ನುವುದರಿಂದ ಏನು ಪ್ರಯೋಜನ? ಅದರಿಂದ ನಿಮ್ಮ ಯಾವ ಮಹಾನತೆ ಸಾಬೀತಾದಂತಾಯಿತು? ತಮ್ಮ ಮಹಾನತೆ ಸಾಬೀತು ಮಾಡಿ ತೋರಿಸದಿದ್ದರೆ ನಿಮ್ಮ ಆಕ್ಷೇಪಗಳನ್ನು ಹೇಗೆ ಸರಿಯಾಗುವುದು? ಬದಲು ಯಾವ ವ್ಯಕ್ತಿ ಅಂತಹ ಅರ್ಹತೆಯುಳ್ಳ ಮತ್ತು ಪರಿಪೂರ್ಣ ಮನುಷ್ಯರ ಮೇಲೆ ಆಕ್ಷೇಪ ಮಾಡುವನೋ, ಯಾವ ಜನರು ತನ್ನ ಯಾವ ಮಹಾನತೆ ನಮೂನೆಯನ್ನು ತೋರಿಸಲಾರರು, ಅದಕ್ಕಿಂತ ಹುಚ್ಚುತನ ಬೇರೊಂದಿಲ್ಲ.

(ಅದೇ ಪುಟ 441).

*(ಉಳಿದ ಭಾಗ ಪುಟ ಸಂಖ್ಯೆ 18ರಲ್ಲಿ ಮುಂದುವರಿಸಲಾಗಿದೆ)*

# ಪವಿತ್ರ ಖುರ್‌ಆನ್‌ನ ಬೋಧನೆ

يُسَبِّحُ لِلّٰهِ مَا فِي السَّمٰوٰتِ وَمَا فِي الْاَرْضِ الْمَلِكِ الْقُدُّوْسِ الْعَزِيْزِ الْحَكِيْمِ ○ هُوَالَّذِيْ بَعَثَ فِي الْاُمِّيّٖنَ رَسُوْلًا مِّنْهُمْ يَتْلُوْا عَلَيْهِمْ اٰيٰتِهٖ وَيُزَكِّيْهِمْ وَيُعَلِّمُهُمُ الْكِتٰبَ وَالْحِكْمَةَ ۚ وَاِنْ كَانُوْا مِنْ قَبْلُ لَفِيْ ضَلٰلٍ مُّبِيْنٍ ○ وَّاٰخَرِيْنَ مِنْهُمْ لَمَّا يَلْحَقُوْا بِهِمْ ۭ وَهُوَالْعَزِيْزُ الْحَكِيْمُ ○ ذٰلِكَ فَضْلُ اللّٰهِ يُؤْتِيْهِ مَنْ يَّشَآءُ ۭ وَاللّٰهُ ذُو الْفَضْلِ الْعَظِيْمِ ○ (سورۃ جمعہ:۲ تا ۵)

**ಅರ್ಥಾತ್:** ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವ ಎಲ್ಲವೂ ಅಲ್ಲಾಹನ ಕೀರ್ತನೆ ಮಾಡುತ್ತವೆ. (ಅವನು) ಸಾರ್ವಭೌಮನೂ ಪರಿಶುದ್ಧನೂ ಪ್ರತಾಪಶಾಲಿಯೂ ವಿವೇಕವಂತನೂ ಆಗಿರುವನು. ಅನಕ್ಷರಸ್ಥ ಜನರಲ್ಲಿ, ಅವರಿಂದಲೇ ಒಬ್ಬ ಸಂದೇಶವಾಹಕರನ್ನು ನಿಯುಕ್ತಿಗೊಳಿಸಿದವನು ಅವನೇ. *ಆ ಸಂದೇಶವಾಹಕ* ಅವನ (ಅಲ್ಲಾಹನ) ವಚನಗಳನ್ನು ಅವರಿಗೆ ವಾಚಿಸುತ್ತಾರೆ; ಅವರನ್ನು ಶುದ್ಧೀಕರಿಸುತ್ತಾರೆ ಹಾಗೂ ಅವರಿಗೆ ಗ್ರಂಥವನ್ನೂ ಜ್ಞಾನವನ್ನೂ ಕಲಿಸುತ್ತಾರೆ. ಮುಂಚೆಯಾದರೋ ಅವರು (ಆ ಜನರು) ಸ್ಪಷ್ಟವಾದ ತಪ್ಪು ಹಾದಿಯಲ್ಲಿದ್ದರು. ಅವರೊಂದಿಗೆ ಇಷ್ಟರ ವರೆಗೆ ಸೇರಿಲ್ಲದ ಅವರ ಪೈಕಿಯ ಇನ್ನೊಂದು ಜನತೆಯಲ್ಲೂ. ಅವನು ಪ್ರತಾಪಶಾಲಿಯೂ ವಿವೇಕವಂತನೂ ಆಗಿದ್ದಾನೆ. ಅದು ಅಲ್ಲಾಹನ ಅನುಗ್ರಹವಾಗಿದೆ. ತಾನಿಚ್ಛಿಸುವವರಿಗೆ ಅವನು ಅದನ್ನು ದಯಪಾಲಿಸುತ್ತಾನೆ. ಅಲ್ಲಾಹನು ಅಪಾರವಾದ ಅನುಗ್ರಹದ ಒಡೆಯನಾಗಿದ್ದಾನೆ. ತೌರಾತ್ ಹೊರಿಸಲ್ಪಟ್ಟು ಅದನ್ನು (ಸರಿಯಾಗಿ) ಹೊರಲಾರದವರ ಸ್ಥಿತಿ, ಗ್ರಂಥಗಳನ್ನು ಹೊರುವ ಕತ್ತೆಯ ಸ್ಥಿತಿಯ ಹಾಗಿದೆ. ಅಲ್ಲಾಹನ ದೃಷ್ಟಾಂತಗಳನ್ನು ಸುಳ್ಳಾಗಿಸಿದ ಜನತೆಯ ಸ್ಥಿತಿ ಅದೆಷ್ಟು ನಿಕೃಷ್ಟ! ದುಷ್ಕರ್ಮಿಗಳಾದ ಜನರಿಗೆ ಅಲ್ಲಾಹನು ಮಾರ್ಗದರ್ಶನ ಮಾಡುವುದಿಲ್ಲ.

ಹಝ್ರತ್ ಮುಸ್ಲಿಹ್ ಮೌಊದ್(ರ)ರವರು ತಫ್ಸೀರೆ ಸಗೀರ್‌ನಲ್ಲಿ ಹೇಳುತ್ತಾರೆ: ಈ ವಚನದಲ್ಲಿ ಈ ಹದೀಸ್‌ನ ಕುರಿತು ಹೇಳಲಾಗಿದೆ ಅದು ಹೀಗಿದೆ: ಹಝ್ರತ್ ಅಬೂಹುರೈರ(ರ) ಅವರು ವರದಿ ಮಾಡುತ್ತಾರೆ: ನಾವು ಪ್ರವಾದಿ ಮುಹಮ್ಮದ್(ಸ) ಅವರ ಸನ್ನಿಧಿಯಲ್ಲಿ ಕುಳಿತಿದ್ದೆವು, ಆಗ ಸೂರತುಲ್ ಜುಮುಅಃ ಅವರಿಗೆ ಅವತೀರ್ಣವಾಗಲು ತೊಡಗಿತು. ಪ್ರವಾದಿ(ಸ)ರವರು ಆ ಸೂರತ್ತಿನ ಆಯತ್ **ವ ಆಖರೀನ ಮಿನ್‌ಹುಮ್ ಲಮ್ಮಾ ಯಲ್‌ಹಖೂಬಿಹಿಮ್** ಪಠಿಸಿದಾಗ, ಅದರ ಅರ್ಥ **"ಅವರೊಂದಿಗೆ ಇಷ್ಟರ ವರೆಗೆ ಸೇರಲಿಲ್ಲದ ಅವರ ಪೈಕಿಯಯ ಇನ್ನೊಂದು ಜನತೆಯಲ್ಲೂ,"** ನಾನು ಕೇಳಿದೆ: ಅಲ್ಲಾಹನ ಪ್ರವಾದಿಯವರೇ, ಅವರು ಯಾರು ? ಪೈಗಂಬರ್(ಸ) ಮೊದಲು ಉತ್ತವೇನೂ ಹೇಳಲಿಲ್ಲ. ಮೂರು ಸಲ ಪುನರಾವರ್ತಿಸಿ ಕೇಳಿದಾಗ ಪೈಗಂಬರ್(ಸ) ಅಲ್ಲೇ ಉಪಸ್ಥಿತರಿದ್ದ ಹಝ್ರತ್ ಸಲ್ಮಾನ್ ಪಾರಿಸಿ(ರ) ಅವರ ಮೇಲೆ ಕೈಯಿಟ್ಟಿಕೊಂಡು ಹೀಗೆ ಉತ್ತರಿಸಿದರು:

لَوْ كَانَ الْاِيْمَانُ مُعَلَّقًا بِالثُّرَيَّا لَنَالَهٗ رَجُلٌ اَوْ رِجَالٌ مِنْ هٰٓؤُلَآءِ
(بخاری کتاب التفسیر سورۃ الجمعہ)

'ಸತ್ಯವಿಶ್ವಾಸವು ಕಣ್ಮರೆಯಾಗಿ ಸುರಯ್ಯ(ಕೃತ್ತಿಕೆ) ನಕ್ಷತ್ರಕ್ಕೆ ಏರಿ ಹೋದರು ಇವರ (ಪರ್ಶಿಯನ್ ವಂಶದ) ಪೈಕಿ ಅಥವಾ ಕೆಲವು ವ್ಯಕ್ತಿಗಳು ಅದನ್ನು ಮರಳಿ ತರುವರು.

(ಸಹೀಹ್ ಬುಖಾರಿ, ಕಿತಾಬುತ್ತಫ್‌ಸೀರ್, ಸೂರಃ ಜುಮುಅಃ)

وَعَدَ اللّٰهُ الَّذِيْنَ اٰمَنُوْا مِنْكُمْ وَعَمِلُوا الصّٰلِحٰتِ لَيَسْتَخْلِفَنَّهُمْ فِي الْاَرْضِ كَمَا اسْتَخْلَفَ الَّذِيْنَ مِنْ قَبْلِهِمْ ۠ وَلَيُمَكِّنَنَّ لَهُمْ دِيْنَهُمُ الَّذِي ارْتَضٰى لَهُمْ وَلَيُبَدِّلَنَّهُمْ مِّنْۢ بَعْدِ خَوْفِهِمْ اَمْنًا ۭ يَعْبُدُوْنَنِيْ لَا يُشْرِكُوْنَ بِيْ شَيْـًٔا ۭ وَمَنْ كَفَرَ بَعْدَ ذٰلِكَ فَاُولٰٓئِكَ هُمُ الْفٰسِقُوْنَ ○ (سورۃ نور:56)

**ಅರ್ಥಾತ್:** ನಿಮ್ಮ ಪೈಕಿ ವಿಶ್ವಾಸ ಹೊಂದಿ ಸತ್ಕರ್ಮ ಗೈಯುವವರಿಗೆ, ಅವರಿಗಿಂತ ಮುಂಚೆ ಇದ್ದವರನ್ನು ಖಲೀಫರನ್ನಾಗಿ ಮಾಡಿದಂತೆಯೇ ಖಂಡಿತವಾಗಿಯೂ ಅವರನ್ನು ಸಹ ಭೂಮಿಯಲ್ಲಿ ಖಲೀಫರನ್ನಾಗಿ ಮಾಡುವನೆಂದೂ ಅವರಿಗೋಸ್ಕರ ಅವನು ತೃಪ್ತಿಗೊಂಡ ಧರ್ಮವನ್ನು ಅವರಿಗೆ ಬಲಪಡಿಸಿ ಕೊಡುವನೆಂದೂ ಅವರ ಭಯ ಭೀತಿಯ ಬಳಿಕ ಅವರಿಗೆ ಸುರಕ್ಷತೆ ಮತ್ತು ನೆಮ್ಮದಿಯನ್ನು ದಯಪಾಲಿಸುವನೆಂದೂ ಅಲ್ಲಾಹನು ವಾಗ್ದಾನ ಮಾಡಿದ್ದಾನೆ. ಅವರು ನನ್ನನ್ನು ಮಾತ್ರ ಆರಾಧಿಸುವರು; ನನಗೆಯಾರನ್ನೂ ಸಹಭಾಗಿ ಮಾಡಲಾರರು. ಅನಂತರವೂ ಯಾರಾದರೂ ನಿರಾಕರಿಸಿದರೆ ಅವರೇ ಧಿಕ್ಕಾರಿಗಳು.

# ಪ್ರವಾದಿ ಮುಹಮ್ಮದ್(ಸ)ರ ಬೋಧನೆ

## ಇಮಾಮ್ ಮಹದಿ ಹಾಗೂ ಮಸೀಹ್ ಮೌಊದ್‌ನ ಆಗಮನದ ಕುರಿತು ಸುವಾರ್ತೆ

عَنْ اَبِيْ هُرَيْرَةَ رَضِيَ اللّٰهُ عَنْهُ قَالَ : قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ : كَيْفَ اَنْتُمْ اِذَا نَزَلَ ابْنُ مَرْيَمَ فِيْكُمْ وَاِمَامُكُمْ مِنْكُمْ وَفِيْ رِوَايَةٍ فَاَمَّكُمْ مِنْكُمْ (بخاری کتاب الانبیاء باب نزول عیسیٰ بن مریم)

ಹಝ್ರತ್ ಅಬೂ ಹುರೈರಾ(ರ) ವರದಿ ಮಾಡುತ್ತಾರೆ ಪ್ರವಾದಿ(ಸ) ಅವರು ಹೇಳಿದರು: ಮರಿಯಮ್‌ನ ಪುತ್ರ ಅಂದರೆ ಈಸ ಮಸೀಹರ 'ಮಸೀಲೆ ಮಸೀಹ್' ನಿಮ್ಮಲ್ಲಿ ಆಗಮಿಸಿದಾಗ ನಿಮ್ಮ ಪರಿಸ್ಥಿತಿ ಎಷ್ಟು ಸೂಕ್ಷ್ಮವಾಗಿರುತ್ತದೆ. ಅವರು ನಿಮ್ಮ ಇಮಾಮ್ ಆಗಿರುವರು ಮತ್ತು ನಿಮ್ಮಲ್ಲಿ ಒಬ್ಬರಾಗಿರುವರು. ಇನ್ನೊಂದು ವರದಿಯ ಪ್ರಕಾರ, ನಿಮ್ಮಲ್ಲಿ ಒಬ್ಬರಾಗಿರುವ ಅವರು ನಿಮ್ಮ ಇಮಾಮತ್‌ನ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. (ಬುಖಾರಿ ಕಿತಾಬುಲ್ ಅಂಬಿಯಾ ಬಾಬ್ ನುಝೂಲ್ ಈಸ ಇಬ್ನೆ ಮರಿಯಮ್)

## ಖಿಲಾಫತ್ ಅಲಾ ಮಿನ್‌ಹಾಜುನ್ನಬುವ್ವತ್‌ನ ಸ್ಥಾಪನೆಯ ಕುರಿತು ಸುವಾರ್ತೆ

عَنْ حُذَيْفَةَ رَضِيَ اللّٰهُ عَنْهُ قَالَ: قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ : تَكُوْنُ النُّبُوَّةُ فِيْكُمْ مَا شَآءَ اللّٰهُ اَنْ تَكُوْنَ ثُمَّ يَرْفَعُهَا اللّٰهُ تَعَالٰى ثُمَّ تَكُوْنُ خِلَافَةٌ عَلٰى مِنْهَاجِ النُّبُوَّةِ مَا شَآءَ اللّٰهُ اَنْ تَكُوْنَ ثُمَّ يَرْفَعُهَا اللّٰهُ تَعَالٰى ثُمَّ تَكُوْنُ مُلْكًا عَاضًّا فَتَكُوْنُ مَا شَآءَ اللّٰهُ اَنْ تَكُوْنَ ثُمَّ يَرْفَعُهَا اللّٰهُ تَعَالٰى ثُمَّ تَكُوْنُ مُلْكًا جَبْرِيَّةً فَيَكُوْنُ مَا شَآءَ اللّٰهُ اَنْ يَكُوْنَ ثُمَّ يَرْفَعُهَا اللّٰهُ تَعَالٰى ثُمَّ تَكُوْنُ خِلَافَةٌ عَلٰى مِنْهَاجِ النُّبُوَّةِ ثُمَّ سَكَتَ. (مشکوٰۃ، باب الانذار والتحذیر)

ಹಝ್ರತ್ ಹುದೈಫಹ್(ರ) ವರದಿ ಮಾಡುತ್ತಾರೆ ಪ್ರವಾದಿ(ಸ) ಹೇಳಿದರು: ಅಲ್ಲಾಹನು ಇಚ್ಛಿಸುವವರೆಗೂ (ನಬುವ್ವತ್)ಪ್ರವಾದಿತ್ವವು ನಿಮ್ಮಲ್ಲಿ ಉಳಿಯುತ್ತದೆ, ನಂತರ ಅವನು ಅದನ್ನು ಎತ್ತಿಕೊಳ್ಳುತ್ತಾನೆ ಮತ್ತು ಖಿಲಾಫತ್ ಅಲಾ ಮಿನ್‌ಹಾಜುನ್ನಬುವ ಸ್ಥಾಪಿಸಲ್ಪಡುತ್ತದೆ– ಆ ಅನುಗ್ರಹವೂ ಸಹ ಎತ್ತಿಕೊಳ್ಳುತ್ತಾನೆ. ತದನಂತರ, ಅವನ ತಖ್ದೀರ್‌ನ(ವಿಧಿಯ) ಪ್ರಕಾರ, ಕಿರುಕುಳಕ್ಕೊಳಗಾದ ರಾಜ್ಯವನ್ನು ಸ್ಥಾಪಿಸಲಾಗುವುದು (ಇದು ಜನರಿಗೆ ದುಃಖ ಮತ್ತು ದುಃಖವನ್ನುಂಟುಮಾಡುತ್ತದೆ) ಈ ಕಾಲವೂ ಪೂರ್ಣವಾದಾಗ ಅಲ್ಲಾಹನ ಇನ್ನೊಂದು ತಖ್ದೀರ್(ವಿಧಿ)ನ ಪ್ರಕಾರ ಅದಕ್ಕಿಂತಲೂ ಹೆಚ್ಚು ದೌರ್ಜನ್ಯ ರಾಜ್ಯವು ಸ್ಥಾಪಿಸಲಾಗುವುದು ಎಲ್ಲಿಯ ತನಕ ಎಂದರೆ ಇದರಿಂದ ಅಲ್ಲಾಹನ ಕರುಣೆಯು ಪೂರ್ಣ ಪ್ರಮಾಣದಲ್ಲಿ ಬರುತ್ತದೆ ಮತ್ತು ಈ ಹಿಂಸಾಚಾರದ ಯುಗವನ್ನು ಕೊನೆಗೊಳಿಸುತ್ತದೆ. ಅದರ ನಂತರ ಪುನಃ ಖಿಲಾಫತ್ ಅಲಾ ಮಿನ್ಹಾಜ್–ಉನ್–ನಬುವ್ವ ಸ್ಥಾಪನೆಯಾಗುತ್ತದೆ. ಹೀಗೆ ಹೇಳಿ ಪ್ರವಾದಿ(ಸ)ರವರು ಮೌನವಾದರು.

(ಮಿಶ್ಕಾತ್, ಬಾಬ್ ಅಲ್‌ಇನ್‌ಝಾರ್ ವತ್ತಹ್‌ಝೀರ್)

## ವಾಗ್ದಾತ್ತ ಮಸೀಹ್‌ನ ಕಾಲ ಯಾರಿಗೆ ದೊರಕುತ್ತದೆಯೋ ಅವರಿಗೆ ನನ್ನ ಸಲಾಮ್ ಅನ್ನು ತಿಳಿಸಿ

اَلَا اِنَّ عِيْسَى بْنَ مَرْيَمَ لَيْسَ بَيْنِيْ وَبَيْنَهٗ نَبِيٌّ وَلَا رَسُوْلٌ. اَلَا اِنَّهٗ خَلِيْفَتِيْ فِيْ اُمَّتِيْ مِنْ بَعْدِيْ. اَلَا اِنَّهٗ يَقْتُلُ الدَّجَّالَ وَيَكْسِرُ الصَّلِيْبَ وَيَضَعُ الْجِزْيَةَ. وَتَضَعُ الْحَرْبُ اَوْزَارَهَا اَلَا مَنْ اَدْرَكَهٗ فَلْيَقْرَأْ عَلَيْهِ السَّلَامَ (طبرانی الاوسط والصغیر)

ಮರಿಯಮ್‌ನ ಪುತ್ರ ಈಸ ಮಸೀಹರು (ವಾಗ್ದತ್ತ ಮೆಸ್ಸಿಹ್) ಮತ್ತು ನನ್ನ ನಡುವೆ ಯಾವುದೇ ಪ್ರವಾದಿ ಅಥವಾ ಸಂದೇಶವಾಹಕರು ಇರುವುದಿಲ್ಲ ಎಂದು ಎಚ್ಚರವಹಿಸಿ. ಗಮನವಿಟ್ಟು ಕೇಳಿರಿ! ಅವರು ನನ್ನ ಬಳಿಕ ಉಮ್ಮತ್ತಿನಲ್ಲಿ ನನ್ನ ಖಲೀಫನಾಗಿರುತ್ತಾರೆ. ಅವರು ಖಂಡಿತವಾಗಿಯೂ ದಜ್ಜಾಲ್ ಅನ್ನು ಕೊಲ್ಲುತ್ತಾರೆ, ಅವರು ಶಿಲುಬೆಯನ್ನು (ಅಂದರೆ ಸಿಲುಬೆ ಧರ್ಮದ ಸಿದ್ಧಾಂತವನ್ನು) ಛಿದ್ರಗೊಳಿಸುತ್ತಾರೆ ಮತ್ತು ಜಿಝ್ಯವನ್ನು ರದ್ದುಗೊಳಿಸುತ್ತಾರೆ (ಅಂದರೆ ಅದರ ಸಂಪ್ರದಾಯವನ್ನು ರದ್ದುಗೊಳಿಸಲಾಗುತ್ತದೆ ಏಕೆಂದರೆ) ಆ ಸಮಯದಲ್ಲಿ (ಧಾರ್ಮಿಕ) ಯುದ್ಧಗಳು ಕೊನೆಗೊಳ್ಳುತ್ತವೆ. ಅವರನ್ನು ಭೇಟಿಯಾಗುವ ಸವಲತ್ತು ಯಾರಿಗೆ ದೊರಕುತ್ತದೆಯೋ ಅವರಿಗೆ ನನ್ನ ಸಲಾಮ್ ಅನ್ನು ತಿಳಿಸಬೇಕು ಎಂಬುದನ್ನು ನೆನಪಿಡಿ. (ತಿಬ್ರಾನಿ ಅಲ್‌ಔಸತ್ ವಸ್ಸಗೀರ್)

......☆......☆......☆......

# ಸಯ್ಯದುನಾ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ ವಾಗ್ದಾತ್ತ ಮಹದಿ ಹಾಗೂ ಮಸೀಹ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ನಮ್ಮ ದೇವನೇ ನಮ್ಮ ಸ್ವರ್ಗ. ನಮ್ಮ ಅತ್ಯುನ್ನತ ಸಂತೋಷಗಳು ನಮ್ಮ ದೇವನಲ್ಲಿವೆ. ಏಕೆಂದರೆ ನಾವು ಅವನನ್ನು ನೋಡಿರುವೆವು ಮತ್ತು ಪ್ರತಿಯೊಂದು ಸೌಂದರ್ಯವನ್ನು ನಾವು ಅವನಲ್ಲಿ ಕಂಡಿರುವೆವು. ಜೀವವನ್ನು ಬಲಿಯರ್ಪಿಸುವುದರಿಂದ (ದೇವನೆಂಬ) ಈ ಸಂಪತ್ತು ಸಿಗಬಹುದಾದರೆ ಹಾಗೆ ಪಡೆಯಲು ಅದು (ಆ ಸಂಪತ್ತು) ಅರ್ಹವಾಗಿದೆ. ಒಬ್ಬನು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವುದರಿಂದ ಪಡೆಯಬಹುದಾಗಿದ್ದರೆ ಹಾಗೆ ಖರೀದಿಸಲು ಯೋಗ್ಯವಾದ ಮಾಣಿಕ್ಯ ಇದಾಗಿದೆ. ಎಲೈ ಭಾಗ್ಯಹೀನರೇ, ನೀವು ಈ ಕಾರಂಜಿಯ ಕಡೆಗೆ ಓಡಿ ಬನ್ನಿರಿ. ಇದು ನಿಮ್ಮ ಬಾಯಾರಿಕೆಯನ್ನು ನೀಗಿಸುವುದು. ಇದು ನಿಮ್ಮನ್ನು ರಕ್ಷಿಸುವಂತಹ ಜೀವಜಲವನ್ನೀಯುವ ಕಾರಂಜಿಯಾಗಿದೆ. ನಾನೇನು ಮಾಡಲಿ? ಈ ಶುಭವಾರ್ತೆಯನ್ನು ಜನಹೃದಯಗಳಲ್ಲಿ ಹೇಗೆ ನೆಲೆವೂರುವಂತೆ ಮಾಡಲಿ? ಇವನೇ ನಿಮ್ಮ ದೇವನು ಎಂದು ಜನರು ಆಲಿಸುವಂತೆ ಮಾಡಲು ಯಾವ ಡೋಲು ಬಾರಿಸಿ ಪೇಟೆಗಳಲ್ಲಿ ಡಂಗುರ ಸಾರಲಿ? ಜನರು ಕಿವಿಗೊಟ್ಟು ಕೇಳುವಂತೆ ಮಾಡಲು ನಾನು ಯಾವ ಮದ್ದಿನಿಂದ ಚಿಕಿತ್ಸೆ ನಡೆಸಲಿ? ನೀವು ದೇವನಿಗೆ ಸೇರಿದವರಾಗುವಿರಾದರೆ, ದೇವನು ನಿಮ್ಮವನೇ ಆಗುವನು ಎಂದು ದೃಢವಾಗಿ ಅರಿತುಕೊಳ್ಳಿರಿ. **(ಕಿಶ್ತೀ ನೂಹ್, ಪುಟ–21)**

ನಮ್ಮ ಜೀವಂತ ದೇವರು ನಮ್ಮೊಂದಿಗೆ ಮನುಷ್ಯನಂತೆ ಮಾತನಾಡುತ್ತಾನೆ. ನಾವು ಪ್ರಶ್ನೆಯನ್ನು ಕೇಳಿದಾಗ ಮತ್ತು ಪ್ರಾರ್ಥಿಸುವಾಗ, ಅವನು ಸ್ವಭಾವತಃ ತುಂಬಿದ ಪದಗಳಿಂದ ಉತ್ತರಿಸುತ್ತಾನೆ. ಈ ಸರಣಿಯು ಸಾವಿರ ಬಾರಿ ಮುಂದುವರಿದರೂ ಅವನು ಉತ್ತರಿಸಲು ಹಿಂಜರಿಯುವುದಿಲ್ಲ. ಅವನು ತನ್ನ ಕಲಾಮಿನಲ್ಲಿ ಆಶ್ಚರ್ಯಕರವಾದ ವಿಷಯಗಳನ್ನು ಬಹಿರಂಗಪಡಿಸುತ್ತಾನೆ. ಮತ್ತು ಅಲೌಕಿಕ ಪ್ರಕೃತಿಯ ನೋಟವನ್ನು ತೋರಿಸುತ್ತಾನೆ. ಅವನು ಅಲ್ಲಿಯೇ ಇದ್ದಾನೆ ಎಂದು ಭರವಸೆ ನೀಡುತ್ತಾನೆ. ಯಾವುದನ್ನು ಅಲ್ಲಾಹನೆಂದು ಕರೆಯಬೇಕು. ಪ್ರಾರ್ಥನೆಗಳನ್ನು ಸ್ವೀಕರಿಸುತ್ತಾನೆ. ಮತ್ತು ಪ್ರಾರ್ಥನೆಗಳನ್ನು ಸ್ವೀಕರಿಸಿದ್ದಾನೆ ಎಂದು ವರದಿ ನೀಡುತ್ತಾನೆ. ಅವನು ದೊಡ್ಡ ಸಮಸ್ಯೆಗಳನ್ನು ಬಗೆಹರಿಸುತ್ತಾನೆ. ಮತ್ತು ಅವನು ಅನೇಕ ಪ್ರಾರ್ಥನೆಗಳ ಮೂಲಕ ಸತ್ತವರಂತೆ ರೋಗಿಗಳನ್ನು ಪುನರುಜ್ಜೀವನಗೊಳಿಸುತ್ತಾನೆ. ಮತ್ತು ಅವನು ಈ ಎಲ್ಲಾ ಉದ್ದೇಶಗಳನ್ನು ತನ್ನ ಕಲಾಮ್‌ನೊಂದಿಗೆ ಮುಂಚಿತವಾಗಿ ಬಹಿರಂಗಪಡಿಸುತ್ತಾನೆ. ನಮ್ಮ ಅಲ್ಲಾಹನು ಅದೇ ಅಲ್ಲಾಹನಾಗಿದ್ದಾನೆ. ಅವನು ಭವಿಷ್ಯದಲ್ಲಿ ಆಗಬೇಕಾದ ವಿಷಯಗಳನ್ನು ತನ್ನ ಕಲಾಮಿನ ಮೂಲಕ ಅವನೇ ಭೂಮ್ಯಾಕಾಶದ ಅಲ್ಲಾಹನಾಗಿದ್ದಾನೆ ಎಂದು ನಮಗೆ ಸಾಬೀತುಪಡಿಸುತ್ತಾನೆ. **(ನಸೀಮ್ ದಾವತ್, ಪುಟ–448)**

ನಾನು ಯಾವಾಗಲೂ ಆಶ್ಚರ್ಯಚಕಿತನಾಗಿ ನೋಡುತ್ತಿದ್ದೇನೆ. ಈ ಅರಬಿ ಪ್ರವಾದಿ, ಅವರ ಹೆಸರು ಮುಹಮ್ಮದ್(ಸ) (ಸಾವಿರ ಸಾವಿರ ಇಷ್ಟಾಶೀರ್ವಾದಗಳೂ ಶಾಂತಿಯೂ ಅವರ ಮೇಲೆ ಸುರಿಯಲ್ಪಡಲಿ) ಎಂತಹ ಉನ್ನತ ಅಂತಸ್ತನ್ನು ಪಡೆದ ಪ್ರವಾದಿಯಾಗಿರುವರು! ಅವರ ಉನ್ನತಸ್ಥಾನದ ಕೊನೆ ಎಲ್ಲಿದೆಯೆಂದು ತಿಳಿಯಲು ಸಾಧ್ಯವಿಲ್ಲ. ಅವರ ಪವಿತ್ರ ಪ್ರಭಾವದ ಅಂದಾಜು ಮಾಡುವುದು ಸಹ ಮನುಷ್ಯನಿಂದ ಸಾಧ್ಯವಾಗುವ ಕೆಲಸವಲ್ಲ. ಅವರ ಸ್ಥಾನಮಾನಗಳನ್ನು ಗುರುತಿಸಬೇಕಾದ ರೀತಿಯಲ್ಲಿ ಗುರುತಿಸಲಾಗಿಲ್ಲ ಎಂಬುದು ದುಃಖಕರವಾದ ಸಂಗತಿಯಾಗಿದೆ. ಏಕಾದೇವಾರಾಧನೆ ಲೋಕದಿಂದ ಕಣ್ಮರೆಯಾಗಿದ್ದಾಗ ಅದನ್ನು ಮರಳಿ ತಂದ ಒಬ್ಬನೇ ಒಬ್ಬ ಪಹಿಲ್ವಾನ್ ಅವರೇ ಆಗಿದ್ದಾರೆ. ಅವರು ಅಲ್ಲಾಹನೊಂದಿಗೆ ಅತ್ಯಂತ ಉನ್ನತ ಮಟ್ಟದ ಪ್ರೀತಿಯನ್ನು ಹೊಂದಿದ್ದರು. ಮಾನವರ ಹಿತಕಾಂಕ್ಷೆಯಲ್ಲಿ ಅತ್ಯುನ್ನತ ಮಟ್ಟವನ್ನು ತಲಪಿ ಅವರ ಜೀವ ಕರಗಿತು. ಅಲ್ಲಾಹನಿಗೆ ಅವರ ಹೃದಯದ ರಹಸ್ಯ ತಿಳಿದಿದ್ದುದರಿಂದ ಅವರಿಗೆ ಎಲ್ಲ ಪ್ರವಾದಿಗಳ ಮೇಲೆಯೂ (ಅವರ) ಹಿಂದಿನ ಮತ್ತು ಅನಂತರದ ಎಲ್ಲರ ಮೇಲೆಯೂ ಅವನು ಶ್ರೇಷ್ಠತೆಯನ್ನು ಅನುಗ್ರಹಿಸಿದನು. ಅವರ ಅಭಿಲಾಷೆಗಳನ್ನು ಅವರ ಜೀವಿತದಲ್ಲಿಯೇ ಅವನು ಈಡೇರಿಸಿಕೊಟ್ಟನು. **(ಹಖೀಖತುಲ್ ವಹ್ಯ್; ರೂಹಾನೀ ಖಝಾಇನ್ ಸಂಪುಟ–22, ಪುಟ 118 – 119)**

ಎಲೈ ಭೂಮಿಯ ಎಲ್ಲೆಡೆಗಳಲ್ಲೂ ವಾಸಿಸುತ್ತಿರುವ ಜನರೇ, ಪೂರ್ವ ಪಶ್ಚಿಮಗಳಲ್ಲಿ ವಾಸಿಸುತ್ತಿರುವ ಮಾನವ ಆತ್ಮಗಳೇ, ನಾನು ನಿಮ್ಮೆಲ್ಲರನ್ನೂ ಬಹಳ ಒತ್ತಾಯಪೂರ್ವಕವಾಗಿ ಈ ಕಡೆಗೆ ಆಹ್ವಾನಿಸುತ್ತಿದ್ದೇನೆ: ಲೋಕದಲ್ಲಿ ಈಗಿರುವ ಸತ್ಯಧರ್ಮ ಇಸ್ಲಾಮ್ ಮಾತ್ರವಾಗಿದೆ ಮತ್ತು ಪವಿತ್ರ ಖುರ್‌ಆನ್ ವಿವರಿಸುವ ದೇವನೇ ಸತ್ಯದೇವನಾಗಿದ್ದಾನೆ. ಸದಾಕಾಲ ಆಧ್ಯಾತ್ಮಿಕ ಜೀವಿತವನ್ನು ಪ್ರದಾನ ಮಾಡಬಲ್ಲ, ವೈಭವ ಮತ್ತು ಪರಿಶುದ್ಧತೆಯ ಸಿಂಹಾಸನದಲ್ಲಿ ಆಸೀನರಾಗಿರುವ ಪ್ರವಾದಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಆಗಿದ್ದಾರೆ. **(ತಿರ್‌ಯಾಖುಲ್ ಖುಲೂಬ್; ರೂಹಾನೀ ಖಝಾಇನ್, ಸಂಪುಟ–15, ಪುಟ 141)**

ನಾನು ನಮ್ಮೊಂದಿಗೆ ಸತ್ಯವಾಗಿ ಹೇಳುತ್ತೇನೆ. ಯಾರು ಪವಿತ್ರ ಖುರ್‌ಆನಿನ ಏಳುನೂರು ಆಜ್ಞೆಗಳಲ್ಲಿ ಒಂದು ಚಿಕ್ಕದಾದ ಆಜ್ಞೆಯನ್ನು ಕೂಡ ಉಲ್ಲಂಘಿಸುತ್ತಾನೋ ಅವನು ತನ್ನ ಮೋಕ್ಷದ ಬಾಗಿಲನ್ನು ತನ್ನ ಕೈಗಳಿಂದಲೇ ಮುಚ್ಚಿಬಿಡುತ್ತಾನೆ. ನಿಜವಾದ ಮತ್ತು ಪರಿಪೂರ್ಣವಾದ ಮೋಕ್ಷದ ಮಾರ್ಗಗಳನ್ನು ಪವಿತ್ರ ಖುರ್‌ಆನ್ ತೆರೆದಿದೆ. ಉಳಿದವು ಅವುಗಳ ನೆರಳಿನ ರೂಪದಲ್ಲಿದೆ. ಆದುದರಿಂದ ನೀವು ಪವಿತ್ರ ಖುರ್‌ಆನ್‌ನನ್ನು ಗಹನವಾಗಿ ಚಿಂತಿಸುತ್ತಾ ಓದಿರಿ. ಅದನ್ನು ಬಹಳ ಪ್ರೀತಿಸಿರಿ ನೀವು ಬೇರೇನನ್ನು ಪ್ರೀತಿಸುವುದಕ್ಕಿಂತ ಹೆಚ್ಚು ಅದನ್ನು ಪ್ರೀತಿಸಿರಿ. ಏಕೆಂದರೆ ಅಲ್ಲಾಹನು ನನ್ನನ್ನು ಸಂಭೋಧಿಸಿ ಹೀಗೆ ಹೇಳಿದನು. **ಅಲ್‌ಖೈರು ಕುಲ್ಲುಹು ಫಿಲ್ ಖುರ್‌ಆನ್** ಎಲ್ಲಾ ಒಳಿತುಗಳು ಪವಿತ್ರ ಖುರ್‌ಆನ್‌ನಲ್ಲಿದೆ. ಈ ಮಾತು ಸತ್ಯವೇ ಆಗಿದೆ. ಇತರ ವಸ್ತುಗಳಿಗೆ ಅದರ ಮೇಲೆ ಅಗ್ರಸ್ಥಾನ ನೀಡುವವರ ಬಗ್ಗೆ ಖೇದವಾಗುತ್ತದೆ. ನಿಮ್ಮ ಎಲ್ಲಾ ಜಯಗಳ ಮತ್ತು ಮೋಕ್ಷದ ಮೂಲವು ಪವಿತ್ರ ಖುರ್‌ಆನ್ ಆಗಿದೆ. ಧಾರ್ಮಿಕವಾದ ಯಾವುದೇ ಅವಶ್ಯಕತೆ ಪವಿತ್ರ ಖುರ್‌ಆನ್ ಮೂಲಕ ಪರಿಹರಿಸಲ್ಪಡದೆ ಇರುವುದಿಲ್ಲ. ಪುನರುತ್ಥಾನದ ದಿನದಂದು ನಿಮ್ಮ ವಿಶ್ವಾಸದ ಬಗ್ಗೆ ಸತ್ಯವೂ ಅಸತ್ಯವೂ ಎಂದು ಸಾಕ್ಷ್ಯ ನೀಡುವುದು ಪವಿತ್ರ ಖುರ್‌ಆನ್ ಆಗಿದೆ. ನಿಮಗೆ ನೇರವಾಗಿ ಮಾರ್ಗದರ್ಶನ ನೀಡಬಲ್ಲ ಗ್ರಂಥ ಪವಿತ್ರ ಖುರ್‌ಆನ್ ಹೊರತು ಬೇರೆ ಯಾವುದೂ ಆಕಾಶದ ಕೆಳಗೆ ಇಲ್ಲ. ದೇವನು ಪವಿತ್ರ ಖುರ್‌ಆನನ್ನು ನಿಮಗೆ ದಯಪಾಲಿಸಿ ನಿಮ್ಮ ಮೇಲೆ ಬಹಳ ಉಪಕಾರ ಮಾಡಿರುವನು. ನಾನು ಸತ್ಯವಾಗಿ ಹೇಳುತ್ತೇನೆ. ನಿಮಗೆ ಅವತೀರ್ಣಗೊಳಿಸಲ್ಪಟ್ಟ ಗ್ರಂಥ ಕ್ರೈಸ್ತರಿಗೆ ಅವತೀರ್ಣಗೊಳಿಸಲ್ಪಟ್ಟಿದ್ದರೆ ಅವರು ನಾಶ ಹೊಂದುತ್ತಿರಲಿಲ್ಲ. ನಿಮಗೆ ನೀಡಲಾದ ಈ ಅನುಗ್ರಹ ಮತ್ತು ಮಾರ್ಗದರ್ಶನವನ್ನು ತೌರಾತ್‌ಗೆ ಬದಲಾಗಿ ಯಹೂದಿಯರಿಗೆ ನೀಡಿರುತ್ತಿದ್ದರೆ ಅವರ ಕೆಲವು ಪಂಗಡಗಳು ಪುನರುತ್ಥಾನವನ್ನು ನಿರಾಕರಿಸುತ್ತಿರಲಿಲ್ಲ. ಆದುದರಿಂದ ನಿಮಗೆ ನೀಡಲ್ಪಟ್ಟ ಈ ಅನುಗ್ರಹವನ್ನು ಗೌರವಿಸಿರಿ. ಇದು ಅತ್ಯಂತ ಪ್ರಿಯಕರ ಅನುಗ್ರಹವಾಗಿದೆ. ಇದು ಬಹಳ ದೊಡ್ಡ ಸಂಪತ್ತಾಗಿದೆ. ಪವಿತ್ರ ಖುರ್‌ಆನ್ ಅವತೀರ್ಣಗೊಳ್ಳದಿರುತ್ತಿದ್ದರೆ ಸಕಲ ಲೋಕವು ಕೊಳಕು ಮಾಂಸದ ಪಿಂಡದ ಹಾಗೆ ಆಗುತ್ತಿತ್ತು. ಪವಿತ್ರ ಖುರ್‌ಆನ್ ಎಂತಹ ಗ್ರಂಥವೆಂದರೆ ಅದರ ಎದುರಿಗೆ ಇತರ ಎಲ್ಲಾ ಮಾರ್ಗದರ್ಶನಗಳು ನಿರರ್ಥಕವಾಗಿವೆ. **(ಕಿಶ್ತೀ ನೂಹ್, ರೂಹಾನಿ ಖಝಾಈನ್, ಸಂಪುಟ–19, ಪುಟ–26–27)**

......☆......☆......☆......

ಜಲ್ಸ ಸಾಲಾನ ಖಾದಿಯಾನ್ 2021ರ ಭಾಷಣ

# ದೇವಾಸ್ತಿತ್ವ ಪ್ರಾರ್ಥನಾ ಸ್ವೀಕೃ ಪ್ರಕಾಶದಲ್ಲಿ

*ಮುಹಮ್ಮದ್ ಕರೀಮುದ್ದೀನ್ ಶಾಹಿದ್, ಸದರ್ ಸದರ್ ಅಂಜುಮನ್ ಅಹ್ಮದೀಯ ಖಾದಿಯಾನ್*

**ವ ಇಝಾ ಸಅಲಕ ಇಬಾದಿ ಅನ್ನಿ ಫಇನ್ನಿ ಖರೀಬ್, ಉಜೀಬು ದಅ್‌ವತದ್ದಾಇ ಇಝಾ ದಆನ್, ಫಲ್‌ಯಸ್ತಜೀಬುಲೀ ವಲ್‌ಯುಮಿನೂ ಬೀ ಲಅಲ್ಲಹುಮ್ ಯರ್‌ಶುದೂನ್** (ಅಲ್–ಬಖರ–187) (ಓ ಪ್ರವಾದಿ) ನನ್ನ ಬಗ್ಗೆ ನನ್ನ ದಾಸರು ನಿನ್ನೊಡನೆ ಕೇಳಿದರೆ (ಹೇಳು) ಖಂಡಿತವಾಗಿಯೂ ನಾನು ಸಮೀಪದಲ್ಲೇ ಇದ್ದೇನೆ. ನನ್ನನ್ನು ಕರೆದು ಪ್ರಾರ್ಥಿಸುವಾಗ ಪ್ರಾರ್ಥಿಸುವವನ ಪ್ರಾರ್ಥನೆಗೆ ನಾನು ಉತ್ತರ ನೀಡುವೆನು. ಆದ್ದರಿಂದ ಅವರು ಸತ್ಪಥವನ್ನು ಪಡೆಯಲಿಕ್ಕಾಗಿ ನನ್ನ ಕರೆಗೆ ಓಗೊಡಲಿ ಮತ್ತು ನನ್ನ ಮೇಲೆ ನಂಬಿಕೆ ಇರಿಸಲಿ.

ಆದರಣೀಯ ಸಭಾ ಅಧ್ಯಕ್ಷರೇ ಮತ್ತು ಆದರಣಿಯ ಸಭಿಕರೆ! ನನ್ನ ಭಾಷಣದ ಶೀರ್ಷಿಕೆ "ದೇವಾಸ್ತಿತ್ವ–ಪ್ರಾರ್ಥನಾ ಸ್ವೀಕಾರದ ಪ್ರಕಾಶದಲ್ಲಿ" ಎಂದಾಗಿದೆ. ನಾನು ಸೂರಃ ಅಲ್–ಬಖರದ ವಚನ ಮತ್ತು ಅದರ ಅನುವಾದವನ್ನು ಪ್ರಾರಂಬದಲ್ಲಿ ಪಠಿಸಿದ್ದೇನೆ. ಅದರಲ್ಲಿ ಅಲ್ಲಾಹನು ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ರನ್ನು ಸಂಬೋಧಿಸಿ ಹೇಳಿದನು. ಓ ಮುಹಮ್ಮದ್(ಸ) ನನ್ನ ದಾಸರು ನನ್ನ ಬಗ್ಗೆ ಮತ್ತು ನನ್ನ ಅಸ್ತಿತ್ವದ ಕುರಿತು ನಿನ್ನೊಂದಿಗೆ ಪ್ರಶ್ನಿಸಿದರೆ, ಅಲ್ಲಾಹನಿದ್ದಾನೆ ಎಂಬುದಕ್ಕೆ ಯಾವ ಪುರಾವೆ ಇದೆ ಎಂದು ಕೇಳದಿರೆ, ಅವರಿಗೆ ಉತ್ತರ ನೀಡು. ನಾನು ಅವರ ಸಮೀಪದಲ್ಲೇ ಇದ್ದೇನೆ. ಅದಕ್ಕೆ ಸಾಕ್ಷಿ ಎಂದರೆ, ಅವರು ನನ್ನನ್ನು ಕರೆದು ಪ್ರಾರ್ಥಿಸುವಾಗ ಅವರ ಪ್ರಾರ್ಥನೆಗೆ ಉತ್ತರ ನೀಡುವೆನು. ಅದು ನನ್ನ ಅಸ್ತಿತ್ವಕ್ಕೆ ಪುರಾವೆಯಾಗಿರುವುದು. ನನ್ನ ಅಸ್ತಿತ್ವ ಭ್ರಮೆಯೇನಲ್ಲ, ಬದಲು ಒಂದು ಜೀವಂತ ವಾಸ್ತವ ಆಗಿದೆ. ನಾನು ಈ ಬ್ರಹ್ಮಾಂಡದ ಸೃಷ್ಟಿಕರ್ತನಾಗಿದ್ದೇನೆ. ಮತ್ತು ನಾನೇ ಅದರ ಮಾಲೀಕನಾಗಿದ್ದೇನೆ. ಈ ಬ್ರಹ್ಮಾಂಡದ ಎಲ್ಲ ಕಾರ್ಯಗಳನ್ನು ನಾನೇ ನಡೆಸುತ್ತಿದ್ದೇನೆ. ಅಂದರೆ ಅಲ್ಲಾಹನು ಈ ವಚನದಲ್ಲಿ ಸ್ಪಷ್ಟಪಡಿಸುವುದೇನೆಂದರೆ–ಅಲ್ಲಾಹನು ಕೇವಲ ನಾಮಮಾತ್ರಕ್ಕೆ ಬಾದಶಾಹನಲ್ಲ, ಅವನು ತನ್ನ ಸೃಷ್ಟಿಯ ಗುಲಾಮನೂ ಅಲ್ಲ. ಯಾವ ಕಾರಣಕ್ಕೂ ಯಾವುದೇ ಬದಲಾವಣೆಗೆ ಅರ್ಹನಲ್ಲ ಎಂಬುದಕ್ಕೆ. ಅವನು ತನ್ನ ವಿಧಿಬದ್ಧತೆಯನ್ನು ಬದಲಾಯಿಸುವುದಿಲ್ಲ. ಹೌದಾದರೂ ಅವನು ಒಂದು ಜೀವಂತ ಮತ್ತು ಕಾರ್ಯಶೀಲನಾಗಿದ್ದಾನೆ. ಅವನು ತನ್ನ ದಾಸರ ಪ್ರಾರ್ಥನೆಗಳನ್ನು ಆಲಿಸುವವನಾಗಿದ್ದಾನೆ ಮತ್ತು ನಿಶ್ಚಿತರೂಪದಲ್ಲಿ ಅದಕ್ಕೆ ತಕ್ಕಂತೆ ಸ್ಪಂಧಿಸುವವನಾಗಿದ್ದಾನೆ. ಹಝ್ರತ್ ಅಹ್ಮದಿಯಾ ಜಮಾಅತಿನ ಸ್ಥಾಪಕರು ಎಷ್ಟು ಸುಂದರವಾಗಿ ಹೇಳುತ್ತಾರೆ.

**ತುಜ್ಹೆ ದುನಿಯಾಂ ಮೆ ಹೈ ಕಿಸ್‌ನೆ ಪುಕಾರ**
**ಕೆ ಫಿರ್ ಖಾಲಿ ಗಯಾ ಖಿಸ್ಮತ್ ಕ ಮಾರಾ**
**ತೊ ಫಿರ್ ಹೈ ಕಿಸ್‌ಖದರ್ ಇಸ್‌ಕ ಸಹಾರ**
**ಕೆ ಜಿಸ್ಕ ತೂ ಹೀ ಹೈ ಸಬ್‌ಸೆ ಪ್ಯಾರ**
**ಹುವಾ ಮೆಂ ತೆರೆ ಫಝ್ಲೋಂ ಕಾ ಮುನಾದದೀ**
**ಫಸುಬ್‌ಹಾನಲ್ಲಝೀ ಅಖ್‌ಝುಲ್ ಅಆದಿ**

(ನಿನ್ನನ್ನು ಕರೆದವನು ಯಾರು ಖಾಲಿ ಹೇಗಿರುತ್ತಾನೆ. ಹಾಗೆ ಎಷ್ಟೊಂದು ಆಸರೆಯಿದೆ ನಿನ್ನದೆಂದರೆ, ನೀನೇ ಅವನಿಗೆ ಎಲ್ಲರಿಗಿಂತ ಪ್ರಿಯನಾಗಿರುವನು, ನಾನು ನಿನ್ನ ಅನುಗ್ರಹಗಳ ಡಂಗುರ ಬಾರಿಸುವೆ– ಫ ಸುಬ್ಹಾನಲ್ಲಝೀ ಅಖ್‌ಝುಲ್ ಅಆದಿ.

ಮುಸಲ್ಮಾನರಿಗೆ ಕ್ರಿಯಾತ್ಮಕವಾಗಿ ಪ್ರಾರ್ಥನೆಯ ಪಾಠ ಕಲಿಸಲಿ ಮತ್ತು ಪ್ರಾರ್ಥನೆಯ ರೂಡಿ ಮಾಡಿಕೊಳ್ಳಲು ಮುನಷ್ಯನ ಪ್ರತಿ ಆಗು ಹೋಗುಗಳ ಕ್ರಿಯೆಗಳಲ್ಲಿ ಯಾವುದಾದರೊಂದು ಪ್ರಾರ್ಥನೆ ನಿಗದಿ ಮಾಡಿದ್ದಾನೆ. ಆದ್ದರಿಂದ ಮನುಷ್ಯನು ಯಾವ ಕ್ಷಣವು ಅವನ ಸ್ಮರಣೆಯಿಂದ ವಂಚಿತನಾಗುವುದಿಲ್ಲ ಮತ್ತು ಅವನಿಗೆ ಮನದಟ್ಟಾಗಿರುತ್ತದೆ – ನಮ್ಮ ಒಬ್ಬ ಜೀವಂತ ಮತ್ತು ಸರ್ವಶಕ್ತ ದೇವನಿದ್ದಾನೆ. ಅವನು ನಮ್ಮ ಪ್ರಾರ್ಥನೆಗಳನ್ನು ಆಲಿಸುತ್ತಾನೆ ಮತ್ತು ಅದಕ್ಕೆ ತಕ್ಕಂತೆ ಸ್ಪಂಧಿಸುತ್ತಾನೆ. ಅದರ ಒಳ್ಳೆಯ ಪರಿಣಾಮಗಳನ್ನು ಕಾಣುವಂತಾಗುತ್ತದೆ.

ಪ್ರಸಕ್ತ ಕಾಲಘಟ್ಟದ ಇಮಾಮರಾದ ಸಯ್ಯದ್‌ನಾ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ ಮಸೀಹ್ ಮೌಊದ್ ವ ಮಹದಿ ಮೌಊದ್(ಅ) ನುಡಿಯುತ್ತಾರೆ.

"ಮೂಢನು ದುಆ ಪ್ರಾರ್ಥನೆಯನ್ನು ಒಂದು ಅನರ್ಥಕ ಹಾಗೂ ಅಪ್ರಯೋಜಕ ಕಾರ್ಯ ಎಂದು ಭಾವಿಸುತ್ತಾನೆ. ಆದರೆ ಅವನು ತಿಳಿದಿರುವುದಿಲ್ಲ. ದೇವನನ್ನು ಪಡೆಯಬಯಸುವವರ ಮೇಲೆ ಕಾರುಣ್ಯ ಜ್ಯೋತಿಯ ದರ್ಶನದ ಮಾಧ್ಯಮ ಅದು ಪ್ರಾರ್ಥನೆಯೇ ಆಗಿದೆ. ಅವನ ಹೃದಯದಲ್ಲಿ "ಅನಲ್ ಖಾದಿರು" ನಾನು ಸರ್ವ ಸಾಮರ್ಥ್ಯ ಉಳವನಾಗಿರುವೆನು ಎಂಬ ದಿವ್ಯವಾಣಿ ಹಾಕುವನು. ಪ್ರತಿಯೊಬ್ಬ ವಿಶ್ವಾಸದ ಹಸಿಯುಳ್ಳವನು, ದಹನ ಉಳ್ಳವನು ನೆನಪಿಟ್ಟುಕೊಳ್ಳಲಿ. ಈ ಜೀವನದಲ್ಲಿ ಆಧ್ಯಾತ್ಮಿಕ ಪ್ರಕಾಶ ಪಡೆಯ ಬಯಸುವುದಾದರೆ ಪ್ರಾರ್ಥನೆಯ ಒಂದು ಮಾಧ್ಯಮವಾಗಿದೆ. ಅದು ಅಲ್ಲಾಹನ ಅಸ್ತಿತ್ವವನ್ನು ದೃಢಕರಿಸುತ್ತದೆ ಮತ್ತು ಎಲ್ಲ ಸಂಶಯಗಳನ್ನು ನಿವಾರಿಸುತ್ತಿದೆ." (ಅಯ್ಯಾಮುಸ್ಸುಲಹ್, ರೂಹಾನಿ ಖಝಾಈನ್, ಸಂಪುಟ–14, ಪುಟ–239)

ಮತ್ತು ಹೇಳಿದರು: "ಆಪತ್ತುಗಳಲ್ಲಿ ಪ್ರಾರ್ಥನೆಗಳು ಅದ್ಭುತ ಪ್ರಭಾವ ಬೀರುತ್ತದೆ. ನಿಜ ಹೇಳಬೇಕಾದರೆ ಪ್ರಾರ್ಥನೆಗಳಿಂದಲೇ ನಾವು ದೇವರನ್ನು ಕಾಣಲು ಸಾಧ್ಯವಾಗುತ್ತದೆ. (ಮಲ್ಫೂಝಾತ್, ಸಂಪುಟ–2, ಪುಟ 147, ಮುದ್ರಣ ಖಾದಿಯಾನ್ 2003).

ಅದೇ ರೀತಿ ಅವರು ನುಡಿಯುತ್ತಾರೆ: "ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಒಂದೆಡೆ ತನ್ನನ್ನು ಗುರುತಿಸಲು "ನಿಮ್ಮ ದೇವನು ನಿಮ್ಮ ವಾಕುಲತೆಯ ಪ್ರಾರ್ಥನೆಗಳನ್ನು ಆಲಿಸುತ್ತಾನೆ" ಹೇಳಿದನು: **ಅಮ್ಮೆಂ ಯುಜೀಬುಲ್ ಮುಝ್‌ತರ್ರ ಇಝಾ ದಆಹು**– ಪ್ರಾರ್ಥನೆ ಸ್ವೀಕಾರವನ್ನು ತನ್ನನ್ನು ಗುರುತಿಸುವ ಮಾಧ್ಯಮ ಎಂದು ಹೇಳಿದಾಗ, ಒಬ್ಬ ವಿವೇಕವಂತನು ಹೇಗೆ ಸಂಶಯ ಪಡಲು ಸಾಧ್ಯ? ಪ್ರಾರ್ಥನೆಗಳು ಯಾವ ಪರಿಣಾಮವು ಉಂಟುವಮಾಡುವುದಿಲ್ಲ ಎನ್ನಲು ಸಾಧ್ಯ? ಕೇವಲ ಒಂದು ಸಂಪ್ರದಾಯವಾಗಿದೆ. ಅದರಲ್ಲಿ ಯಾವ ಪಥ್ಯವಿಲ್ಲ ಎನ್ನಲು ಸಾಧ್ಯ? ನನ್ನ ಅಭಿಪ್ರಾಯದಲ್ಲಿ ಅಂತಹ ಅಸಭ್ಯನು ಸತ್ಯವಿಶ್ವಾಸಿ ಎನ್ನಲು ಅನರ್ಹನು. ಅಲ್ಲಾಹನು ಹೇಳುವನು. ಯಾವ ರೀತಿ ಭೂಮಿ ಆಕಾಶ ರಚನೆಯ ಮೇಲೆ ವಿಚಾರಿಸಿದಾಗ ಅಲ್ಲಾಹನೆ ಅದರ ಸೃಷ್ಟಿಕರ್ತನೆಂದು ವಿಶ್ವಾಸ ಮೂಡುತ್ತದೆಯೋ ಅದೇ ರೀತಿ ಪ್ರಾರ್ಥನೆಗಳ ಸ್ವೀಕಾರದಿಂದಲು ದೇವನ ಸತ್ಯದ ಮೇಲೆ ವಿಶ್ವಾಸ ಮೂಡುತ್ತದೆ. (ಅಯ್ಯಾಮುಸ್ಸುಲಹ್, ರೂಹಾನಿ ಖಝಾಈನ್, ಸಂಪುಟ–14, ಪುಟ–259)

ಆದರಣೀಯ ಸಭೀಕರೆ! ಲೋಕ ಧಾರ್ಮಿಕ ಇತಿಹಾಸದ ಮೇಲೆ ಮತ್ತು ವರದಿಗಳಿಂದ ಸ್ಪಷ್ಟವಾಗಿ ತಿಳಿದುಬರುವ ಮಾತೆಂದರೆ ಅಲ್ಲಾಹನಿಂದ ಆಗಮಿಸಿದ ಎಲ್ಲ ಸಂದೇಶವಾಹಕರು ಪ್ರಾರ್ಥನೆ ಸ್ವೀಕಾರ ಮಾಧ್ಯಮದಿಂದಲೇ ದೇವಾಸ್ತಿತ್ವವನ್ನು ದೃಢಪಡಿಸಿದ್ದಾರೆ. ಪವಿತ್ರ ಖುರ್‌ಆನ್‌ನಲ್ಲಿ ಹಲವು ಪ್ರವಾದಿಗಳ ಮತ್ತು ಅವರ ವಿರೋಧಿಗಳ ವಿವರ ನೀಡುತ್ತಾ ಪ್ರಾರ್ಥನಾ ಸ್ವೀಕಾರದ ಹಲವು ಘಟನೆಗಳನ್ನು ವಿವರಿಸಿದೆ. ಅದು ಹಜ್‌ರತ್ ಆದಂ(ಅ) ರವರ ಪ್ರಾರ್ಥನೆಯ ಫಲವೇ ಆಗಿತ್ತು. ಮತ್ತು ಅಲ್ಲಾಹನೊಂದಿಗಿನ ಸಂಬಂಧದ ಪರಿಣಾಮವೇ ಆಗಿತ್ತು. ಆ ಕಾಲದ ವಿದ್ರೋಹಿ ಮತ್ತು ಅಹಂಕಾರಿಗಳ ಸರದರನಾದ ಇಬ್ಲೀಸ್ ಮತ್ತು ಅವನ ಚೇಲಗಳ ಪರಿಣಾಮ ದುಸ್ತರವಾಯಿತು ಮತ್ತು ಅವನು ದೇವನ ಆಸ್ಥಾನದಿಂದ ಧಿಕ್ಕರಿಸಲ್ಪಟ್ಟನು. ಹಝ್ರತ್ ನೂಹ್(ಅ) ರವರ ಸಮುದಾಯವು ಅವರನ್ನು ತಿರಸ್ಕರಿಸಿ ಪೀಡಿಸಿದರು ಮತ್ತು ಅಪಹಾಸ್ಯ ಮಾಡಿದರು ಅವರು ದುಆ ಮಾಡಿದರು. **ರಬ್ಬಿ ಲಾ ತಝರ ಅಲಲ್ ಅರ್ಝಿ ಮಿನಲ್ ಕಾಫಿರೀನ ದಯಾರ**. (ನೂಹ್–27) "ನೂಹ್ ಪ್ರಾರ್ಥಿಸಿದರು. ನನ್ನ ಪ್ರಭೂ ಈ ಪ್ರದೇಶದಲ್ಲಿ ಯಾವೊಬ್ಬ ಅವಿಶ್ವಾಸಿಯನ್ನಾಗಲಿ ನೀನು ಬದುಕಲು ಬಿಡಬೇಡ. ಅದರ ಪರಿಣಾಮವಾಗಿ ಎಂತಹ ಪ್ರವಾಹ ಬಂದಿತೆಂದರೆ ಅದು ಎಲ್ಲ ಊರು ಗ್ರಾಮಗಳನ್ನು ವಿನಾಶಗೊಳಿಸಿತು. ಕೇವಲ ನೂಹರ ಹಡಗಿನಲ್ಲಿ ಶರಣು ಹೊಂದಿದವರು ಮಾತ್ರ ಅರಳಿದರು. ಹಝ್ರತ್ ಇಬ್ರಾಹಿಂ(ಅ) ರವರ ಪ್ರಾರ್ಥನೆಯ ಪರಿಣಾಮವಾಗಿ ನಮ್ರೂದನು ಹತ್ತಿಸಿದ ಬೆಂಕಿ ನಂದನವನದಲ್ಲಿ ಪರಿವರ್ತಿತಗೊಂಡಿತು. ಅವರ ಪ್ರಾರ್ಥನೆಗಳ ಫಲವಾಗಿಯೇ ಅವರ ಸಂತಾನದಲ್ಲಿ ಅಲ್ಲಾಹನು ಪೀಳಿಗೆ ಪೀಳಿಗೆಯವರೆಗೆ ಅಸಂಖ್ಯ ಪ್ರವಾದಿಗಳನ್ನು ನೇಮಿಸಿದನು. ಅವರಲ್ಲಿ ಶ್ರೇಷ್ಠರಾದವರು ಹಝ್ರತ್ ಮುಸಾ ಮತ್ತು

ಹಝ್ರತ್ ಈಸಾ(ಅ) ಮತ್ತು ಅಂತ್ಯದಲ್ಲಿ ನಮ್ಮ ಪ್ರೀತಿಯ ನೇತಾರರದ ಹಝ್ರತ್ ಮುಹಮ್ಮದ್ ಅರಬಿ(ಸ) ಖಾತಮನ್ನಬಿಯೀನ್ ಕಿರೀಟ ಧರಿಸಿ ಈ ಲೋಕಕ್ಕೆ ಆಗಮಿಸಿದರು. ಅದು ಹಝ್ರತ್ ಮೂಸಾ(ಅ) ರವರ ದುಆ ಪ್ರಾರ್ಥನೆಯ ಪವಾಡವೆ ಆಗಿತ್ತು. ಅವರ ಕೈಯಿಂದ ಬೀಸಲ್ಪಟ್ಟ ಒಂದು ಸಾಧಾರಣ ಸೊಂಟ ಮಂತ್ರಧಾರಿಗಳನ್ನು ಮಣ್ಣುಮುಕ್ಕಿಸಿ ಅವರು ವಿಶ್ವಾಸ ಹೊಂದುವಂತಾಯಿತು. ಫಿರ್‌ಜಾನ್‌ನಂತಹ ಕ್ರೂರಿ ಬಾದಶಾಹನು ತನ್ನ ಸೈನ್ಯ ಸಿಪಾಯಿಗಳೊಂದಿಗೆ ಬನಿಈಸ್ರಾಯಿಲರ ಬೆನ್ನಟ್ಟಿದಾಗ ಅವರ ಸಮುದಾಯ ಗಾಬರಿಗೊಂಡು ಹೇಳಿತು. **ಇನ್ನ ಲಮುದ್ರಕೂನ್** ಓ ಮೂಸಾ! ನಾವು ಈಗ ಸೆರೆಯಾದೆವು, ಆದರೆ ಅಲ್ಲಾಹನು ಹಝ್ರತ್ ಮೂಸಾ(ಅ) ರವರ ಪ್ರಾರ್ಥನೆಯನ್ನು ಸ್ವೀಕರಿಸಿದನು ಮತ್ತು ಅವರಿಗೆ ಧೈರ್ಯ ಕೆಟ್ಟಿತು. **ಕಲ್ಲ ಇನ್ನಮಯಿಯ ರಬ್ಬಿ ಸಯಹದೀನ್** (ಅಶ್ಯೂರಾಅ–34) ಇಲ್ಲ, ಇಲ್ಲ ಎಂದೂ ಹೀಗಾಗಲು ಸಾಧ್ಯವಿಲ್ಲ. ನನ್ನ ಪ್ರಭೂ ನನ್ನ ಜೊತೆಗಿದ್ದಾನೆ. ಅವನು ಅವಶ್ಯವಾಗಿ ಯಶಸ್ಸಿನ ಮಾರ್ಗ ತೋರುವನು. ಪರಿಣಾಮವೇನಾಯಿತು. "ಫಿರ್‌ಜಾನ್ ಮತ್ತು ಅವನ ಸೈನ್ಯ ಮುಳುಗಿಹೋಯಿತು" ಮತ್ತು ಮೂಸಾ ಮತ್ತು ಅವರ ಸಮುದಾಯ ಸುರಕ್ಷಿತವಾಗಿ ಕಿನ್‌ಆನ್ ದೇಶವನ್ನು ತಲುಪಿತು. ಹಝ್ರತ್ ಈಸಾ(ಅ) ರನ್ನು ಯಹೂದಿಯರು ಸುಳ್ಳುಗಾರನೆಂದು ಹೇಳಿ ಅವರನ್ನು ಶಿಲುಬೆಯ ಮೇಲೆ ಹತ್ಯೆ ಮಾಡಬಯಸಿದರು. ಅದರಿಂದ ಅವರು ಶಾಪಗ್ರಸ್ತ ಮರಣವನ್ನೊಪ್ಪಿ ಸುಳ್ಳುಗಾರನಾಗಬೇಕೆಂದು, ಆದರೆ ಹಝ್ರತ್ ಮಸೀಹನು ಗತ್ಸಮನೆಯ ತೋಟದಲಿ ರಾತ್ರಿ ಅತ್ತು ಪ್ರಾರ್ಥಿಸಿದರು. ಓ ದೇವನೆ ಸಾಧ್ಯವಾದರೆ ಅದರಿಂದ ನನ್ನನ್ನು ರಕ್ಷಿಸು. ಅವರನ್ನು ಶಿಲುಬೆಗೇರಿಸಿದಾಗ ಮತ್ತೆ ಪ್ರಾರ್ಥಿಸಿದರು. ವಲಿ ವಲಿ ಲಮ್ಮಾ ಸಬಖ್ತಾನಿ. ಓ ಪ್ರಭೂವೇ ನನ್ನ ಕೈ ಏಕೆ ಬಿಟ್ಟಿರುವೆ. ಆ ಪ್ರಾರ್ಥನೆಯ ಫಲವೇ ಆಗಿತ್ತು. ಹಝ್ರತ್ ಈಸಾ (ರ) ರ್ರು ಅಲ್ಲಾಹನು ಶಿಲುಬೆಯ ಶಾಪಗ್ರಸ್ತ ಮರಣದಿಂದ ಕೇವಲ ರಕ್ಷಿಸಲಿಲ್ಲ. ಬದಲು ಅವರಿಗೆ ಶಿಲುಬೆಯಿಂದ ಜೀವಂತ ಇಳಿಸಿಕೊಳ್ಳಲಾಯಿತು. ಮತ್ತೆ ಅವರ ಗಾಯಗಳನ್ನು ಗಉಣಪಡಿಸಿದ ನಂತರ ಅವರು ಜೆರೋಸೆಲಂನಿಂದ ವಲಸೆ ಹೋಗಿ ಕಾಶ್ಮೀರವರೆಗಿನ ದೀರ್ಘವಾದ ಪ್ರವಾಸ ಕೈಗೊಂಡರು.

ಮಹನಿಯರೇ ! ಭಾರತದ ಭೂಮಿಯಲ್ಲಿ ಹಝ್ರತ್ ರಾಮಚಂದ್ರ ಶ್ರೀ ಮಹಾರಾಜ ಅವರ ಪ್ರಾರ್ಥನೆಗಳ ಫಲವೇ ಆಗಿತ್ತು. ಅವರು ವಿವಶರಾಗಿ ನಿರಾಶ್ರಿತರಂತೆ ವನವಾಸ ಕೈಗೊಂಡರೂ ರಾವಣನಮತಹ ಕ್ರೂರಿ ಮತ್ತು ಬಲವುಳ್ಳ ರಾಜನಿಗೆ ಸೋಲುಣಿಸಿದರು. ಹತ್ಯೆಗೈದರು ಮತ್ತು ಶ್ರೀಲಂಕಾದ ಮೇಲೆ ವಿಜಯ ಸಾಧಿಸಿದರು. ಅಂತೆಯೇ ಹಝ್ರತ್ ಕೃಷ್ಣಜೀ ಮಹಾರಾಜ್ ಅವರ ಪ್ರಾರ್ಥನೆಗಳ ಪರಿಣಾಮವಾಗಿಯೇ ಕಂಸದಂತಹ ಪಾಪಿ ಮತ್ತು ಪ್ರಭಾವ ಬಲ ಹೊಂದಿದ ರಾಜನು ಹತ್ಯೆಗೊಂಡನು. ಹಾಘೆಯೇ ಕೌರವರ ಸಂಖ್ಯೆ ಯಥೋಚ್ಛವಾಗಿದ್ದರೂ ಹಝ್ರತ್ ಕೃಷ್ಣಜೀ ಅವರ ಪ್ರಾರ್ಥನೆಗಳ ಮತ್ತು ಉಪದೇಶಗಳ ಫಲವಾಗಿ ಪಾಂಡವರಿಗೆ ಕೇವಲ ವಿಜಯ ದೊರಕಲಿಲ್ಲ. ಬದಲು ಪವಿತ್ರ ಗೀತೋಪದೇಶದಂತಹ ಉಪದೇಶಾತ್ಮಕ ಗ್ರಂಥ ಳೋಕಕ್ಕೆ ಲಭಿಸಿತು. ಎಲ್ಲರಿಗಿಮತ ಮಿಗಿಲಾಗಿ ನಮ್ಮ ಪ್ರೀತಿಯ ನೇತಾರರಾದ ಹಝ್ರತ್ ಮುಹಮ್ಮದ್ ಮುಸ್ತಫಾ (ಸ) ರವರ ಅಸ್ತಿತ್ವವೇ ಸಂಪೂರ್ಣ ಪ್ರಾರ್ಥನೆಗಳ ಸಾಕ್ಷಾತ್ ರೂಪವಾಗಿದ್ದರು. ಅವರ (ಸ) ಪ್ರಾರ್ಥನೆಗಳ ಫಲವಾಗಿಯೇ ಅಲ್ಲಾಹನು ಲೋಕದಲ್ಲಿ ಒಂದು ಮಹತ್ತರವಾದ ಕ್ರಾಂತಿ ಉಂಟುಮಾಡಿದನು. ಅತ್ಯಂತ ಕಠಿಣ ವಿರೋಧಗಳ ನಡುವೆಯೂ ಅವರನ್ನು (ಸ) ಅವರ ಶಿಷಯರನ್ನು ಮತ್ತು ಇಸ್ಲಾಂ ಧರ್ಮವನ್ನು ಅಳಿಸಿ ಹಾಕಲು ಅವಿರತ ಪ್ರಯತ್ನಗಳ ನಡುವೆಯೂ ಕೆಲವೇ ವರ್ಷಗಳಲ್ಲಿ ಇಸ್ಲಾಂ ಧರ್ಮವು ಕೇವಲ ಅರಬ್ ರಾಷ್ಟ್ರದಲ್ಲಿ ಹರಡಲಿಲ್ಲ. ಬದಲು ನಿಧಾನವಾಗಿ ಇಡೀ ಲೋಕವೇ ಅದರಿಂದ ಪರಿಚಿತವಾಯಿತು.

ಈ ಮಹಾಕ್ರಾಂತಿಯ ಕುರಿತು ಸಯ್ಯದನಾ ಹಝ್ರತ್ ಮಸೀಹ್ ಮೌಊದ್ (ಅ) ಹೀಗೆ ನುಡಿಯುತ್ತಾರೆ. ಅರಬದಂತಹ ಒಂದು ಮರು ಭೂಮಿಯಲ್ಲಿ ಒಂದು ವಿಚತ್ರವಾದ ಘಟನೆ ಘಟಿಸಿತು. ಲಕ್ಷಾಂತರ ಮೃತಪಟ್ಟವರು (ಆಧ್ಯಾತ್ಮಿಕ ದೃಷ್ಟಿಯಿಂದ) ಕೆಲವೇ ದಿನಗಳಲ್ಲಿ ಜೀವಿತಗೊಂಡರು. ಪಡುಗಾಂತರದಿಂದ ಕೆಟ್ಟವರದ ಅವರು ದೈವಿಕಬಣ್ಣ ಪಡೆದರು. ಕಣ್ಣಿನ ಕುರುಡಾದವನು ದೃಷ್ಟಿ ಪಡೆದರು. ಮೂರರ ನಾಲಗೆಯ ಮೇಲೆ ದೈವಿಕ ಜ್ಞನದ ಹೊಳೆಯೇ ಹರಿದಂತಾಯಿತು. ಲೋಕದಲ್ಲಿ ತಕ್ಷಣದಿಂದ ಒಂದೊಮ್ಮೆ ಎಂತಹ ಕ್ರಾಂತಿ ಉಂಟಾಯಿತೆಂದರೆ ಅದು ಈ ಮೊದಲು ಯಾರೂ ಕಂಡಿರಲಿಕ್ಕಿಲ್ಲ. ಯಾರೂ ಆಲಿಸಲಿಕ್ಕಿಲ್ಲ, ಅದೇನಾಗಿತ್ತು. ನೀವು ಬಲ್ಲರೇ ಅದೊಂದು ಅಲ್ಲಾಹನಲ್ಲಿ ಸಮರ್ಪಿತಗೊಂಡವನ ಅಂಧಕಾರ ರಾತ್ರಿಗಳ ಪ್ರಾರ್ಥನೆಗಳಾಗಿದ್ದವು. ಅವು ಲೋಕದಲ್ಲಿ ಒಂದು ದಿಗಲನ್ನು ಉಂಟು ಮಾಡಿತು ಮತ್ತು ಎಂತೆಂತಹ ವಿಚಿತ್ರಕಾರಕ ಜ್ಞಾನ ನೀಡಿತೆಂದರೆ ಅದು ಈ ಅನಕ್ಷರಸ್ಥ ಮತ್ತು ನಿರ್ಗತಿಕದಿಮದ ಅಸಾಧ್ಯವಾದ ಆತಾಗಿತ್ತು. **ಅಲ್ಲಹುಮ್ಮ ಸಲ್ಲಿ ವಸಲ್ಲಿಮ್ ಬಾರಿಕ್ ಅಲೈಹಿ ಇಲಾಹ ಬಅದ ದಹ್‌ಮಿಹೀ ವ ಗಹ್‌ಮಿಹೀ ವ ಹಝ್‌ನಿಹೀ ಲ್ ಉಮ್ಮತ ವನ್‌ಝುಲ ಅಲೈಹಿ ಅನ್ವಾರ ರಹ್ಮತಿಕ ಇಲಲ್ ಅಬದ್** ನಿರ್ಗತಿಕದಿಂದ ಅಸಾಧ್ಯವಾದ ಮಾತಾಗಿತ್ತು. ಅಲ್ಲಹುಮ್ಮ ಸಲ್ಲಿ ಅಲಲಾ ವಬಾರಿಕ ಸಲ್ಲಾಂ. ನಾನು ನನ್ನ ಸ್ವಅನುಭವದಿಮದ ನೋಡುತ್ತಿದ್ದೇನೆ. ಪ್ರಾರ್ಥನೆಗಳ ಪ್ರಭಾವವು ಬೆಂಕಿ ಹಾಗೂ ನೀರಿಗಿಂತಲೂ ಅಧಿಕವಾಗಿದೆ. ಅಲ್ಲದಲೇ ಐಹಿಕ ವಸ್ತುಗಳಲ್ಲಿ ಪ್ರಾರ್ಥನೆಗಿಂತ ಪ್ರಭಾವಬೀರುವ ಯಾವ ವಸ್ತುವೂ ಇಲ್ಲ. (ಬರಕಾತುದ್ದುಆ, ರೂಹಾನಿ ಖಝಾಇನ್, ಸಂಪುಟ–6, ಪುಟ–10)

ಸಭಿಕರೇ! ಅಲ್ಲಾಹನು ತನ್ನ ಅಸ್ತಿತ್ವವನ್ನು ಸಾಬೀತುಪಡಿಸಲು ತನ್ನ ಪ್ರವಾದಿಗಳ ಪ್ರಾರ್ಥನೆಗಳನ್ನು ಅತ್ಯಧಿಕವಾಗಿ ಸ್ವೀಕರಿಸುತ್ತಾನೆ. ಈ ವಿಷಯವು ಎಷ್ಟೊಂದು ವಿಸ್ತೃತವಾಗಿದೆ ಎಂದರೆ ಎಲ್ಲಾ ಘಟನೆಗಳನ್ನು ವಿವರಿಸುವುದು ಸಮುದ್ರವನ್ನು ಮಡಕೆಯಲ್ಲಿ ಸೇರಿಸುವಂತಾಗುವುದು. ದರೂ ತಾನೇ ಕೆಲ ವಿಶ್ವಾಸವರ್ಧಕ ಘಟನೆಗಳನ್ನು ಉದಾಹರಣೆ ರೂಪದಲ್ಲಿ ಪ್ರಸ್ತುತಪಡಿಸುವೆನು.

ಸಯ್ಯದನಾ ಹಝ್ರತ್ ಮುಹಮ್ಮದ್ ಮುಸ್ತಫಾ (ಸ) ಪ್ರವಾದಿತ್ವದ ದಾವೆ ಹೂಡಿದಾಗ ಅವರನ್ನು ಸದೂಖ್ ಮತ್ತು ಆಮೀನ್ ಅಂದರೆ ಸತ್ಯವಂತನು ಪ್ರಮಾಣಿಕನು ಎಂದು ಕರೆಯುತ್ತಿದ್ದ ಸಮುದಯವೆ ಅವರನ್ನು ಕೇವಲ ತಿರಸ್ಕರಿಸಲಿಲ್ಲ. ಬದಲು ಅವರನ್ನು (ಸ) ಮತ್ತು ಅವರ ಅನುಯಾಯಿಗಳನ್ನು ಅತ್ಯಮತ ಕರುಣಾಜನಕ ಕಷ್ಟಗಳನ್ನು ಒಡ್ಡಿತು. ಅವರ ಹತ್ಯೆಗೆ ಸಂಚು ಹೂಡಿದರು. ಅವರ ಎಷ್ಟೋ ಸಗಡಿಗರ ಹತ್ಯೆಯು ಮಾಡಿದರು. ಈ ಬರ್ಬರತೆಯಲ್ಲಿ ಅತ್ಯಧಿಕ ಮುಂದಾಳತ್ವ ವಹಿಸಿದರು. ಮಕ್ಕದ ಇಬ್ಬರು ಪ್ರಭಾವಿ ಸರದರುಗಳಾಗಿದ್ದರು. ಒಬ್ಬರು ಉಮ್ರೋ ಬಿನ್ ಹಶ್ಯಾಮ್ (ಅಬೂಜಹಲ್) ಇನ್ನೊಬ್ಬರು ಉಮರ್ ಬಿನ್ ಖತ್ತಾಬ್. ಹಝ್ರತ್ ರಸೂಲುಲ್ಲಾಹ್ (ಸ) ಅಲ್ಲಾಹನ ಆಸ್ಥಾನದಲ್ಲಿ ಈ ಪ್ರಾರ್ಥನೆ ಮಾಡಿದರು. "ಓ ಅಲ್ಲಾಹ್" ಈ ಇಬ್ಬರಲ್ಲಿ ಉಮ್ರೋ ಬಿನ್ ಹಶ್ಯಾಮ್ ಮತ್ತು ಉಮರ್ ಬಿನ್ ಖತ್ತಾಬ್‌ರವರಲ್ಲಿ ಯಾರೊಬ್ಬರನ್ನು (ನಿನಗೆ ಇಷ್ಟಯುಳ್ಳವರು) ಇಸ್ಲಾಂ ಧರ್ಮವನ್ನು ಗೌರವಿಸುವ ಮತ್ತು ಬಲವನ್ನು ನೀಡುವ ಭಾಗ್ಯ ದಯಪಾಲಿಸು." (ತಿರ್ಮಿಧಿ ಕಿತಾಬುಲ್ ಮನಾಖಿಬ್, ಬಾಬ್ 18).

ಮತ್ತೆ ಲೋಕವು ನೋಡುವಂತಾಯಿತು. ಅಲ್ಲಾಹನು ಅವರ (ಸ) ಪ್ರಾರ್ಥನೆಯನ್ನು ಎಷ್ಟೊಂದು ಅದ್ಭುತ ರೀತಿಯಲಿಲ ಪವಾಡ ರೀತಿಯಲ್ಲಿ ಸ್ವೀಕರಿದರೆಂದರೆ, ನಮ್ಮ ಮನೆಯಿಂದ ಖಡ್ಗ ಹಿಡಿದು ರಸೂಲುಲ್ಲಾಹ್ (ಸ) ರವರನ್ನು ಹತ್ಯೆ ಮಾಡಲು ಹೊರಟ ಉಮರ್ ಸ್ವಯಂ ಪವಿತ್ರ ಖುರ್‌ಆನಿನ ವೈಭವಯುತ ಮಾರ್ಗದರ್ಶನ ಮತ್ತು ಖಡ್ಗರೂಪಿ ಪ್ರಾರ್ಥನೆಯಿಂದ ಗಾಯಗೊಂಡು ಮುಸಲ್ಮಾನರಾದರು. ಅವರಿಂದ ಮುಸಲ್ಮಾನರ ಶಕ್ತಿ ವರ್ಧಿಸಿತು. ಮಕ್ಕ ಅವಿಶ್ವಾಸಿಗಳು ಮುಸಲ್ಮಾನರಿಗೆ ಅವಿರತ ಕಷ್ಟಗಳಿಗೆ ಸಿಲುಕಿಸಿದಾಗ, ವಿವಶರಾಗಿ ಹಝ್ರತ್ ರಸೂಲುಲ್ಲಾಹ್ (ಸ) ಮತ್ತು ಅವರ ಸಮಗಡಿಗರು ಮಕ್ಕದಿಂದ ಹಿಜರತ್ ಮಾಡಿ (ವಲಸೆ ಬಂದು) ಮದೀನಾ ಸೇರಿದರು. ಮದೀನಾ ಮಕ್ಕ ಅವಿಶ್ವಾಸಿಗಳು ಮದೀನಾ ಮೇಲೆ ಹಲ್ಲೆ ಹೂಡಿ ಮುಸಲ್ಮಾನರಿಗೆ ಅಳಿಸಿ ಹಾಕಬಯಸಿದರು. ಆ ಸಮಯ ಖದರ್ ಸ್ಥಾನದಲ್ಲಿ ನಡೆದ ಯುದ್ಧದಲ್ಲಿ ಮುಸಲ್ಮಾನರ ಸಂಖ್ಯೆ ಕೇವಲ 313 ಆಗಿತ್ತು. ಅಲ್ಲದೇ ಅವರ ಬಳಿ ಯಾವ ಅಸ್ತ್ರಗಳು ಸಹ ಇರಲಿಲ್ಲ. ಎದುರಾಳಿಗಳು ಅನುಭವಿ ಯೋಧಗಳು ಮತ್ತು ಯುದ್ಧಾಸ್ತ್ರಗಳಿಂದ ಸುಸಜ್ಜಿತರಾಗಿ ಬಂದಿದ್ದರು. ಆ ಸಂದರ್ಭದಲ್ಲಿ ಹಝ್ರತ್ ರಸೂಲುಲ್ಲಾಹ್ (ಸ) ಅತ್ಯಮತ ವಿಚಲಿತಗೊಂಡು ಅಲ್ಲಾಹನಲ್ಲಿ ಹೀಗೆ ಬೇಡಿಕೊಮಡರು. "ಓ ನನ್ನ ಒಡೆಯ ಇಂದು ನೀನು ಈ ಸಣ್ಣದಾದ ಜಮಾಅತನ್ನು ವಿನಾಶಗೊಳಿಸಿದರೆ, ಯಾರು ಇನ್ನ ಆರಾಧಕರಾಗಿರುವರು" (ಬುಖಾರಿ ಕಿತಾಬುಲ್ ಮಗ್ಹಾಝಿ ಬಾಬ್ 4)

ಬದರಿನ ಗುಡಿಸಲಿನಲ್ಲಿ ಮಾಡಲ್ಪಟ್ಟ ಈ ದುಆ (ಪ್ರಾರ್ಥನೆ) ಅಲ್ಲಾಹನ ಆಸ್ಥಾನದಲ್ಲಿ ಸ್ವೀಕೃತರಾದಾಗ ಅವನು ಒಂದು ಮುಷ್ಟಿ ತುಂಬ ಕಲ್ಲುಬಂಚಿಯಿಂದಲೇ ಭೂಕಂಪ ರೀತಿಯಲ್ಲಿ ವಾತಾವರಣ

ಬದಲಾಯಿಸಿಬಿಟ್ಟ, 313 ನಿಶಸ್ತ್ರ ಮುಸಲ್ಮಾನರನ್ನು ಅವಿಶ್ವಾಸಿಗಳ ಒಂದು ಸಾವಿರ ಶಸ್ತ್ರಸಜ್ಜಿತ ಸೈನ್ಯಗಳ ಮೇಲೆ ವಿಜಯ ಪಡೆಯುವಂತೆ ಮಾಡಿದರು.

ಮಹನಿಯರೇ ! ಜೀವಂತ ದೇವಾಸ್ತಿತ್ವದ ಇನ್ನೊಂದು ಘಟನೆ ಹಝ್ರತ್ ರಸೂಲುಲ್ಲಾಹ್ (ಸ) ಜೀವಿತದಲ್ಲಿಯೇ ಘಟಿಸಿತು. ಇರಾನಿನ ದೊರೆ ಖುಸ್ರೋ ಏಕವೇಝ್ ದ್ವಿತೀಯ ಯಹೂದಿಯರ ಇಂಬು ಪಡೆದು ಹಝ್ರತ್ ರಸೂಲುಲ್ಲಾಹ್ (ಸ) ರವರನ್ನು ಬಂಧಿಸಿ ತರುವ ಆಜ್ಞೆ ತನ್ನ ಯಮನಿನ ರಾಜ್ಯಪಾಲ ಖಾಝಾನ್‌ನನ್ನು ಕಳುಹಿಸಿದನು. ಆ ಪ್ರವಾದಿತ್ವದ ದಾವೆ ಹೂಡಿದ ಮುಹಮ್ಮದ್ (ಸ) ರವರನ್ನು ಬಂಧಿಸಿ ನನ್ನ ಬಳಿ ಕಳುಹಿಸಬೇಕು ಎಂದು. ಅಂದ ಹಾಗೆ ಖಾಝೂನನು ಎರಡು ಸಿಪಾಯಿಗಳನ್ನು ಮದೀನಾ ಹೋಗಿ ಅವರನ್ನು (ಸ) ಬಂಧಿಸಿ ತರಲು ಕಳುಹಿಸಿದರು. ಆ ಸಿಪಾಯಿಗಳು ಹಜ್‌ರತ್ ರಸೂಲುಲ್ಲಾಹ್ (ಸ) ರವರನ್ನು ಈ ಆಜ್ಞೆ ಆಲಿಸಿಕೊಟ್ಟರು. ಮತ್ತು ಜೊತೆಯಲ್ಲಿ ಈ ಎಚ್ಚರಿಕೆಯು ಈಡಿದರು. ನೀವು (ಸ) ಇರಾನಿನ ದೊರೆಯ ಆಜ್ಞೆಯನ್ನೇನಾದರೂ ನಿರ್ಲಕ್ಷಿಸಿದರೆ ಅವನು ನಿಮಗೆ (ಸ) ಮತ್ತು ನಿಮ್ಮ ದೇಶವನ್ನು ನಾಶಗೊಳಿಸುವನು. ಅವರು (ಸ) ಅವರಿಗೆ ಉತ್ತರ ಕೊಟ್ಟರು. ನೀವು ನಾಳೆ ಬೆಳಿಗ್ಗೆ ಬಂದು ನನಗೆ ಭೇಟಿಯಾಗಬೇಕು. ಅಂದಹಾಗೆ ಅವರು ರಾತ್ರಿ ಅಲ್ಲಾಹನಲ್ಲಿ ಪ್ರಾರ್ಥಿಸಿದರು. ಆಗ ಪ್ರತಾಪಶಾಲಿ ದೇವನು ಅವರಿಗೆ (ಸ) ಸುದ್ದಿ ನೀಡಿದರು. ಇರಾನಿನ ದೊರೆಯ ಅಸಭತೆಯ ಶಿಕ್ಷೆರೂಪದಲ್ಲಿ ನಾವು ಅವನ ಸ್ಥಾನದಲಿಲ ಅವನ ಪುತ್ರನನ್ನು ನಿಯುಕ್ತಗೊಳಿಸಿದೆವು ಅಂದಹಾಗೆ ಮುಂಜಾನೆ ಅವರು (ಸ) ಆ ಇಬ್ಬರೂ ಸಿಪಾಯಿಗಳಿಗೆ ಸಮದೇಶ ತಲುಪಿಸಿದರು. ಹೋಗಿ ಇಂದು ರಾತ್ರಿ ನನ್ನ ಪ್ರಭೂ ನಿಮ್ಮ ಪ್ರಭೂವನ್ನು ಹತ್ಯೆ ಆಡಿ ತೆಗೆದುಹಾಕಿದ್ದಾನೆ. ಹಾಗೆಯೇ ಆಯಿತು. ಯಾವ ರಾತ್ರಿ ಹಝ್ರತ್ ರಸೂಲುಲ್ಲಾಹ್ (ಸ) ರವರನ್ನು ಅಲ್ಲಾಹನು ಇರಾನಿನ ದೊರೆಯು ಹತ್ಯೆಯ ಸುಳಿವು ನೀಡಿದ್ದನು. ಅದೇ ರಾತ್ರಿ ಅವನ ಮಗ ಶೇರುವಿಯ ಅವರನ್ನು ಇಂಗ್ಲೀಷ್‌ನಲ್ಲಿ Siross ಎಂದು ಕರೆಯುತ್ತಾರೆ. ಹತ್ಯೆ ಮಾಡಿ ಸರಕಾರ ತನ್ನ ಕೈಗೆ ಎತ್ತಿಕೊಂಡಿದ್ದನು ಮತ್ತು ಯಮನಿನ ರಾಜ್ಯಪಾಲನನ್ನು ನಿರ್ದೇಶನ ನೀಡಿದರು. ನನ್ನ ತಂದೆ ಯಾವ ಪ್ರವಾದಿತ್ವದ ದಾವೆದಾರರನ್ನು ಬಂಧಿಸುವ ಆಜ್ಞೆ ನೀಡಿದ್ದನು. ಅದನ್ನು ರದ್ದುಗೊಳಿಸಲಾಗಿದೆ. ಸುಬ್ಹಾನಲ್ಲಾಹ್ !.

ಈ ಸುದ್ಧಿಯನ್ನು ಕೇಳೀ ಕೇವಲ ಯಮವಿನ ರಾಜ್ಯಪಾಲರು ಮಾತ್ರವಲ್ಲ. ಆ ಕ್ಷೇತ್ರದಲ್ಲಿ ವಾಸಿಸುವ ಹಲವು ಇರಾಇ ಪ್ರಜೆಗಳು ಇಸ್ಲಾಂ ಸ್ವೀಕರಿಸಿದರು.

ಆದರಣೀಯ ಸಭಿಕರೇ! ಪ್ರಾರ್ಥನೆ ಸ್ವೀಕಾರರ ಈ ಘಟನೆಗಳು ಕೇವಲ ಗತಿಸಿಹೋದ ಕಾಲಗಳ ಮಾತುಗಳಲ್ಲ. ಬದಲು ಅಲ್ಲಾಹನು ತನ್ನ ಜೀವಂತಿಕೆಯ ಪುರಾವೆಯಾಗಿ ನಮ್ಮ ಕಾಲದಲ್ಲೂ ಹಝ್ರತ್ ರಸೂಲುಲ್ಲಾಹ್ (ಸ) ರವರ ಸತ್ಯಪ್ರೇಮಿಗಳಾದ ಮತ್ತು ಅವರ ಗುಲಾಮರಾದ ಸಯ್ಯದನಾ ಹಝ್ರತ್ ಮಿರ್ಝಾ ಗುಲಾಂ ಅಹಮ್ಮದ್ ಖಾದಿಯಾನಿ(ಅ) ರವರನ್ನು ಕಳುಹಿಸಿದನು. ಅವರು ಹೇಳುತ್ತಾರೆ.

"ನಮ್ಮ ಜೀವಂತನೂ ನೆಲೆನಿಲ್ಲುವವನಾದ ಭವಗಂತನು ನಮ್ಮ ಜೊತೆ ಮನುಷ್ಯನ ರೀತಿಯಲ್ಲಿ ಮಾತನಾಡುತ್ತಾನೆ. ನಾವು ಒಂದು ಮಾತನ್ನು ಕೇಳಿದರೆ ಮತ್ತು ದುಆ (ಪ್ರಾರ್ಥನೆ) ಮಾಡಿದರೆ ಅವನು ದೇವತ್ವ ಆಧಾರಿತ ಪದಗಳಲ್ಲಿ ಉತ್ತರ ನೀಡುವನು. ಈ ಮಾತುಕತೆಯ ಶೃಂಖಲೆ ಸಾವಿರ ಸಲದಷ್ಟು ಮುಂದುವರೆದರೂ ಆಗಲೂ ಅವನು ಉತ್ತರ ನೀಡುವುದರಿಂದ ಬೇರ್ಪಡುವುದಿಲ್ಲ. ಅವನು ತನ್ನ ಸಂಭಾಷಣೆಯಲ್ಲಿ ಅದ್ಭುತಕರವಾದ ಮಾತುಗಳನ್ನು ಸ್ಪಷ್ಟಪಡಿಸುವನು ಮತ್ತು ಪವಾಡ ರೀತಿಯ ದೇವವಿಧಿತ್ವದ ದೃಶ್ಯಗಳನ್ನು ತೋರಿಸುವನು. ಈ ರೀತಿ ಅವನು ತನ್ನ ಅಸ್ತಿತ್ವದ ಪುರಾವೆಯನ್ನು ಒದಗಿಸಿಕೊಡುವವನಾಗಿದ್ದಾನೆ. (ನಸೀಮ ದಾವತ್, ರೂಹಾನಿ ಝುಝಾಈನ್, ಸಂಪುಟ–19, ಪುಟ–82)

ಅಲ್ಲಾಹನ ಅಸ್ತಿತ್ವದ ಪುರಾವೆಯಗಿ ಅವರು ತನ್ನ ಗ್ರಂಥ ಹಖೀಖತುಲ್ ವಹಿಯಲ್ಲಿ ಎರಡು ನೂರಾ ಎಂಟು ದೃಷ್ಟಾಂತಗಳನ್ನು ನಮೂದಿಸುವರು. ಅವುಗಳಲ್ಲಿ ಕೇವಲ ಒಂದು ದೃಷ್ಟಾಂತ ಪ್ರಾರ್ಥನೆ ಸ್ವೀಕಾರ ಕುರಿತಾಗಿರುವ ಅದು ಅಲ್ಲಾಹನ ಜೀವಂತ ಅಸ್ತಿತ್ವಕ್ಕೆ ಪುರಾವೆ ಆಗಿದೆ, ಪ್ರಸ್ತುತಪಡಿಸುತ್ತೇನೆ. ಅವರು ಹೇಳುತ್ತಾರೆ. ಅಬ್ದುಲ್ ಕರೀಮ್ ತಂದೆ ಅಬ್ದುಲ್ ರಹ್ಮಾನ್ ಹೈದರಾಬಾದ್ ದಖನ್ ನಿವಾಸಿ ನಮ್ಮ ಶಾಲೆಯಲ್ಲಿ ವಿದ್ಯಾರ್ಥಿ ಆಗಿದ್ದಾರೆ. ಆಕಸ್ಮಾತ್ತಾಗಿ ಅವನಿಗೆ ಹುಚ್ಚುನಾಯಿ ಕಡಿಯಿತು. ನಾವು ಅವನ ಚಿಕಿತ್ಸೆಗಾಗಿ ಕಸೂಲಿಗೆ ಕಳುಹಿಸಿದೆವು. ಅಲ್ಲಿ ಕೆಲ ದಿವಸಗಳವರೆಗೆ ಚಿಕಿತ್ಸೆ ನಡೆಯಿತು. ಮತ್ತೆ ಖಾದಿಯನಿಗೆ ಮರಳಿ ಬಂದನು. ಕೆಲವೆ ದಿನ ಕಳೆದಿರಬೇಕು. ಮತ್ತೆ ಅದೇ ಹುಚ್ಚುತನದ ಪ್ರಭಾವಗಳು (ಅದು ಹುಚ್ಚುನಾಯಿಯ ಕಡಿತದಿಂದ ಆಗುವಂತದ್ದಾಗಿದೆ) ಪ್ರಕಟಗೊಂಡವು. ಅವನು ನೀರಿನಿಂದ ಹೆದರತೊಡಗಿದ ಮತ್ತು ಸ್ಥಿತಿ ಗಂಭೀರವಾಯಿತು. ಆಗ ಆ ಪರದೇಶಿಗಾಗಿ ನನ್ನ ಹೃದಯದಲ್ಲಿ ತುಂಬ ನೋವುಂಟಾಯಿತು. ಮತ್ತು ಪ್ರಾರ್ಥನೆಗೋಸ್ಕರ ಒಂದು ವಿಶೇಷ ರೀತಿಯ ಗಮನಹರಿಯಿತು, ಪ್ರತಿಯೊಬ್ಬನು ಆ ಪರದೇಸಿ ಕೆಲ ಗಂಟೆಯಲ್ಲಿ ಸಾಯಬಹುದು ಎನಿಸಿಕೊಂಡಿದ್ದರು. ಬೇರೆ ಮಾರ್ಗವಿಲ್ಲದೆ ಅವರಿಗೆ ಬೋರ್ಡಿಂಗ್‌ನಿಂದ ಪ್ರತ್ಯೇಕ ಒಂದು ಮನೆಯಲ್ಲಿ ಎಲ್ಲ ರೀತಿಯ ಜಾಗ್ರತೆಯೊಂದಿಗೆ ಇರಿಸಲಾಯಿತು. ಕಸೂಲಿಯ ಬ್ರಿಟಿಷ್ ಡಾಕ್ಟರುಗಳ ಬಳಿಗೆ ತಂತಿ ಸಂದೇಶ ಕಳುಹಿಸಲಾಯಿತು. ಮತ್ತು ಕೇಳಲಾಯಿತು. ಇಂತಹ ಸ್ಥಿತಿಯಲ್ಲಿ ಏನಾದರೂ ಚಿಕಿತ್ಸೆ ಇದೆಯೇ? ಆ ಕಡೆಯಿಂದ ತಂತಿ ಮೂಲಕ ಉತ್ತರ ಬಂತು. Sorry Nothing can be done for Abdul Kareem ಅಂದರೆ ಈ ಸ್ಥಿತಿಯಲ್ಲಿ ಅಬ್ದುಲ್ ಕರೀಮ್‌ಗೋಸ್ಕರ ಏನು ಮಾಡಲು ಸಾಧ್ಯವಿಲ್ಲ. ಅದಕ್ಕೆ ಯಾವ ಚಿಕಿತ್ಸೆಯೂ ಇಲ್ಲ. ಆದರೆ ಆ ಬಡವ ಪರದೇಸಿಗಾಗಿ ನನ್ನ ಹೃದಯ ವ್ಯಾಕುಲಗೊಂಡಿತು. ನನ್ನ ಮಿತ್ರರು ಸಹ ಅವನಿಗಾಗಿ ಪ್ರಾರ್ಥಿಸಲು ತುಂಬಾ ಆಗ್ರಹಿಸಿದರು. ಏಕೆಂದರೆ ಪರದೇಸಿ ಆ ಹುಡುಗನ ಸ್ಥಿತಿ ತುಂಬಾ ದಯನೀಯವಾಗಿತ್ತು. ಒಂದು ವೇಳೆ ಅವನು ತೀರಿ ಹೋದರೆ ಶತ್ರುಗಳಿಗೆ ಖುಷಿಪಡುವ ಭಯ ಆವರಿಸಿತು. ಆಗ ನನ್ನ ಹೃದಯ ತುಂಬಾ ವ್ಯಾಕುಲಗೊಂಡು ಪ್ರಾರ್ಥಿಸಲು ಪವಾಡ ರೀತಿಯ ಕಳಕಳಿಯ ಸ್ಥಿತಿ ಹುಟ್ಟಿತ್ತು. ಅಲ್ಲಾಹನಿಂದ ಒದಗಿ ಬಂದ ಇಂತಹ ಸ್ಥಿತಿಯು ತುಂಬಾ ಪ್ರಭಾವ ಒಳಗೊಂಡಿರುತ್ತದೆ. ಅದರಿಂದ ಒಬ್ಬರು ಮೃತರು ಜೀವ ಪಡೆಯಬಹುದಾಗಿದೆ. ಅಂದರೆ ಅವನಿಗಾಗಿ ಅಲ್ಲಾಹನ ಕಡೆಯಿಂದ ಇಂತಹ ಸ್ಥಿತಿ ಲಭಿಸಿತು. ಆ ರೀತಿಯ ಗಮನ ಉಂಟಾದಾಗ ವ್ಯಾಕುಲತೆಯು ಸಂಪೂರ್ಣ ಹೃದಯವನ್ನು ಅಲ್ಲಾಡಿಸಿತು. ಆಗ ಆ ರೋಗಿ ನಿಜ ಅರ್ಥದಲ್ಲಿ ಮೃತನಾಗಿದ್ದ ಹಾಗೆ, ಈ ರೀತಿಯ ಪ್ರಭಾವದಿಂದಾಗಿ ಮರು ಜೀವನದ ಪ್ರಭಾವ ಕಂಡುಬರಲು ಪ್ರಾರಂಭವಾಯಿತು. ಅವನು ನೀರಿನಿಂದ ಹೆದರುವ ಪ್ರಕಾಶದಿಂದ ದೂರ ಓಡಿ ಹೊಗುವ ಸ್ಥಿತಿ ಪರಿವರ್ತನೆಗೊಂಡು ಆರೋಗ್ಯ ಸುಧಾರಿಸತೊಡಗಿತು. ಮತ್ತು ಅವನು ಹೇಳಿದನು. ಈಗ ನನಗೆ ನೀರಿನಿಂದ ಹೆದರಿಕೆಯಾಗುತ್ತಿಲ್ಲ. ಆಗ ಅವನಿಗೆ ನೀರು ಕೊಡಲಾಯಿತು. ಹೆದರಿಕೆಯಿಲ್ಲದೇ ನೀರು ಕುಡಿದನು. ನೀರಿನಿಂದ ನಿದ್ರೆಯು ಮಾಡಿದನು. ಅಂತೂ ಆ ಭಯಾನಕ ಮತ್ತು ಮೃಗ ರೀತಿಯ ಸ್ಥಿತಿ ದೂರವಾಯಿತು. ಕೆಲವೇ ದಿನಗಳಲ್ಲಿ ಸಂಪೂರ್ ಆರೋಗ್ಯ ದೊರೆಯಿತು. ನನ್ನ ಹೃದಯದಲ್ಲಿ ತಕ್ಷಣದಿಂದ ಹಾರಲಾಯಿತು. ಆ ಹುಚ್ಚುತನದ ಸ್ತಿತಿ ಅವನನ್ನು ಮರಣ ಹೊಂದಲು ಉಂಟಾಗಿರಲಿಲ್ಲ. ಬದಲು ಅಲ್ಲಾಹನು ಒಂದು ದೃಷ್ಟಾಂತವನ್ನು ತೋರಿಸಬಯಸಿದ್ದನು. ಅನುಭವಸ್ಥ ಜನರು ಹೇಳುತ್ತಾರೆ. ಒಬ್ಬನಿಗೆ ಹುಚ್ಚುನಾಯಿ ಕಡಿತದಿಂದಾಗಿ ಅವನಲ್ಲಿ ಹುಚ್ಚುತನದ ಕುರುಹುಗಳು ಗೋಚರವಾದರೆ ಮತ್ತೆ ಅವನು ಬದುಕುಳಿಯುವುದು ಅಸಾಧ್ಯವಾದ ಮಾತು. (ಹಖೀಖತುಲ್ ವಹಿ, ರೂಹಾನಿ ಖಝಾಈನ್, ಸಂಪುಟ–22, ಪುಟ–480)

ಮಹನಿಯರೇ! ಹಝ್ರತ್ ಮಸೀಹ್ ಮೌಊದ್(ಅ) ರವರು ಆಗಮಿಸಿದ ನಂತರ ಅಹ್ಮದಿಯ ಜಮಾಅತಿನಲ್ಲಿ ಪ್ರವಾದಿತ್ವ ಅಡಿಯಲ್ಲಿ ಖಿಲಾಫತ್ ಸ್ಥಾಪನೆಯಾಯಿತು. ಮತ್ತು ಅಹ್ಮದಿಅತ್ತಿನ ಖಲೀಫರುಗಳ ಮೂಲಕವು ಸಹ ಅಲ್ಲಾಹನು ಪ್ರಾರ್ಥನೆ ಸ್ವೀಕರಿಸುವ ಮೂಲಕ ತನ್ನ ಅಸ್ತಿತ್ವದ ಪುರಾವೆಯನ್ನು ಒದಗಿಸುತ್ತಿದ್ದಾನೆ. ಸಮಯ ಅಭಾವದಿಂದಾಗಿ ಪ್ರತ್ಯೇಕ ಪ್ರತ್ಯೇಕ ಕೆಲ ಘಟನೆಗಳು ಮಾತ್ರ ಪ್ರಸ್ತುತಪಡಿಸಲಾಗುವುದು.

ಹಝ್ರತ್ ಮೌಲಾನ ನೂರುದ್ದೀನ್ ಖಲೀಫತುಲ್ ಮಸೀಹ್ ಪ್ರಥಮರ(ರ) ಕಾಲದ ಮಾತಾಗಿದೆ. ಹಝ್ರತ್ ಚೌಧರಿ ಹಾಕೀಮ್ ದೀನ್ ಸಾಹಿಬ್ ಖಾದಿಯಾನಿನ ಬೋರ್ಡಿಂಗ್‌ನಲ್ಲಿ ಒಬ್ಬ ಸೇವಕರಾಗಿದ್ದರು. ಅವರ ಮೊದಲ ಶಿಶುವಿನ ಜನ್ಮದ ಸಮಯ ಅವರ ಪತ್ನಿಯ ನೋವಿನ ಸಂಕಟ ತೀರ ಹೆಚ್ಚಾಯಿತು. ಅವರು ವಿವರಣೆ ನೀಡುತ್ತಾರೆ. ಈ ಸ್ಥಿತಿಯಲ್ಲಿ ಬೇರೆ ಯಾವುದೇ ಮಾರ್ಗವಿಲ್ಲದೆ ರಾತ್ರಿ ಹನ್ನೊಂದು ಗಂಟೆಗೆ ಹಝ್ರತ್ ಖಲೀಫತುಲ್ ಮಸೀಹ್ ಅವರ ಮನೆಗೆ ಹೋಗಿ ಚೌಕಿದಾರನಿಗೆ ಕೇಳಿದೆ. ನಾನು ಈ ಸಮಯ ಹುಝೂರರನ್ನು ಭೇಟಿಯಾಗಬಹುದೆ? ಚೌಕೀದಾರ ಇಲ್ಲ ಎಂದು ಉತ್ತರ ನೀಡಿದನು. ಆದರೆ ಹುಝೂರ್ ನನ್ನ ಸ್ವರ ಕೇಳಿ

ನನ್ನನ್ನು ಒಳಗೆ ಕರೆಯಿಸಿಕೊಂಡರು. ನಾನು ನನ್ನ ಪತ್ನಿಯ ನೋವಿನ ಸ್ಥಿತಿ ವಿವರಿಸದೆನು. ಅವರು ಖರ್ಜೂರದ ಮೇಲೆ ದುಆ ಪಠಿಸಿ ನನಗೆ ಕೊಟ್ಟು ಹೇಳಿದರು. ಇದನ್ನು ಹೋಗಿ ನಿಮ್ಮ ಪತ್ನಿಗೆ ತಿನ್ನಿಸಿ, ಮಗುವಿನ ಜನ್ಮವಾದಾಗ ನನಗೆ ಬಂದು ತಿಳಿಸಿ. ಹಝ್ರತ್ ಹಾಕಿಮ್ ದೀನ್ ಹೇಳುತ್ತಾರೆ. ನಾನು ಆ ಖರ್ಜೂರವನ್ನು ನನ್ನ ಪತ್ನಿಗೆ ತಿನ್ನಿಸಿದೆ. ಆ ಖರ್ಜೂರ ಅದ್ಭುತ ರೀತಿಯ ಪವಾಡ ಸೃಷ್ಟಿಸಿತು. ಸ್ವಲ್ಪ ಸಮಯದಲ್ಲೇ ಹೆಣ್ಣು ಮಗುವಿನ ಜನ್ಮವಾಯಿತು. ಅವರು ಹೇಳುತ್ತಾರೆ ನಾನು ಈ ರಾತ್ರಿಯಲ್ಲಿ ಹೋಗಿ ಹುಝೂರ್‌ರನ್ನು ಎಬ್ಬಿಸುವುದು ಒಳ್ಳೆಯದಲ್ಲ ಎಂದು ಭಾವಿಸಿದೆನು. ಅವರು ಮಲಗಿರಬಹುದು ಎಂದು ಭಾವಿಸಿದೆ. ಮುಂಜಾನೆ ಫಝುರ್ ನಮಾಝಿಗೆ ಹಾಜರಾಗಿ ಸ್ಥಿತಿಯನ್ನು ವಿವರಿಸಿದೆನು. ಹುಝೂರ್ ಹೇಳಿದರು. ಮಗು ಜನ್ಮವಾದ ನಂತರ ನೀವು ದಂಪತಿಗಳು ಹಾಯಾಗಿ ಮಲಗಿದ್ದೀರಿ. ನನಗೆ ಬಂದು ತಿಳಿಸಿದ್ದರೆ ನಾನೂ ಸಹ ಆರಾಮ ಮಾಡಬಹುದಿತ್ತು. ನಾನು ರಾತ್ರಿಯಿಡೀ ನಿಮ್ಮ ಪತ್ನಿಗೋಸ್ಕರ ಪ್ರಾರ್ಥಿಸುತ್ತಿದ್ದೆ. ಈ ಘಟನೆ ವಿವರಿಸುತ್ತ ಹಾಕಿಮ್ ದೀನ್ ಸಾಹಿಬ್ ಅತ್ತುಬಿಟ್ಟರು. ಮತ್ತು ಹೇಳಿದರು. ಎಲ್ಲಿಯ ನೌಕರ ಹಾಕಿಮ್ ದೀನ್ ಮತ್ತು ಎಲ್ಲಿಯ ಮಹೋನ್ನತ ನೂರುದ್ದೀನ್. (ದಿನಪತ್ರಿಕೆ ಅಲ್ ಫಝುಲ್, ಪುಟ–43).

ಇದಾಗಿದೆ ಅಹ್ಮದಿಯಾ ಖಲೀಫರುಗಳ ಮಹಿಮೆ ಅವರು ತಮ್ಮ ಜಮಾಅತ್ ಬಾಂಧವರಿಗಾಗಿ ಅಷ್ಟೊಂದು ಕಾಳಜಿ ಪ್ರೀತಿಯನ್ನು ಹೊಂದಿರುತ್ತಾರೆ. ಅವರ ದುಃಖಗಳನ್ನು ತನ್ನ ಎದೆಗೂಡಿನಲ್ಲಿ ಬಚ್ಚಿಟ್ಟುಕೊಂಡು ಅವರ ಆಯುರಾರೋಗ್ಯಕ್ಕಾಗಿ ರಾತ್ರಿಯೀಡಿ ಬಿಕ್ಕಿ ಬಿಕ್ಕಿ ಪ್ರಾರ್ಥಿಸುತ್ತಾರೆ. ಅದೇ ರೀತಿಯ ಪ್ರತಿಕ್ರಿಯೆ ಹಝ್ರತ್ ಖಲಿಫತುಲ್ ಮಸೀಹ್ ಸಾನಿ (ದ್ವಿತೀಯರು) (ರ) ಒಂದು ಸಂಧರ್ಭದಲ್ಲಿ ತನ್ನ ಜಮಾಅತನ್ನು ಸಂಬೋಧಿಸಿ ಹೇಳಿದ್ದರು.

ನಿಮಗಾಗಿ ಒಬ್ಬ ವ್ಯಕ್ತಿ ಕಾಳಜಿ ವಹಿಸುವವನಿದ್ದಾನೆ. ನಿಮ್ಮ ಬಗ್ಗೆ ಪ್ರೀತಿ ಹೊಂದಿದವನಾಗಿದ್ದಾನೆ. ನಿಮ್ಮ ದುಃಖಗಳನ್ನು ತನ್ನ ದುಃಖಗಳೆಂದು ಭಾವಿಸುವವನಿದ್ದಾನೆ. ನಿಮ್ಮ ಕಷ್ಟಗಳನ್ನು ತಮ್ಮ ಕಷ್ಟಗಳೆಂದು ಭಾವಿಸಿ ನಿಮಗಾಗಿ ಅಲ್ಲಾಹನ ಆಸ್ಥಾನದಲ್ಲಿ ಪ್ರಾರ್ಥಿಸುವವನಿದ್ದಾನೆ. ಮತ್ತು ನಿಮಗಾಗಿ ತನ್ನ ಪ್ರಭುವಿನ ಮುಂದೆ ವ್ಯಾಕುಲತೆಯನ್ನು ವ್ಯಕ್ತಪಡಿಸುವನಿದ್ದಾನೆ."

ಹಝ್ರತ್ ಸಯ್ಯದ್ ಮಹರ್ ಆಪಾ ಹೇಳುತ್ತಾರೆ. 1953 ರ ದಂಗೆಯ ಕಾಲದಲ್ಲಿ ಕೇವಲ ಅಹ್ಮದಿಅತ್ತಿನ ದ್ವೇಷದ ಕಾರಣದಿಂದಾಗಿ ಹಝ್ರತ್ ಮಿಯಾ ನಾಸಿರ್ ಅಹ್ಮದ್ ಸಾಹಿಬ್ (ಖಲೀಫತುಲ್ ಮಸೀಹ್ ಸಾಲಿಸ್) ಮತ್ತು ಹಝ್ರತ್ ಮಿರ್ಝಾ ಶರೀಫ್ ಅಹ್ಮದ್ ಸಾಹಿಬ್(ರ) ಅವರುಗಳನ್ನು ಸೆರೆಹಿಡಿಯಲಾಗಿತ್ತು. ರಾತ್ರಿಯ ಊಟದ ಸಮಯವಾದಾಗ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳಿದರು. ಅಲ್ಲಾಹನು ಅವರ ಮೇಲೆ ಕರುಣೆ ತೋರುವಂತಾಗಲಿ. ಅವರ ಅಪರಾಧವೆಂದರೆ ಅವರು ಯಾವ ಅಪರಾಧವು ಮಾಡದಿರುವುದೇ ಆಗಿದೆ. ಆದುದರಿಂದ ನನಗೆ ಅಲ್ಲಾಹನ ಮೇಲೆ ದೃಢವಾದ ವಿಶ್ವಾಸವಿದೆ. ಅವರ ಮೇಲೆ ಶೀಘ್ರದಲ್ಲಿಯೇ ಅವನ ಅನುಗ್ರಹವಾಗುವುದು."

ಅವರು ಹೇಳುತ್ತಾರೆ. ಇಶಾಅ ನಮಾಝ್‌ಗೋಸ್ಕರ ಅವರು ನಿಂತಿದ್ದರು. ಮತ್ತು ಬಿಕ್ಕಿ ಬಿಕ್ಕಿ ಯಾವ ರೀತಿ ಪ್ರಾರ್ಥಿಸುತ್ತಿದ್ದರೆಂದರೆ ಅದನ್ನು ನಾನು ಮರೆಯಲು ಸಾಧ್ಯವಿಲ್ಲ. ಹಾಗೆ ಹಗಲಾದಾಗ ಅಂಚೆಯ ಸಮಯವಾಯಿತು. ಮೊದಲು ತಂತಿ ಸುವಾರ್ತೆ ತಂದಿತು. ಹಝ್ರತ್ ಮಿರ್ಝಾ ಶರೀಫ್ ಅಹ್ಮದ್ ಸಾಹಿಬ್(ರ) ಮತ್ತು ಮಿಯಾ ನಾಸಿರ್ ಅಹ್ಮದ್ ಸಾಹಿಬ್(ರ) ಬಿಡುಗಡೆ ಹೊಂದಿದ್ದಾರೆಂದು. ಎಷ್ಟು ಬೇಗ ನನ್ನ ಪ್ರಭೂ ನನಗೆ ಪ್ರಾರ್ಥನೆ ಸ್ವೀಕಾರದ ಪವಾಡವನ್ನು ತೋರಿಸಿದ್ದಾನೆ. (ದಿನಪತ್ರಿಕೆ ಅಲ್‌ಫಝುಲ್ ದುಆ ಪುಟ 43).

ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ) ಕಾಲದ ಮಾತಾಗಿದೆ. ಮುಹಮ್ಮದ್ ಅಮೀನ್ ಖಲಿದ್ ಸಾಹಿಬ್ ಜರ್ಮನಿ ಅವರು ಹೇಳುತ್ತಾರೆ. ಇಂದಿನಿಂದ 45 ವರ್ಷಗಳ ಹಿಂದೆ ನನ್ನ ಎದೆಯ ಎಲುಬಿನಲ್ಲಿ ನೋವಿತ್ತು. ವಿವಿಧ ಡಾಕ್ಟರುಗಳಿಂದ ಚಿಕಿತ್ಸೆ ಪಡೆದೆ. ಎಲ್ಲ ತರಹದ ತಪಾಸಣೆ ಮಾಡಿಸಿಕೊಂಡೆ. ಆದರೆ ನೋವಿನಲ್ಲಿ ಯಾವ ವ್ಯತ್ಯಾಸವು ಆಗಲಿಲ್ಲ. ಡಾಕ್ಟರುಗಳು ಸಹ ವಿವಶರಾದರು. ಮತ್ತು ಚಿಕಿತ್ಸೆಯಾಗದು ಎಂದರು. ಇನ್ನು ಜೀವನದ ಕೆಲವೆ ದಿನಗಳು ಉಳಿದಿವೆ. ಅದೇ ನೋವನ್ನು ಸಹಿಸಿಕೊಳ್ಳಿ. ಆ ನಡುವೆ 1980 ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ ಹೆಂಬರ್ಗ್ ಆಗಮಿಸಿದರು. ನಾನು ಅವರನ್ನು ಸ್ವಾಗತಿಸುವ ಸಾಲಿನಲ್ಲಿ ನಿಂತಿಕೊಂಡಿದ್ದೆ. ನಾನು ಹಸ್ತಲಾಘವ ಪಡೆಯುವ ಭಾಗ್ಯ ಪಡೆದೆ ಮತ್ತು ತನ್ನ ನೋವಿನ ವಿಷಯ ಪ್ರಸ್ತಾಪಿಸಿದೆ. ಡಾಕ್ಟರುಗಳು ಚಿಕಿತ್ಸೆ ಸಾಧ್ಯವಿಲ್ಲ ಎನ್ನುತ್ತಿದ್ದಾರೆ ನನಗೆ ಈ ನೋವಿನಿಂದ ಮುಕ್ತಿ ದೊರೆಯದು ಎನ್ನುತ್ತಿದ್ದಾರೆ. ಆಗ ಹುಝೂರ್ ಅತ್ಯಂತ ಪ್ರತಾಪಭಾವದಿಂದ ನುಡಿದರು. ಗುಣವಾಗುವುದಿಲ್ಲ ಎಂದು ಯಾರು ಹೇಳುತ್ತಿದ್ದಾರೆ ಮತ್ತೆ ಹುಝೂರ್ ನನ್ನ ಅಂಗಿಯ ಒಂದು ಬಟನ್ ತನ್ನ ಕೈಯಿಂದ ಬಿಚ್ಚಿದರು. ಮತ್ತು ತಮ್ಮ ಶುಭ ಹಸ್ತದಿಂದ ನನ್ನ ಎದೆಯ ಮೇಲೆ ಒಂದು ವೃತ್ತಾಕಾರ ಮಾಡಿದರು. ಇಲ್ಲಿ ನೋವಾಗುತ್ತದೆಯೇ? ನಾನು ಹೇಳಿದೆ. ಹೌದು ಹುಝೂರ್. ಆಗ ಹುಝೂರ್ ಹೇಳಿದರು. ನಾವು ದುಆ (ಪ್ರಾರ್ಥನೆ) ಮಾಡುವೆವು. ಇನ್‌ಶಾ ಅಲ್ಲಾಹ್ ಗುಣವಾಗುವುದು, ಗಾಬರಿಪಡುವುದು ಬೇಡ. ಹಾಗೆ ಅಮೀನ್ ಸಾಹಿಬ್ ಹೇಳುತ್ತಾರೆ. ಇಂದಿಗೆ ಆ ಘಟನೆ ನಡೆದು 35 ವರ್ಷ ಆಗಿವೆ. ಇಂದು ನನ್ನ ಸ್ಥಿತಿ ಹೇಗಿದೆ ಎಂದರೆ ನನಗೆ ನೋವಿತ್ತೇ ಎಂಬಂತಾಗಿದೆ. ಆ ನೋವಿನ ಸುಳಿವೂ ಸಹ ಇರಲಿಲ್ಲ.

**ಖುದ್ರತ್ ಸೆ ಅಪ್‌ನಿ ಝಾತ್ ಕಾ ದೇತಾ ಹೈ ಹಖ್ ಸಬೂತ್**
**ಉಸ್ ಬೇ ನಿಶಾಂ ಕಿ ಚೆಹ್ರಾ ನುಮಾಈ ಯಹೀ ತೊ ಹೈ**

ತನ್ನ ದೈವಿಕ ಸಾಮರ್ಥ್ಯದ ಮೂಲಕ ಅವನು ಸತ್ಯತೆಯನ್ನು ಪ್ರಕಟಿಸುತ್ತಾನೆ. ಅದೃಶ್ಯನಾದ ಅವನ ದರ್ಶನ ಭಾಗ್ಯ ನೀಡುವ ಪರಿಯೇ ಇದಾಗಿದೆ.

ಕೊನೆಯಲ್ಲಿ ನಾನು ನಮ್ಮ ಪ್ರೀತಿಯ ಇಮಾಮರಾದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ (ಅಬಿಅ) ರವರ ಪಾರ್ಥನಾ ಸ್ವೀಕಾರದ ಒಂದು ಘಟನೆ ಪ್ರಸ್ತುತಪಡಿಸ ಬಯಸುತ್ತೇನೆ. ಹುಝೂರ್(ಅತಬಿಅ) 2004ರಲ್ಲಿ ಘಾನಾ ಆಗಮಿಸಿದ ಸಮಯ ಅದು. ಒಂದು ಸಂಧರ್ಭದಲ್ಲಿ ಪ್ರವಾಸದ ನಡುವೆ ಅವರು ಘಾನಾದವರಿಗೆ ಶುಭವಾರ್ತೆ ನೀಡಿದ್ದರು. ಘಾನಾ ನೆಲದಿಂದ ತೈಲ (Oil) ದೊರೆಯುವುದು. ಹಾಗೆಯೇ 2008ರಲ್ಲಿ ಹುಝೂರ್ ಖಿಲಾಫತ್ ಜುಬಿಲಿಯ ಸಂದರ್ಭದಲ್ಲಿ ರಾಷ್ಟ್ರಾಧ್ಯಕ್ಷರು ಹುಝೂರರಿಗೆ ಹೇಳಿದರು. ಹುಝೂರ್ ನಿಮ್ಮ ಪ್ರಾರ್ಥನೆ ನಮ್ಮ ದೇಶದ ಬಗ್ಗೆ ಸ್ವೀಕೃತಗೊಂಡ ಲಕ್ಷಣಗಳು ಗೋಚರಿಸುತ್ತವೆ. ಹುಝೂರ್ ಈ ಪ್ರಾರ್ಥನೆ ತುಂಬಾ ವೈಭವದಿಂದ ಪೂರ್ಣಗೊಂಡಿದೆ. ಹಿಂದಿನ ವರ್ಷದಿಂದ ಘಾನಾದಲ್ಲಿ ತೈಲ ದೊರೆಯುತ್ತದೆ. ಅಂದಹಾಗೆ ಈ ಕುರಿತು ಘಾನಾದ ಸುವ್ಯವಸ್ಥಿತ ನೆಫ್ನಲ್ ಪತ್ರಿಕೆ, "Daily Graphic" ತನ್ನ 17 ಏಪ್ರಿಲ್ 2008 ರ ಸಂಚಿಕೆಯಲ್ಲಿ ಮೊದಲ ಪುಟದಲ್ಲೇ– ಹುಝೂರೆ ಅನ್ವರ್ ಮತ್ತು ಘಾನಾ ಅಧ್ಯಕ್ಷರ ಭೇಟಿ ವರಧಿಯಲ್ಲಿ ಬರೆಯಲಾಗಿದೆ. ಖಲೀಫತುಲ್ ಮಸೀಹ್ ತಮ್ಮ 2004ರ ಪ್ರವಾಸದಲ್ಲಿ ಘಾನಾದಲ್ಲಿ ತೈಲ ದೊರೆಯುವುದು ಎಂಬ ಖಚಿತವಾದ ವಿಶ್ವಾಸ ವ್ಯಕ್ತಪಡಿಸಿದರು. ಆ ದೃಢವಾದ ವಿಶ್ವಾಸವು ಹಿಂದಿನ ವರ್ಷ ವಾಸ್ತವದಲ್ಲಿ ಪರಿವರ್ತನೆಗೊಂಡಿದೆ. ಘಾನಾ ನೆಲದಿಂದ ತೈಲ ದೊರೆಯುತ್ತದೆ. (ಬಹವಾಲಾ ದಿನಪತ್ರಿಕೆ ಅಲ್‌ಫಝುಲ್ ದುಆ, 28 ಡಿಸೆಂಬರ್ 2015)

ಮಹನಿಯರೇ! ನಾನು ಸಮಯದ ಅಭಾವದಿಂದಾಗಿ ಪ್ರಾರ್ಥನಾ ಸ್ವೀಕಾರದ ಕೇವಲ ಕೆಲವೆ ಘಟನೆಗಳನ್ನು ಉದಾಹರಣೆ ರೂಪದಲ್ಲಿ ಪ್ರಸ್ತುತಪಡಿಸಿರ್ದೇನೆ. ಇಲ್ಲದಿದ್ದರೆ ಈ ಸಂಬಂಧ ಅಸಂಖ್ಯಾತ ವಿಶ್ವಾಸವರ್ಧಕ ಘಟನೆಗಳಿವೆ. ಅದರಿಂದ ಒಂದು ಬೃಹತ್ ಗ್ರಂಥವೇ ತಯಾರಾಗಬಹುದು. ಹಾಗೆ ಪ್ರಾರ್ಥನೆ ಸ್ವೀಕಾರದ ಘಟನೆಗಳು ವಾಸ್ತವದಲ್ಲಿ ದೇವಾಸ್ತಿತ್ವಕ್ಕೆ ಸಾಕ್ಷ್ಯವಾಗಿವೆ. ಅದನ್ನು ಪಡೆಯಲು ದೇವನಭಯ, ಭಕ್ತಿ, ಆತ್ಮ ಪರಿಶುದ್ಧತೆ, ವಿನಯ ಮತ್ತು ವಿಶ್ವಾಸದ ಅಗತ್ಯವಿದೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದ ಪ್ರಕಾರ:–

**ಕೊಈ ಇಸ್ ಪಾಕ್ ಸೆ ದಿಲ್ ಲಗಾವೆ**
**ಕರೆ ಪಾಕ್ ಆಪ್‌ಕೊ ತಬ್ ಉಸ್ಕೊ ಪಾವೆ**
**ಜೊ ಖಾಕ್ ಮೇ ಮಿಲೇ ಉಸೆ ಮಿಲ್ತಾ ಹೈ ಆಶ್ನಾ**
**ಅಯ್ ಆಝ್ಮಾನೆ ವಾಲೆ ಯೆಹ್ ನುಸ್ಖಾ ಭೀ ಆಝ್‌ಮಾ**

ಯಾರಾದರೂ ಆ ಪಾವನ ದೇವನೊಂದಿಗೆ ಬಾಂಧವ್ಯ ಬಯಸಿದರೆ ಮೊದಲು ತನ್ನನ್ನು ಪರಿಶುದ್ಧನನ್ನಾಗಿ ಮಾಡಿಕೊಳ್ಳಲಿ ನಂತರ ಅವನನ್ನು ಪಡೆಯಬಹುದು. ಯಾರೂ ಅವನಿಗಾಗಿ ಪರೀಕ್ಷಿಸ ಬಯಸುವವರು ಈ ವಿಧಾನವನ್ನು ಪರೀಕ್ಷಿಸಿ ನೋಡಲಿ.

**ವಆಖಿರುದ್ದಅ್‌ವನ ಅನಿಲ್ ಹಮ್‌ದು ಲಿಲ್ಲಾಹಿ ರಬ್ಬಿಲ್ ಆಲಮೀನ್**

******************

ಜಲ್ಸ ಸಾಲಾನ ಖಾದಿಯಾನ್ 2021ರ ಭಾಷಣ

## ಹಝ್ರತ್ ಮಸಿಹ್ ಮೌಊದ್ ಅಲೈಹಿಸ್ಸಲಾಮ್ ಅವರ ಜೀವನಚರಿತ್ರೆ ಖುರ್‌ಆನ್ ಮಜೀದ್‌ನೊಂದಿಗೆ ನಿಮ್ಮ ಪ್ರೀತಿ ಮತ್ತು ಸೇವೆ.

*ಅತಾ ಇಲಾಹಿ ಅಹ್ಸನ್ ಗ್ಹೋರಿ, ನಾಝಿಮ್ ತಅ್‌ಮಿರಾತ್ ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್*

ಗೌರವಾನ್ವಿತ ಸಭಾಧ್ಯಕ್ಷರೆ ಹಾಗೂ ಮತ್ತು ಗೌರವಾನ್ವಿತ ಕೇಳುಗರೇ! ಇಂದಿನ ಈ ಅನುಗ್ರಹದಾಯಕ ಸಭೆಯಲ್ಲಿ ನನ್ನ ಭಾಷಣದ ವಿಷಯವೆಂದರೆ "ಹಝ್ರತ್ ಮಸಿಹ್ ಮೌಊದ್ ಅಲೈಹಿಸ್ಸಲಾಮ್ ಅವರ ಜೀವನ ಚರಿತ್ರೆ ಖುರ್‌ಆನ್ ಮಜೀದ್‌ನೊಂದಿಗೆ ನಿಮ್ಮ ಪ್ರೀತಿ ಮತ್ತು ಸೇವೆ."

ಧರ್ಮಗಳ ಇತಿಹಾಸದಲ್ಲಿ 19ನೇ ಶತಮಾನದ ಅಂತ್ಯ ಮತ್ತು 20ನೇ ಶತಮಾನದ ಆರಂಭವು ವಿಶೇಷ ಮಹತ್ವವನ್ನು ಹೊಂದಿದೆ. ಇದು ಭಾರತದಲ್ಲಿ ಒಂದೆಡೆ ಆಳವಾದ ಗಂಭೀರತೆ ಮತ್ತು ಉತ್ಸಾಹದಿಂದ ಪ್ರಮುಖ ಧರ್ಮಗಳ ನಡುವೆ ಸೈದ್ಧಾಂತಿಕ ಯುದ್ಧವು ನಡೆಯುತ್ತಿದ್ದ ಸಮಯವಾಗಿದ್ದರೆ, ಮತ್ತೊಂದೆಡೆ, ವಿಜ್ಞಾನ ಮತ್ತು ನಾಗರಿಕತೆಯ ಪುನರುಜ್ಜೀವನದ ಪರಿಣಾಮವಾಗಿ ಧಾರ್ಮಿಕ ಮತ್ತು ಧಾರ್ಮಿಕವಲ್ಲದ ಸಿದ್ಧಾಂತಗಳು ಉಗ್ರವಾಗಿ ಹೋರಾಡುತ್ತಿದ್ದವು, ಒಂದು ಕಡೆ ಕ್ರಿಶ್ಚಿಯನ್ ಧರ್ಮ, ಬ್ರಹ್ಮ ಸಮಾಜ, ಆರ್ಯ ಸಮಾಜಗಳು ಇಸ್ಲಾಂ ಧರ್ಮದ ಮೇಲೆ ದಾಳಿ ನಡೆಸುತ್ತಿದ್ದವು. ಮತ್ತೊಂದೆಡೆ, ಮುಸ್ಲಿಮರ ಸ್ಥಿತಿ ಹೇಗಿತ್ತು ಎಂದರೆ ಅವರ ಹೆಚ್ಚಿನ ವಿದ್ವಾಂಸರು ಈ ಬಾಹ್ಯ ಅಪಾಯಗಳ ಬಗ್ಗೆ ಕಾಳಜಿ ವಹಿಸಲಿಲ್ಲ ಮತ್ತು ಅವರು ಆಂತರಿಕ ಪಂಗಡದ ಕಲಹವನ್ನು ಮೋಕ್ಷದ ಏಕೈಕ ಕಾರಣವೆಂದು ಪರಿಗಣಿಸಿದರು. ಅವರ ಪ್ರಕಾರ ಇಸ್ಲಾಮ್ ಧರ್ಮದ ಚೌಕಟ್ಟಿನಲ್ಲಿ, ಆಂತರಿಕ ಕಲಹಗಳಲ್ಲಿ ಮಗ್ನರಾಗಿರುವುದೇ ಜಿಹಾದ್ ಎಂದು ಅರಿತುಕೊಂಡಿದ್ದರು. ಕೊರಳಪಟ್ಟಿಯಲ್ಲಿ ಸಿಕ್ಕಿಹಾಕಿಕೊಂಡ ಈ ಗುಂಪಿನ ಜೊತೆಗೆ, ಮದುವೆಯ ಸಿಹಿತಿಂಡಿಗಳು ಮತ್ತು ಫತೇಹಾ ಖಾನೀಗಳು ಮತ್ತು ಯೂಸುಫ್ ಝುಲೈಖಾ ಮತ್ತು ರಾಣಿ ಸಾಬಾ ಅವರ ಕಥೆಗಳಿಂದ ಹಾಗೂ ಸ್ವರ್ಗಗಳ ವಾದವಿವಾದಗಳಿಂದ ಹಳ್ಳಿಗಳ ವಾತಾವರಣಕ್ಕೆ ರಂಗು ತುಂಬುತ್ತಿದ್ದ ವಿದ್ವಾಂಸರು (ಮೌಲವಿ) ಎಂದು ಕರೆಯಲ್ಪಡುವ ಸಮೂಹವೂ ಇತ್ತು. ಇಸ್ಲಾಂ ಮತ್ತು ಖುರ್‌ಆನ್‌ನ ಸ್ಥಿತಿ ಏನಾಗುತ್ತಿದೆ ಮತ್ತು ನಮ್ಮ ಪವಿತ್ರ ಪ್ರವಾದಿಯಾದ ಪ್ರವಾದಿ ಮುಹಮ್ಮದ್(ಸ) ರವರ ಮೇಲೆ ಎಷ್ಟು ಕ್ರೂರ ದಾಳಿಗಳನ್ನು ನಡೆಸಲಾಗುತ್ತಿದೆ ಎಂಬುದರ ಬಗ್ಗೆ ಅವರು ನಡೆಸುತ್ತಿದ್ದ ಕಾಲ್ಪನಿಕ ಸ್ವರ್ಗಗಳ ವಾದಗಳಿಗೂ ಅರಿವಿರಲಿಲ್ಲ.

ಇಸ್ಲಾಮ್ ಧರ್ಮದ ಇಂತಹ ದುಃಖದ ಸ್ಥಿತಿಯ ಸಂದರ್ಭದಲ್ಲಿ ಅಹ್ಮದೀಯತ್‌ನ ಬೆಳಕು ಮೂಡಿತು. ಖಾದಿಯಾನ್‌ನ ಈ ಪವಿತ್ರ ಭೂಮಿಯಲ್ಲಿ ಈ ಯುಗದ ಮಹಾನ್ ಸುಧಾರಕ ಜನಿಸಿದನು, ಈ ಸಣ್ಣ ಮತ್ತು ಸಹಾನುಭೂತಿಯಿಲ್ಲದ ಪರಿಸರದಲ್ಲಿ ತನ್ನ ಪೂರ್ವಜರ ಮನೆಯ ಕೋಣೆಯಲ್ಲಿ ಅಥವಾ ಸಣ್ಣ ಮಸೀದಿಯ ಮೂಲೆಯಲ್ಲಿ ಮೌನವಾಗಿ ಜೀವನದ ನಲವತ್ತು ವಸಂತಗಳನ್ನು ಆಳವಾದ ಚಿಂತನೆ ಹಾಗೂ ಅಧ್ಯಯನದಲ್ಲಿ ಕಳೆದರು. ಹದಿಮೂರು ನೂರು ವರ್ಷಗಳ ಹಿಂದೆ ಅವರ ಆಧ್ಯಾತ್ಮಿಕ ಬೆಳಕು ಬೆಳಗಿದ ಇಸ್ಲಾಮಿನ ಪ್ರಕಾಶಮಾನ ಮುಖ ಇಂದು ಧೂಳಿನಿಂದ ಆವೃತವಾಗಿರುವುದನ್ನು ಅವರು ನೋಡಿದರು. ಎದೆಯಲ್ಲಿ ನೋವು ಏರಿತು ಆ ನೋವು ಹೊರಬರಲು ದಾರಿ ಹುಡುಕಲು ಪ್ರಾರಂಭಿಸಿತು, ಆದರೆ ಅವರು ಆ ನೋವನ್ನು ಹತ್ತಿಕ್ಕಿಕೊಂಡರು ಮತ್ತು ಕೊನೆಗೆ ಆ ನೋವನ್ನು ಮೂರ್ತೀಕರಿಸಿದರು ಮತ್ತು ದ್ರವರೂಪಕ್ಕೆ ತಿರುಗಿತು ಮತ್ತು ಕಾಗದದ ಪುಟಗಳಲ್ಲಿ ಅವರು ಬರಾಹೀನೆ ಅಹ್ಮದಿಯಾದ ರೂಪವನ್ನು ಪಡೆಯಿತು.

ಬರಾಹೀನೆ ಅಹ್ಮದಿಯಾ ಎಂದರೇನು? ಅದು ಧಾರ್ಮಿಕ ಜಗತ್ತನ್ನು ಬೆಚ್ಚಿಬೀಳಿಸುವ ಇಸ್ರಾಫೀಲ್‌ನ ಕಹಳೆಯಾಗಿತ್ತು. ಭಾರತದ ಮೂಲೆಮೂಲೆಯಲ್ಲಿ, ಬಹುಕಾಲದಿಂದ ಕನಸು ಕಾಣುತ್ತಿದ್ದ ಮುಸ್ಲಿಮರು ಬಾಗ್-ಎ-ಮಹಮ್ಮದ್‌ನಲ್ಲಿ ಹೂವು ಇದೆ ಎಂದು ಪಿಸುಗುಟ್ಟಲು ಪ್ರಾರಂಭಿಸಿತು. ಬರಾಹೀನೆ ಅಹ್ಮದಿಯಾದ ಪ್ರಕಟಣೆಯ ನಂತರ, ಮುಸ್ಲಿಮರು ಈದ್ ಅನ್ನು ಆಚರಿಸಿದರು. ಎಲ್ಲಾ ಕಡೆಯಿಂದ ಅಭಿನಂದನೆಗಳು ಮತ್ತು ಭಕ್ತಿಯ ಉಡುಗೊರೆಗಳು ಬರಲಾರಂಭಿಸಿದವು. ಕಳೆದ ಹದಿಮೂರು ಶತಮಾನಗಳಲ್ಲಿ ಲೇಖಕ ಬರಾಹೀನೆ ಅಹ್ಮದಿಯಾ ಇಸ್ಲಾಮಿಗೆ ಮಾಡಿದಷ್ಟು ಸೇವೆಯನ್ನು ಯಾರೂ ಮಾಡಿಲ್ಲ ಎಂದು ಯಾರೋ ಬರೆದಿದ್ದಾರೆ. ಯಾರೋ ಅಲ್ಲಾಹನ ಸಲುವಾಗಿ ನೀವು ಮೆಸ್ಸಿಹ್ ಎಂದು ಬೇಡಿಕೊಂಡರು. ಹೀಗೆ ಪವಿತ್ರ ಖುರ್‌ಆನ್‌ನ ವಾದಗಳನ್ನು ಹೊಂದಿದ ಇಸ್ಲಾಮಿಕ್ ವಿಶ್ವಕೋಶವಾದ ಬರಾಹೀನೆ ಅಹ್ಮದಿಯಾ ಮುಸ್ಲಿಂ ವಿದ್ವಾಂಸರಲ್ಲಿ ಅತ್ಯಂತ ಜನಪ್ರಿಯವಾಯಿತು. ಆದರೆ ಇಸ್ಲಾಂ ಧರ್ಮದ ವಿರೋಧಿಗಳ ಮನೆಗಳಲ್ಲಿ ಶೋಕ ಮಡುಗಟ್ಟಿತ್ತು.

ಆತ್ಮೀಯ ಕೇಳುಗರೇ! ಇವರೆ ಆ ಪರ್ಷಿಯನ್ ವ್ಯಕ್ತಿಯಾಗಿದ್ದರು ಅವರ ಬಗ್ಗೆ ಪ್ರವಾದಿ ಮುಹಮ್ಮದ್(ಸ)ರು ತಮ್ಮ ಭವಿಷ್ಯವಾಣಿಯಲ್ಲಿ ನುಡಿದಿದ್ದರು **ಲೌಕಾನಲ್ ಈಮಾನು ಇಂದ ಸ್ಸುರೈಯ ಲನಾಲಹೂ ರಿಜಾಲನ್ ಮಿನ್ ಹಾಉಲಾಯಿ** (ಬುಖಾರಿ, ಕಿತಾಬ್ ಅಲ್-ತಫ್ಸಿರ್, ಸೂರಾ ಜುಮುಅ, ಮುಸ್ಲಿಂ)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: "ಕೊನೆಯ ದಿನಗಳಲ್ಲಿ ಖುರ್‌ನ್ ಭೂಮಿಯಿಂದ ಎತ್ತಲ್ಪಡುತ್ತದೆ ಮತ್ತು ಖುರ್‌ಆನ್‌ನ ಜ್ಞಾನವು ಕಳೆದುಹೋಗುತ್ತದೆ ಮತ್ತು ಅಜ್ಞಾನವು ಹರಡುತ್ತದೆ ಮತ್ತು ಈಮಾನ್‌ನ ರುಚಿ ಮತ್ತು ಮಾಧುರ್ಯಗಳನ್ನು ಹೃದಯಗಳಿಂದ ದೂರವಾಗುವುದು ಎಂದು ಹದೀಸ್‌ಗಳಲ್ಲಿ ಹೇಳಲಾಗಿದೆ. ಇಂತಹ ಹದೀಸ್‌ಗಳಲ್ಲಿ ಇನ್ನೊಂದು ಹದೀಸ್ ಹೀಗಿದೆ, ಈಮಾನ್ ಕೃತಿಕಾ ನಕ್ಷತ್ರಕ್ಕೆ ಹಾದು ಹೋಗುತ್ತದೆ, ಅಂದರೆ, ಅದರ ಹೆಸರು ಮತ್ತು ಗುರುತು ಸಹ ಭೂಮಿಯ ಮೇಲೆ ಉಳಿಯುವುದಿಲ್ಲ, ಆಗ ಪರ್ಷಿಯನ್ನರಲ್ಲಿ ಒಬ್ಬರು ಆ ಈಮಾನ್ ಅನ್ನು ಕೃತಿಕಾ ನಕ್ಷತ್ರದಿಂದ ಕೈ ಚಾಚಿ ತೆಗೆದುಕೊಳ್ಳುತ್ತಾನೆ. ಈಗ ನೀವೇ ಅರ್ಥಮಾಡಿಕೊಳ್ಳಬಹುದು, ಈ ಹದೀಸ್‌ನಿಂದ ತಿಳಿದು ಬರುವುದೇನೆಂದರೆ ದುಖಾನ್ ಜೊತೆಗೆ ಇತರ ಹದೀಸ್‌ಗಳಲ್ಲಿ ವ್ಯಾಖ್ಯಾನಿಸಲಾದ ಅಜ್ಞಾನ ಮತ್ತು ಅಪ್ರಾಮಾಣಿಕತೆ ಮತ್ತು ದಾರಿತಪ್ಪುವಿಕೆಯು ಜಗತ್ತಿನಲ್ಲಿ ಹರಡಿದಾಗ ಮತ್ತು ಭೂಮಿಯ ಮೇಲಿನ ನಿಜವಾದ ಪ್ರಾಮಾಣಿಕತೆಯು ಅಂತಹದ್ದಕ್ಕೆ ಇಳಿಯುತ್ತದೆ ಎಂಬುದು ಈ ಹದೀಸ್‌ನಿಂದ ಸ್ಪಷ್ಟವಾಗುತ್ತದೆ. ಅದು ಎಷ್ಟರಮಟ್ಟಿಗೆ ಆಕಾಶಕ್ಕೆ ಹಾದು ಹೋಗುತ್ತದೆ ಮತ್ತು ಪವಿತ್ರ ಖುರ್‌ಆನ್ ಬಳಕೆಯಲ್ಲಿರುವುದಿಲ್ಲ ಅದು ಸರ್ವಶಕ್ತನಾದ ಅಲ್ಲಾಹನಿಗೆ ಏರಿಸಲ್ಪಟ್ಟಂತೆ ಆಗುತ್ತದೆ. (ಇಝಾಲ ಔಹಾಮ್, ರೂಹಾನಿ ಖಝಾಇನ್, ಸಂಪುಟ-3, ಪುಟ-455)

ಅವರು ಹೇಳಿದರು: "ಇದು ಸಂಭವಿಸಿದಾಗ, ಪರ್ಷಿಯಾದ ಪುತ್ರರಲ್ಲಿ ಒಬ್ಬರು ಬರುತ್ತಾರೆ ಮತ್ತು ಅವರು ಧರ್ಮವನ್ನು ಮರಳಿ ತರುತ್ತಾರೆ ಮತ್ತು ಧರ್ಮ ಮತ್ತು ಖುರ್‌ಆನ್ ಅನ್ನು ನವೀಕರಿಸುತ್ತಾರೆ. ಖುರ್‌ಆನ್‌ನ ಕಳೆದುಹೋದ ಹಿರಿಮೆ ಮತ್ತು ಮರೆತುಹೋದ ಮಾರ್ಗದರ್ಶನ ಮತ್ತು ಬೆಳಕಿಗೆ ಏರಿದ ನಂಬಿಕೆ ಜಗತ್ತಿನಲ್ಲಿ ಮತ್ತೆ ಹರಡುತ್ತದೆ.

ಪವಿತ್ರ ಖುರ್‌ಆನ್‌ನ ಸೇವಕನಾಗಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತಮ್ಮ ಆಗಮನದ ಉದ್ದೇಶವನ್ನು ಹೇಳಿದ್ದಾರೆ:

"ಸರ್ವಶಕ್ತನಾದ ಅಲ್ಲಾಹನು ಆ ಹೂತು ಹೋಗಿರುವ ಸಂಪತ್ತನ್ನು ಜಗತ್ತಿಗೆ ಬಹಿರಂಗಪಡಿಸಲು ಮತ್ತು ಈ ಹೊಳೆಯುವ ಆಭರಣಗಳ ಮೇಲೆ ಹೇರಿದ ಅಶುದ್ಧ ಆಕ್ಷೇಪಣೆಗಳ ಕೆಸರಿನಿಂದ ಅವುಗಳನ್ನು ಶುದ್ಧೀಕರಿಸಲು ನನ್ನನ್ನು ಅವತರಿಸಿದನು. ಪ್ರತಿ ದುಷ್ಟ ಶತ್ರುಗಳ ಕಳಂಕದಿಂದ ಪವಿತ್ರ ಖುರ್‌ಆನ್‌ನ ಗೌರವವನ್ನು ಪವಿತ್ರಗೊಳಿಸುವ ಕ್ಷಣದಲ್ಲಿ ಸರ್ವಶಕ್ತ ಅಲ್ಲಾಹನ ಹೆಮ್ಮೆಯು ಪೂರ್ಣ ಪ್ರಮಾಣದಲ್ಲಿದೆ." (ಮಲ್‌ಫೂಝಾತ್, ಸಂಪುಟ-1, ಪುಟ-38, ಖಾದಿಯಾನ್ ಮುದ್ರಣ 2003)

ಸರ್ವಶಕ್ತನಾದ ಅಲ್ಲಾಹನು ನೀಡಿದ ಪವಿತ್ರ ಖುರ್‌ಆನ್‌ನ

ಸತ್ಯಗಳು ಮತ್ತು ಬೋಧನೆಗಳ ಮೂಲಕ, ಯೇಸು ಮಸೀಹನ ಜೀವನ, ಟ್ರಿನಿಟಿ, ಪ್ರಾಯಶ್ಚಿತ್ತ, ಪುನರ್ಜನ್ಮ ಮುಂತಾದ ಇತರ ಧರ್ಮಗಳ ನಂಬಿಕೆಗಳನ್ನು ತಿರಸ್ಕರಿಸುವಾಗ, ಅವರು ತಪ್ಪುಗಳನ್ನು ಸರಿಪಡಿಸುತ್ತಾನೆ. ಮುಸ್ಲಿಮರ ನಂಬಿಕೆಗಳು, ಅವರು ವಫಾತೆ ಮಸೀಹ್ (ಯೇಸು ಮಸೀಹನ), ಅಜ್ರಾಯೆ ನಬುವ್ವತ್, ಪ್ರವಾದಿಗಳ ದೋಷರಹಿತತೆ ಮತ್ತು ನುಝೂಲೆ ಮಸೀಹ್ ಇತ್ಯಾದಿಗಳ ಮೇಲೆ ಪವಿತ್ರ ಖುರ್‌ಆನ್‌ನ ಪುರಾವೆಗಳ ಮೇಲೆ ಬೆಳಕು ಚೆಲ್ಲಿದರು. ಅವರು ಪವಿತ್ರ ಕುರಾನ್‌ನ ನಿಜವಾದ ಬೋಧನೆಗಳ ಬೆಳಕಿನಲ್ಲಿ ಮುಸ್ಲಿಮರಲ್ಲಿ ಪ್ರಚಲಿತದಲ್ಲಿರುವ ಅನಿಷ್ಟ ಪದ್ಧತಿಗಳನ್ನು ನಿರ್ಮೂಲನೆ ಮಾಡಿದರು. ಸರ್ವಶಕ್ತನಾದ ಅಲ್ಲಾಹನು ನಿಮಗೆ ಪವಿತ್ರ ಖುರ್‌ಆನ್‌ನ ಛಾಯೆಯ ರೀತಿಯಲ್ಲಿ ವಾಗ್ಚಾತುರ್ಯವಾಗಿ ಅರಬಿ ಭಾಷೆಯನ್ನು ಕಲಿಸಿದನು ಇದರ ಕಾರಣದಿಂದ ಅವರು ಸುಮಾರು ಇಪ್ಪತ್ತು ಬರಹಗಳನ್ನು ಅರಬಿ ಭಾಷೆಯಲ್ಲಿ ಬರೆದರು. ಆ ಬರಹಗಳಲ್ಲಿ ಒಂದು ಗ್ರಂಥ **"ಎಜಾಝುಲ್ ಮಸೀಹ್"** ಆಗಿದೆ. ಅದರಲ್ಲಿ ಪವಿತ್ರ ಖುರ್‌ಆನ್‌ನ ಸೂರ ಫಾತಿಹದ ವ್ಯಾಖ್ಯಾನವಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಈ ವ್ಯಾಖ್ಯಾನದ ಕುರಿತು ಹೀಗೆ ಬರೆದಿದ್ದಾರೆ:

**"**ವಿರೋಧಿ ವಿದ್ವಾಂಸರು ಮತ್ತು ನ್ಯಾಯಶಾಸ್ತ್ರಜ್ಞರು ಮತ್ತು ಅವರ ತಂದೆ ಮತ್ತು ಪುತ್ರರು ಎಲ್ಲರು ಸೇರಿ ಇದೇ ರೀತಿಯ ವ್ಯಾಖ್ಯಾನವನ್ನು ನೀಡಲು ಬಯಸಿದರೆ, ಅವರು ಹಾಗೆ ಮಾಡಲು ಸಾಧ್ಯವಾಗುವುದಿಲ್ಲ.**"** (ಎಜಾಝುಲ್ ಮಸೀಹ್, ರೂಹಾನಿ ಖಝಾಈನ್, ಸಂಪುಟ–18, ಪುಟ–56 ಅರ್ಥಪೂರ್ಣವಾಗಿ)

ಈ ಮಹಾನ್ ಭವಿಷ್ಯವಾಣಿಯ ಪ್ರಕಾರ, ಯಾವುದೇ ಅರಬ್ ಅಥವಾ ಅಜಂ ಬರಹಗಾರ ಅಥವಾ ವಿದ್ವಾಂಸರು ಈ ರೀತಿಯ ಬರಹವನ್ನು ಬರೆಯಲು ಧೈರ್ಯ ಮಾಡಲಿಲ್ಲ. ಹಝ್ರತ್ ಮಸೀಹ್ ಮೌಊದ್(ಅ) ರವರು 80ಕ್ಕೂ ಹೆಚ್ಚು ಪುಸ್ತಕಗಳಲ್ಲಿ ಪವಿತ್ರ ಖುರ್‌ಆನ್‌ನ ಎಂತಹ ಸತ್ಯತೆಗಳು, ಬೋಧನೆಗಳು ಮತ್ತು ಅದ್ಭುತಗಳು ವಿವರಿಸಿದ್ದಾರೆ ಎಂದರೆ ಅಂತಹ ವ್ಯಾಖ್ಯಾನಗಳು ಅನ್ಯ ತಫ್ಸೀರ್‌ಗಳಲ್ಲಿ ಕಂಡು ಬರಲು ಅಸಾಧ್ಯ.

ಅದೇ ರೀತಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: **"**ಪವಿತ್ರ ಖುರ್‌ಆನ್‌ನ ಅದ್ಭುತಗಳು ನನಗೆ ಇಲ್‌ಹಾಮ್‌ನಿಂದ ಆಗಾಗ್ಗೆ ಬಹಿರಂಗಗೊಳ್ಳುತ್ತವೆ ಮತ್ತು ಅವುಗಳ ಹೆಸರುಗಳು, ಗುರುತುಗಳು ವ್ಯಾಖ್ಯಾನಗಳಲ್ಲಿ ಕಂಡುಬರುವುದಿಲ್ಲ ಎಂದು ನಾನು ಮೊದಲು ಬರೆದಿದ್ದೇನೆ. ಉದಾಹರಣೆಗೆ, ಆದಮ್ ಅವರ ಸೃಷ್ಟಿಯ ಪ್ರಾರಂಭದಿಂದ ಪ್ರವಾದಿ(ಸ) ಅವರ ಕಾಲದ ಅವಧಿಯು ಸೂರಃ ಅಸರ್‌ನ ಪದಗಳ ಲೆಕ್ಕದಲ್ಲಿ ಖಮರಿಯ ಲೆಕ್ಕದ ಪ್ರಕಾರ ಇದೆ ಎಂಬುದು ಸ್ಪಷ್ಟವಾಗಿದೆ. ಈಗ ಹೇಳಿ, ಪವಿತ್ರ ಖುರ್‌ಆನ್‌ನ ಈ ಪವಾಡವನ್ನು ಯಾವ ವ್ಯಾಖ್ಯಾನದಲ್ಲಿ ಉಲ್ಲೇಖಿಸಲಾಗಿದೆ. (ಇಝಾಲ ಔಹಾಮ್, ರೂಹಾನಿ ಖಝಾಈನ್, ಸಂಪುಟ–3, ಪುಟ–258)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಆಗಮನದ ಮೊದಲು, ಪವಿತ್ರ ಖುರ್‌ಆನ್‌ನ ಕೆಲವು ಶ್ಲೋಕಗಳನ್ನು ರದ್ದುಗೊಳಿಸಲಾಗಿದೆ ಮತ್ತು ಕೆಲವು ರದ್ದುಗೊಳಿಸಲಾಗಿದೆ ಎಂಬ ನಂಬಿಕೆ ಮುಸ್ಲಿಮರಲ್ಲಿ ಇತ್ತು, ರದ್ದಾದ ಆಯತ್‌ಗಳ ಸಂಖ್ಯೆ ಮತಪಂಡಿತರ ಪ್ರಕಾರ ಐನೂರರವರೆಗೆ ಇತ್ತು. ವಿದ್ವಾಂಸರು ಈ ಸಂಖ್ಯೆಯನ್ನು ಕೆಲವು ವಿಧಾನಗಳಿಂದ ಕಡಿಮೆ ಮಾಡಲು ಪ್ರಯತ್ನಿಸಿದರು ಮತ್ತು ಅವರು ಈ ಪ್ರಯತ್ನದಲ್ಲಿ ಯಶಸ್ವಿಯೂ ಆದರು, ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆಗಮನಗೊಂಡ ನಂತರವೂ ಈ ಗಂಟು ಸಂಪೂರ್ಣವಾಗಿ ಬಗೆಹರಿಯಲಿಲ್ಲ ಎಂದು ಕಂಡುಬಂದಿದೆ ಮತ್ತು ಕೇವಲ ಐದು ಆಯತ್‌ಗಳು ವಿದ್ವಾಂಸರಿಂದ ರದ್ದುಪಡಿಸಲ್ಪಟ್ಟವು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರು ಬಂದು ಈ ಸಮಸ್ಯೆಯನ್ನು ಸಂಪೂರ್ಣವಾಗಿ ಪರಿಹರಿಸಿದರು. ಆದ್ದರಿಂದ ಅವರು(ಅ) ಹೇಳುತ್ತಾರೆ:

**"**ಪವಿತ್ರ ಖುರ್‌ಆನ್ ಸ್ವರ್ಗೀಯ ಪುಸ್ತಕಗಳಲ್ಲಿ ಕೊನೆಯದು ಎಂದು ನಾವು ದೃಢವಾಗಿ ನಂಬುತ್ತೇವೆ ಮತ್ತು ಒಂದೇ ಒಂದು ಗುರುತು ಅಥವಾ ಚುಕ್ಕೆಯೂ ಅದರ ಮಿತಿಗಳು, ನಿಯಮಗಳು ಮತ್ತು ಆಜ್ಞೆಗಳಿಗಿಂತ ಹೆಚ್ಚು ಅಥವಾ ಕಡಿಮೆ ಇಲ್ಲ ಮತ್ತು ಈಗ ಅಂತಹ ವಹಿ ಅಥವಾ ಅಂತಹ ಇಲ್‌ಹಾಮ್ ಅಲ್ಲಾಹನ ಕಡೆಯಿಂದ ಅವತರಿಸುವುದಿಲ್ಲ. ಅವು ಪವಿತ್ರ ಖುರ್‌ಆನ್‌ನ ತೀರ್ಪುಗಳನ್ನು ತಿದ್ದುಪಡಿ ಮಾಡುವ ಅಥವಾ ರದ್ದುಗೊಳಿಸುವ ಅಥವಾ ಯಾವುದೇ ತೀರ್ಪುಗಳನ್ನು ಬದಲಾಯಿಸುವಂತಹದ್ದಾಗಿರುವುದಿಲ್ಲ. ಯಾರಾದರೂ ಹಾಗೆ ಭಾವಿಸಿದರೆ, ಅವನು ಮುಮಿನೀನ್‌ನ ಜಮಾಅತ್‌ನಿಂದ ಹೊರಗಿದ್ದಾನೆ ಮತ್ತು ನಾಸ್ತಿಕ ಮತ್ತು ನಂಬಿಕೆಯಿಲ್ಲದವನಾಗಿದ್ದಾನೆ. (ಇಝಾಲ ಔಹಾಮ್, ಭಾಗ–1, ಪುಟ–170)

ಹಝ್ರತ್ ಮಿಯಾನ್ ಅಬ್ದುಲ್ಲಾ ಸುನೋರಿ ಸಾಹಿಬ್ ಅವರ ಸುದೀರ್ಘ ವರದಿ ಇದೆ. ಅವರು ಹೇಳುತ್ತಾರೆ:

**"**ನಾನು ಒಮ್ಮೆ ಹಝ್ರತ್ ಸಾಹಿಬ್ ಅವರನ್ನು ಕೇಳಿದೆ, ನಾನು ಖಾದಿಯಾನ್‌ಗೆ ಬಂದಾಗ ನನಗೆ ವಿಶೇಷವೇನೂ ಅನಿಸುವುದಿಲ್ಲ ಆದರೆ ಆಗಾಗ ನನ್ನ ಮೇಲೆ ಕೆಲವು ಖುರ್‌ಆನ್‌ನ ಆಯತ್‌ಗಳ ಅರ್ಥ ತೆರೆದುಕೊಳ್ಳುವುದನ್ನು ನಾನು ನೋಡುತ್ತೇನೆ ಮತ್ತು ನನಗೆ ಈ ರೀತಿ ಅನಿಸುತ್ತದೆ, ಅಂದರೆ ನನ್ನ ಹೃದಯದ ಮೇಲೆ ಅರ್ಥದ ಮೂಟೆ ಬಿದ್ದ ಹಾಗೆ ಭಾಸವಾಗುತ್ತದೆ. ಅದಕ್ಕೆ ಹಝ್ರತ್ ಸಾಹಿಬ್ ಹೇಳಿದರು: ನಮಗೆ ಪವಿತ್ರ ಖುರ್‌ಆನ್‌ನ ಬೋಧನೆಗಳನ್ನು ನೀಡುವ ಮೂಲಕವೇ ಕಳುಹಿಸಲಾಗಿದೆ ಮತ್ತು ಅದರ ಸೇವೆ ಮಾಡುವುದು ನಮ್ಮ ಕರ್ತವ್ಯವಾಗಿದೆ. ಆದ್ದರಿಂದ ನಮ್ಮ ಒಡನಾಟದಿಂದ ಅದೇ ಪ್ರಯೋಜನವನ್ನು ಪಡೆಯಬೇಕು.**"** (ಸೀರತುಲ್ ಮಹದಿ, ಭಾಗ–1, ಪುಟ–90)

ಈಗ ನಾನು ನಿಮ್ಮ ಮುಂದೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಜೀವನ ಚರಿತ್ರೆಯಲ್ಲಿ ಪವಿತ್ರ ಖುರ್‌ಆನ್‌ನ ಪ್ರೀತಿಯ ಅಂಶದ ಮೇಲೆ ಸ್ವಲ್ಪ ಬೆಳಕು ಚೆಲ್ಲುತ್ತೇನೆ.

**ದಿಲ್ ಮೆ ಯಹೀ ಹೈ ಹರ್‌ದಮ್ ತೇರಾ ಸಹೀಫ ಚೂಮೂಂ**
**ಖುರ್‌ಆನ್ ಕೆ ಗಿರ್ದ್ ಘೋಮೂಂ ಕಅ್‌ಬಾ ಮೆರಾ ಯಹೀ ಹೈ**

(ಅರ್ಥಾತ್: ನಿನ್ನ ಗ್ರಂಥವನ್ನು ಮುತ್ತಿಡುವುದೇ ನನ್ನ ಮನದಾಳದಲ್ಲಿರುವುದು, ಖುರ್‌ಆನ್‌ನ ಸುತ್ತ ಸುತ್ತುತ್ತಿರುವೆನು ಇದು ನನ್ನ ಕಾಬಾವಾಗಿದೆ.)

ಹಝ್ರತ್ ಮಸೀಹ್ ಮೌಊದ್(ಅ) ರವರನ್ನು ಪವಿತ್ರ ಖುರ್‌ಆನ್ ಬಗ್ಗೆ ನಿಜವಾದ ಮತ್ತು ಸ್ವಾಭಾವಿಕ ಪ್ರೀತಿಯನ್ನು ಹೊಂದಿದ್ದರು ಏಕೆಂದರೆ ಅದು ಅಲ್ಲಾಹನ ಕಲಾಮ್ ಆಗಿತ್ತು ಮತ್ತು ಅದರ ಅನನ್ಯ ಆಧ್ಯಾತ್ಮಿಕ ಮತ್ತು ಭೌತಿಕ ಸದ್ಗುಣಗಳಿಂದಾಗಿ ಅವರು ಅದನ್ನು ಅಪಾರವಾಗಿ ಪ್ರೀತಿಸುತ್ತಿದ್ದರು. ಈ ಕವಿತೆಯ ಪಂಕ್ತಿಯಿಂದ ನಮಗೆ ತಿಳಿದು ಬರುತ್ತದೆ ಅವರು ಹೇಳುತ್ತಾರೆ: ಓ ಸ್ವರ್ಗದ ಪ್ರಭುವೇ! ನಿನ್ನಿಂದ ಬಂದಿರುವ ಈ ಪವಿತ್ರ ಗ್ರಂಥ, ನನ್ನ ಹೃದಯವು ಮತ್ತೆ ಮತ್ತೆ ಚುಂಬಿಸಲು ಮತ್ತು ಪ್ರದಕ್ಷಿಣೆ ಮಾಡಲು ಹಾತೊರೆಯುತ್ತದೆ. ಪವಿತ್ರ ಖುರ್‌ಆನ್‌ನ ಅನನ್ಯ ಆಧ್ಯಾತ್ಮಿಕ ಮತ್ತು ಬಾಹ್ಯ ಸದ್ಗುಣಗಳನ್ನು ಉಲ್ಲೇಖಿಸುತ್ತಾ ಅವರು ಹೇಳುತ್ತಾರೆ:

ನೀವು ದೃಢವಾಗಿ ತಿಳಿದುಕೊಳ್ಳಿರಿ: ನಾವು ಕಣ್ಣುಗಳಿಲ್ಲದೆ ನೋಡುವುದು ಅಸಾಧ್ಯವಾಗಿರುವಂತೆ, ಕಿವಿಗಳಿಲ್ಲದೆ ಕೇಳುವುದು ಅಸಾಧ್ಯವಾಗಿರುವಂತೆ, ನಾಲಗೆಗಳಿಲ್ಲದೆ ಮಾತನಾಡುವುದು ಅಸಾಧ್ಯವಾಗಿರುವಂತೆ ನಾವು ಪವಿತ್ರ ಖುರ್‌ಆನಿನ ಸಹಾಯವಿಲ್ಲದೆ ಆ ಪ್ರಿಯ ಸ್ನೇಹಿತನ (ದೇವನ) ವದನವನ್ನು ಕಾಣುವುದು ಸಹ ಅಸಾಧ್ಯವಾಗಿರುತ್ತದೆ. ನಾನು ಯುವಕನಾಗಿದ್ದೆನು; ಈಗ ನಾನು ವೃದ್ಧನಾಗಿರುವೆನು. ಆದರೆ ಈ ಪರಿಶುದ್ಧವಾದ ಕಾರಂಜಿಯ (ಖುರ್‌ಆನಿನ) ಸಹಾಯವಿಲ್ಲದೆ ಸ್ಪಷ್ಟ ಜ್ಞಾನದ ಪಾತ್ರೆಯನ್ನು ಕುಡಿದ ಯಾರನ್ನಾದರೂ ನಾನು ನನ್ನ ದೀರ್ಘಕಾಲದ ಜೀವಿತಾವಧಿಯಲ್ಲಿ ಕಾಣಲಿಲ್ಲ. (ಇಸ್ಲಾಮೀ ಉಸೂಲ್ ಕೀ ಫಲಾಸಫೀ; ರೂಹಾನೀ ಖಝಾಇನ್, ಸಂಪುಟ–10, ಪುಟ 442–443)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ತಮ್ಮ ಒಂದು ಗ್ರಂಥ ಕಿಶ್ತಿ ಎ ನೂಹ್‌ನಲ್ಲಿ ಪವಿತ್ರ ಖುರ್‌ಆನ್ ಅನ್ನು ಎಚ್ಚರಿಕೆಯಿಂದ ಓದುವ ಮತ್ತು ಅದನ್ನು ಅಪಾರವಾಗಿ ಪ್ರೀತಿಸುವ

ಮತ್ತು ಅದರ ಎಲ್ಲಾ ಆಜ್ಞೆಗಳನ್ನು ಪೂರ್ಣ ಹೃದಯದಿಂದ ಅನುಸರಿಸುವ ಬಗ್ಗೆ ಹೇಳುತ್ತಾರೆ:

ನಾನು ನಮ್ಮೊಂದಿಗೆ ಸತ್ಯವಾಗಿ ಹೇಳುತ್ತೇನೆ. ಯಾರು ಪವಿತ್ರ ಖುರ್‌ಆನಿನ ಏಳುನೂರು ಅಜ್ಞೆಗಳಲ್ಲಿ ಒಂದು ಚಿಕ್ಕದಾದ ಆಜ್ಞೆಯನ್ನು ಕೂಡ ಉಲ್ಲಂಘಿಸುತ್ತಾನೋ ಅವನು ತನ್ನ ಮೋಕ್ಷದ ಬಾಗಿಲನ್ನು ತನ್ನ ಕೈಗಳಿಂದಲೇ ಮುಚ್ಚಿಬಿಡುತ್ತಾನೆ. ನಿಜವಾದ ಮತ್ತು ಪರಿಪೂರ್ಣವಾದ ಮೋಕ್ಷದ ಮಾರ್ಗಗಳನ್ನು ಪವಿತ್ರ ಖುರ್‌ಆನ್ ತೆರೆದಿದೆ. ಉಳಿದವು ಅವುಗಳ ನೆರಳಿನ ರೂಪದಲ್ಲಿದೆ. ಆದುದರಿಂದ ನೀವು ಪವಿತ್ರ ಖುರ್‌ಆನ್‌ನನ್ನು ಗಹನವಾಗಿ ಚಿಂತಿಸುತ್ತಾ ಓದಿರಿ. ಅದನ್ನು ಬಹಳ ಪ್ರೀತಿಸಿರಿ ನೀವು ಬೇರೇನನ್ನು ಪ್ರೀತಿಸುವುದಕ್ಕಿಂತ ಹೆಚ್ಚು ಅದನ್ನು ಪ್ರೀತಿಸಿರಿ. ಏಕೆಂದರೆ ಅಲ್ಲಾಹನು ನನ್ನನ್ನು ಸಂಭೋಧಿಸಿ ಹೀಗೆ ಹೇಳಿದನು. **ಅಲ್‌ಖೈರು ಕುಲ್ಲುಹು ಫಿಲ್ ಖುರ್‌ಆನ್** ಎಲ್ಲಾ ಒಳಿತುಗಳು ಪವಿತ್ರ ಖುರ್‌ಆನ್‌ನಲ್ಲಿದೆ. ಈ ಮಾತು ಸತ್ಯವೇ ಆಗಿದೆ. ಇತರ ವಸ್ತುಗಳಿಗೆ ಅದರ ಮೇಲೆ ಅಗ್ರಸ್ಥಾನ ನೀಡುವವರ ಬಗ್ಗೆ ಖೇದವಾಗುತ್ತದೆ. ನಿಮ್ಮ ಎಲ್ಲಾ ಜಯಗಳ ಮತ್ತು ಮೋಕ್ಷದ ಮೂಲವು ಪವಿತ್ರ ಖುರ್‌ಆನ್ ಆಗಿದೆ. ಧಾರ್ಮಿಕವಾದ ಯಾವುದೇ ಅವಶ್ಯಕತೆ ಪವಿತ್ರ ಖುರ್‌ಆನ್ ಮೂಲಕ ಪರಿಹರಿಸಲ್ಪಡದೆ ಇರುವುದಿಲ್ಲ. ಪುನರುತ್ಥಾನದ ದಿನದಂದು ನಿಮ್ಮ ವಿಶ್ವಾಸದ ಬಗ್ಗೆ ಸತ್ಯವೂ ಅಸತ್ಯವೂ ಎಂದು ಸಾಕ್ಷ್ಯ ನೀಡುವುದು ಪವಿತ್ರ ಖುರ್‌ಆನ್ ಆಗಿದೆ. ನಿಮಗೆ ನೇರವಾಗಿ ಮಾರ್ಗದರ್ಶನ ನೀಡಬಲ್ಲ ಗ್ರಂಥ ಪವಿತ್ರ ಖುರ್‌ಆನ್ ಹೊರತು ಬೇರೆ ಯಾವುದೂ ಆಕಾಶದ ಕೆಳಗೆ ಇಲ್ಲ. ದೇವನು ಪವಿತ್ರ ಖುರ್‌ಆನನ್ನು ನಿಮಗೆ ದಯಪಾಲಿಸಿ ನಿಮ್ಮ ಮೇಲೆ ಬಹಳ ಉಪಕಾರ ಮಾಡಿರುವನು. ನಾನು ಸತ್ಯವಾಗಿ ಹೇಳುತ್ತೇನೆ. ನಿಮಗೆ ಅವತ್ತೀರ್ಣಗೊಳಿಸಲ್ಪಟ್ಟ ಗ್ರಂಥ ಕ್ರೈಸ್ತರಿಗೆ ಅವತೀರ್ಣಗೊಳಿಸಲ್ಪಟ್ಟಿದ್ದರೆ ಅವರು ನಾಶ ಹೊಂದುತ್ತಿರಲಿಲ್ಲ. ನಿಮಗೆ ನೀಡಲಾದ ಈ ಅನುಗ್ರಹ ಮತ್ತು ಮಾರ್ಗದರ್ಶನವನ್ನು ತೌರಾತ್‌ಗೆ ಬದಲಾಗಿ ಯಹೂದಿಯರಿಗೆ ನೀಡಿರುತ್ತಿದ್ದರೆ ಅವರ ಕೆಲವು ಪಂಗಡಗಳು ಪುನರುತ್ಥಾನವನ್ನು ನಿರಾಕರಿಸುತ್ತಿರಲಿಲ್ಲ. ಆದುದರಿಂದ ನಿಮಗೆ ನೀಡಲ್ಪಟ್ಟ ಈ ಅನುಗ್ರಹವನ್ನು ಗೌರವಿಸಿರಿ. ಇದು ಅತ್ಯಂತ ಪ್ರಿಯಕರ ಅನುಗ್ರಹವಾಗಿದೆ. ಇದು ಬಹಳ ದೊಡ್ಡ ಸಂಪತ್ತಾಗಿದೆ. ಪವಿತ್ರ ಖುರ್‌ಆನ್ ಅವತೀರ್ಣಗೊಳ್ಳದಿರುತ್ತಿದ್ದರೆ ಸಕಲ ಲೋಕವು ಕೊಳಕು ಮಾಂಸದ ಪಿಂಡದ ಹಾಗೆ ಆಗುತ್ತಿತ್ತು. ಪವಿತ್ರ ಖುರ್‌ಆನ್ ಎಂತಹ ಗ್ರಂಥವೆಂದರೆ ಅದರ ಎದುರಿಗೆ ಇತರ ಎಲ್ಲಾ ಮಾರ್ಗದರ್ಶನಗಳು ನಿರರ್ಥಕವಾಗಿವೆ. (ಕಿಶ್ತಿ ಎ ನೂಹ್, ರೂಹಾನಿ ಖಝಾಇನ್, ಸಂಪುಟ–19, ಪುಟ–26–27)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಗ್ರಂಥಗಳ ಅಧ್ಯಾಯನದಿಂದ ಅರಿವಾಗುವುದೇನೆಂದರೆ ಅವರು ಸ್ವತಃ ಪವಿತ್ರ ಖುರ್‌ಆನ್ ಅನ್ನು ಅಧ್ಯಾಯನ ಮಾಡುವುದಲ್ಲದೆ ಬೇರೆಯವರನ್ನೂ ಸಹ ಇದನ್ನು ಪುನಃ ಪುನಃ ಅಧ್ಯಾಯನ ಮಾಡಬೇಕು ಎಂದು ತಿಳಿ ಮಾತು ಹೇಳುತ್ತಿದ್ದರು. ಒಮ್ಮೆ ಒಬ್ಬ ವ್ಯಕ್ತಿಯು ಪವಿತ್ರ ಖುರ್‌ನ್ ಅನ್ನು ಹೇಗೆ ಪಠಿಸಬೇಕು ಎಂದು ಕೇಳಿದಾಗ ಅದಕ್ಕೆ ಅವರು ಉತ್ತರಿಸಿದರು.

"ಪವಿತ್ರ ಖುರ್‌ಆನ್ ಅನ್ನು ಎಚ್ಚರಿಕೆಯಿಂದ ಓದಬೇಕು. ಇದನ್ನು ಹದೀಸ್‌ನಲ್ಲಿ ಉಲ್ಲೇಖಿಸಲಾಗಿದೆ: **ರುಬ್ಬಖಾರಿಇನ್ ಯಲ್‌ಅನುಹುಲ್ ಖುರ್‌ಆನ್**– ಅಂದರೆ, ಪವಿತ್ರ ಖುರ್‌ಆನ್‌ನಿಂದ ಶಾಪಗ್ರಸ್ತರಾದ ಅನೇಕ ಪವಿತ್ರ ಖುರ್‌ಆನ್‌ನ ಓದುಗರಿದ್ದಾರೆ. ಯಾರು ಪವಿತ್ರ ಖುರ್‌ಆನ್ ಅನ್ನು ಓದಿ ಅದನ್ನು ಅನುಸರಿಸದಿದ್ದರೆ, ಪವಿತ್ರ ಖುರ್‌ಆನ್ ಅಂತಹವರನ್ನು ಶಪಿಸುತ್ತದೆ. ಪವಿತ್ರ ಖುರ್‌ಆನ್‌ನ ಕರುಣೆಯ ಆಯತ್‌ಗಳನ್ನು ಪಠಿಸುವಾಗ, ಸರ್ವಶಕ್ತನಾದ ಅಲ್ಲಾಹನಿಂದ ಕರುಣೆಯನ್ನು ಯಾಚಿಸಬೇಕು ಮತ್ತು ಎಲ್ಲಿ ಒಂದು ಜನಾಂಗದ ಶಿಕ್ಷೆಯ ಬಗ್ಗೆ ಉಲ್ಲೆಖವಿದೆಯೋ ಅಲ್ಲಿ ಅಲ್ಲಾಹನಲ್ಲಿ ಅಲ್ಲಾಹನ ಆಶ್ರಯ ಪಡೆಯುವುದಾಗಿ ಕೇಳಿಕೊಳ್ಳಬೇಕು ಬಹಳ ಗಾಂಭೀರ್ಯದಿಂದ ಅದನ್ನು ಓದಬೇಕು ಮತ್ತು ಅದನ್ನು ಅನುಸರಿಸಬೇಕು. (ಮಲ್‌ಫೂಝಾತ್, ಸಂಪುಟ–5, ಪುಟ–157)

ಅದೇ ರೀತಿ ಅವರು ಹೇಳುತ್ತಾರೆ: "ರಸೂಲುಲ್ಲಾಹ್(ಸ) ಅವರು ನುಡಿದರು: ದುಃಖದ ಸ್ಥಿತಿಯಲ್ಲಿ ಪವಿತ್ರ ಕುರಾನ್ ಅವತೀರ್ಣಗೊಂಡಿದೆ ಆದ್ದರಿಂದ ನೀವು ಅದನ್ನು ದುಃಖದ ಸ್ಥಿತಿಯಲ್ಲಿ ಓದಿರಿ." (ಮಲ್‌ಫೂಝಾತ್, ಸಂಪುಟ–3, ಪುಟ–152)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ತಮ್ಮ ಜಮಾಅತ್‌ನವರಿಗೆ ಪವಿತ್ರ ಖುರ್‌ಆನ್ ಅನ್ನು ಆಗಾಗ್ಗೆ ಪಠಿಸಲು ಸೂಚಿಸುತ್ತ ಹೇಳುತ್ತಾರೆ:

"ಈಗ ಎಲ್ಲಾ ಪುಸ್ತಕಗಳನ್ನು ಬಿಟ್ಟು ಅಲ್ಲಾಹನ ಪುಸ್ತಕವನ್ನು ಮಾತ್ರ ಹಗಲು ರಾತ್ರಿ ಓದಿರಿ. ಪವಿತ್ರ ಖುರ್‌ಆನ್‌ಗೆ ಗಮನ ಕೊಡದ ಮತ್ತು ಹಗಲು ರಾತ್ರಿ ಇತರ ಪುಸ್ತಕಗಳ ಮೇಲೆ ಒಲವು ತೋರುವವನು ಮಹಾನ್ ನಂಬಿಕೆಯಿಲ್ಲದವನಾಗಿದ್ದಾನೆ. ನಮ್ಮ ಜಮಾಅತ್‌ನವರು ಪವಿತ್ರ ಖುರ್‌ಆನ್‌ನ ಅನ್ವೇಷಣೆ ಮತ್ತು ಧ್ಯಾನಕ್ಕೆ ಪೂರ್ಣ ಹೃದಯದಿಂದ ತಮ್ಮನ್ನು ತೊಡಗಿಸಿಕೊಳ್ಳಬೇಕು ಮತ್ತು ಹದೀಸ್‌ಗಳ ಅನ್ವೇಷಣೆಯನ್ನು ತ್ಯಜಿಸಬೇಕು. ಹದೀಸ್‌ಗಳಿಗೆ ನೀಡುವ ಗಮನ ಮತ್ತು ಮಾರ್ಗದರ್ಶನವನ್ನು ಪವಿತ್ರ ಖುರ್‌ಆನ್‌ಗೆ ನೀಡದಿರುವುದು ಅತ್ಯಂತ ವಿಷಾದದ ಸಂಗತಿಯಾಗಿದೆ. ಈ ಸಮಯದಲ್ಲಿ, ನೀವು ಪವಿತ್ರ ಖುರ್‌ಆನ್ ತಂತ್ರವನ್ನು ಕೈಯಲ್ಲಿ ತೆಗೆದುಕೊಂಡರೆ, ಅದು ನಿಮ್ಮ ವಿಜಯವಾಗಿದೆ. ಈ ಬೆಳಕಿನ ಮುಂದೆ ಯಾವ ಕತ್ತಲೆಯೂ ನಿಲ್ಲಲಾರದು. (ಮಲ್‌ಫೂಝಾತ್, ಸಂಪುಟ–1, ಪುಟ–386)

ಒಬ್ಬ ವ್ಯಕ್ತಿ ಹಝ್ರತ್ ಮಸೀಹ್ ಮೌಊದ್(ಅ) ಅವರಲ್ಲಿ ನನ್ನ ನಾಲಿಗೆಯು ಪವಿತ್ರ ಖುರ್‌ಆನ್ ಅನ್ನು ಉತ್ತಮವಾಗಿ ಪಠಿಸಬೇಕೆಂದು ಪ್ರಾರ್ಥಿಸಿರಿ ಎಂದು ವಿನಂತಿಸಿಕೊಂಡರು, ನನ್ನ ನಾಲಿಗೆ(ಭಾಷೆ) ಪವಿತ್ರ ಖುರ್‌ಆನ್ ಅನ್ನು ಪಠಿಸಲು ಸಾಧ್ಯವಿಲ್ಲ ಮತ್ತು ಅದು ಕೆಲಸ ಮಾಡುವುದಿಲ್ಲ. ನನ್ನ ನಾಲಿಗೆಯೂ ತೆರೆಯಲಿ. ಅದಕ್ಕೆ ಅವರು ಹೇಳಿದರು:

"ಪವಿತ್ರ ಖುರ್‌ಆನ್ ಅನ್ನು ತಾಳ್ಮೆಯಿಂದ ಪಠಿಸುತ್ತಾ ಇರಿ, ಸರ್ವಶಕ್ತನಾದ ಅಲ್ಲಾಹನು ನಿಮ್ಮ ನಾಲಿಗೆಯನ್ನು ತೆರೆಯುತ್ತಾನೆ. ಇದು ಮಾನವನ ಮನಸ್ಸನ್ನು ತೆರವುಗೊಳಿಸುತ್ತದೆ ಮತ್ತು ನಾಲಿಗೆಯನ್ನು ತೆರೆಯುತ್ತದೆ ಎಂಬುದು ಪವಿತ್ರ ಖುರ್‌ಆನ್‌ನಲ್ಲಿನ ಅನುಗ್ರಹವಾಗಿದೆ ಮತ್ತು ವೈದ್ಯರು ಕೂಡ ಈ ಕಾಯಿಲೆಗೆ ಈ ಚಿಕಿತ್ಸೆಯನ್ನು ಸೂಚಿಸುತ್ತಾರೆ." (ಮಲ್‌ಫೂಝಾತ್, ಸಂಪುಟ–3, ಪುಟ–105)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರನ್ನು ಬಹಳ ಹತ್ತಿರದಿಂದ ನೋಡಿದ ಮತ್ತು ಅವರಿಗೆ ಹತ್ತಿರವಾದವರು ಪವಿತ್ರ ಖುರ್‌ಆನ್‌ನ ಬಗ್ಗೆ ಅಪಾರ ಪ್ರೀತಿ ಮತ್ತು ಅದನ್ನು ಓದುವ ಉತ್ಸಾಹವನ್ನು ಹೊಂದಿದ್ದರು ಎಂಬುದಕ್ಕೆ ಸಾಕ್ಷಿಯಾಗಿದ್ದಾರೆ.

ಗುರ್ದಾಸ್ಪೂರ್ ಜಿಲ್ಲೆಯ ಲಂಗರ್ವಾಲ್ ನಿವಾಸಿ ಮಿರ್ಜಾ ದಿನ್ ಮುಹಮ್ಮದ್ ಸಾಹಿಬ್, ನಾನು ನನ್ನ ಬಾಲ್ಯದಿಂದಲೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರನ್ನು ನೋಡುತ್ತಿದ್ದೇನೆ ಮತ್ತು ಮಿರ್ಝಾ ಗುಲಾಮ್ ಮುರ್ತಾಜಾ ಸಾಹಿಬ್ ಅವರ ಜೀವನದಲ್ಲಿ ನಾನು ಅವರನ್ನು ಮೊದಲು ನೋಡಿದ್ದೇನೆ ಎಂದು ಲಿಖಿತವಾಗಿ ಹೇಳಿದರು. ನಾನು ಮಗುವಾಗಿದ್ದಾಗ. ಅವರು ಇಶಾ ನಂತರ ರಾತ್ರಿ ಬೇಗನೆ ಮಲಗುತ್ತಿದ್ದರು ಮತ್ತು ನಂತರ ಸುಮಾರು ಒಂದು ಗಂಟೆಗೆ ತಹಜ್ಜುದ್ದಾಗಿ ಎದ್ದು ತಹಜ್ಜುದ್ ನಮಾಝ್ ನಿರ್ವಹಿಸಿ ಪವಿತ್ರ ಖುರ್‌ಆನ್ ಅನ್ನು ಪಠಿಸುತ್ತಿದ್ದರು. ತದನಂತರ ಫಜರ್ ಅಝಾನ್ ಆದಾಗ, ಅವರು ಮನೆಯಲ್ಲಿ ಸುನ್ನತ್ ನಮಾಝ್ ನಿರ್ವಹಿಸಿ ನಮಾಝ್‌ಗಾಗಿ ಮಸೀದಿಗೆ ಹೋಗಿ ಬಾಜಮಾಅತ್ ನಮಾಝ್ ನಿರ್ವಹಿಸುತ್ತಿದ್ದರು." (ಸಿರತ್ ಅಲ್–ಮಹದಿ, ಭಾಗ–3, ಪುಟಗಳು 513 ರಿಂದ 514)

ಅದೇ ರೀತಿ, ಹಝ್ರತ್ ಮಿರ್ಜಾ ಸುಲ್ತಾನ್ ಅಹ್ಮದ್ ಸಾಹಿಬ್ ಅವರು "ನಮ್ಮ ತಂದೆ ಪವಿತ್ರ ಖುರ್‌ಆನ್, ಮಸ್ನವಿ ರೂಮಿ ಮತ್ತು ದಲಾಏಲುಲ್–ಖೈರಾತ್ ಎಂಬ ಮೂರು ಪುಸ್ತಕಗಳನ್ನು ಆಗಾಗ್ಗೆ ಓದುತ್ತಿದ್ದರು ಮತ್ತು ಕೆಲವು ಟಿಪ್ಪಣಿಗಳನ್ನು ಬರೆದು ಕೊಳ್ಳುತ್ತಿದ್ದರು ಮತ್ತು ಪವಿತ್ರ ಖುರ್‌ಆನ್ ಅನ್ನು ಆಗಾಗ್ಗೆ ಓದುತ್ತಿದ್ದರು." (ಸಿರತ್ ಅಲ್–ಮಹದಿ, ಭಾಗ–1, ಪುಟ–199)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ದಾವೆಗೂ

ಮೊದಲು ಉದ್ಯೋಗಕ್ಕಾಗಿ ಸಿಯಾಲ್‌ಕೋಟ್‌ನಲ್ಲಿ ವಾಸಿಸುತ್ತಿದ್ದರು. ಆ ಕಾಲದ ಪರಿಸ್ಥಿತಿ ವಿವರಿಸುತ್ತ ಮಾನ್ಯ ಮೌಲವಿ ಮೀರ್ ಹಸನ್ ಸಾಹಿಬ್ ಸಿಯಾಲ್ಕೋಟಿ ಸಾಹಿಬ್ ಹೇಳುತ್ತಾರೆ:

"ಹಝ್ರತ್ ಮಿರ್ಝಾ ಸಾಹಿಬ್ ಮೊದಲು ಮುಹಲ್ಲ ಕಾಶ್ಮೀರಿಯಾದಲ್ಲಿ ಉಮ್ರಾ ಎಂಬ ಕಾಶ್ಮೀರಿಯ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದರು, ಅದು ಈ ಪಾಪಿ ವ್ಯಕ್ತಿಯ ಬಡವನ ಮನೆಗೆ ಬಹಳ ಹತ್ತಿರದಲ್ಲಿದೆ. ಅವರು ನ್ಯಾಯಾಲಯದಿಂದ ಬರುವಾಗ ಪವಿತ್ರ ಖುರ್‌ಆನ್ ಪಠಿಸುತ್ತಿದ್ದರು. ಕುಳಿತುಕೊಂಡು ನಿಂತು, ನಡೆಯುವಾಗ ಪಠಿಸುತ್ತಿದ್ದರು ಮತ್ತು ಬಹಳವಾಗಿ ಅಳುತ್ತಿದ್ದರು. ಎಂತಹ ನಮ್ರತೆಯಿಂದ ಪವಿತ್ರ ಖುರ್‌ಆನ್ ಅನ್ನು ಪಠಿಸುತ್ತಿದ್ದರು ಎಂದರೆ ಅದರ ಉದಾಹರಣೆ ಇನ್ನೆಲ್ಲು ಕಾಣಲು ಸಾಧ್ಯವಿಲ್ಲ." (ಸೀರತ್ ಅಲ್-ಮಹದಿ, ಭಾಗ-1, ಪುಟ 252)

ಅದೇ ರೀತಿ ಹಝ್ರತ್ ಮುನ್ಷಿ ಝುಫರ್ ಅಹ್ಮದ್ ಸಾಹಿಬ್ ಕಪುರ್ಥಾಲ್ವಿ ಹೇಳುತ್ತಾರೆ:

"ಮುನ್ಶಿ ಅಬ್ದುಲ್ ವಾಹಿದ್ ಸಾಹಿಬರು ಒಂದು ಕಾಲದಲ್ಲಿ ಬಟಾಲದ ತಹಸೀಲ್ದಾರ್ ಆಗಿದ್ದರು. ಹಝ್ರತ್ ಸಾಹಿಬ್ ಅವರಿಗೆ ಹದಿನಾಲ್ಕು ಅಥವಾ ಹದಿನೈದು ವರ್ಷ ವಯಸ್ಸಾಗಿರಬಹುದು ಮತ್ತು ಆ ವಯಸ್ಸಿನಲ್ಲಿ ಹಝ್ರತ್ ಸಾಹಿಬ್ ಅವರು ಇಡೀ ದಿನ ಪವಿತ್ರ ಖುರ್‌ಆನ್ ಓದುತ್ತಿದ್ದರು ಮತ್ತು ಅಂಚುಗಳಲ್ಲಿ ಟಿಪ್ಪಣಿಗಳನ್ನು ಬರೆಯುತ್ತಿದ್ದರು ಮತ್ತು ಮಿರ್ಝಾ ಗುಲಾಮ್ ಮುರ್ತಝಾ ಸಾಹಿಬ್ ಹಝ್ರತ್ ಸಾಹಿಬ್ ಅವರ ಬಗ್ಗೆ ಹೇಳುತ್ತಿದ್ದರು ನನ್ನ ಈ ಪುತ್ರ ಯಾರಿಂದಲೂ ಏನೂ ಬಯಸುವುದಿಲ್ಲ. ಇಡೀ ದಿನ ಮಸೀದಿಯಲ್ಲೇ ಇದ್ದು ಖುರ್‌ಆನ್ ಪಠಿಸುತ್ತಾನೆ. ಮುನ್ಶಿ ಅಬ್ದುಲ್ ವಾಹಿದ್ ಸಾಹಿಬ್ ಖಾದಿಯಾನ್ ಹಲವು ಬಾರಿ ಬಂದು ಹೋಗುತ್ತಿದ್ದರು. ಹಝ್ರತ್ ಸಾಹಿಬ್ ಅವರು ಪವಿತ್ರ ಖುರ್‌ಆನ್ ಪಠಿಸುವುದನ್ನು ನಾನು ಯಾವಾಗಲೂ ನೋಡಿದ್ದೇನೆ ಎಂದು ಹೇಳಿದರು." (ಸೀರತ್ ಅಲ್-ಮಹದಿ, ಭಾಗ-4, ಪುಟ-26, ನಿರೂಪಣೆ 1011)

ಮಿಯಾನ್ ಫಖ್ರ್-ಉದ್-ದೀನ್ ಸಾಹಿಬ್ ಮುಲ್ತಾನಿ ಹೇಳುತ್ತಾರೆ:

"1907 ರಲ್ಲಿ ಹಝ್ರತ್ ಬೀವಿ ಸಾಹಿಬಾ ಅವರು ಲಾಹೋರ್‌ಗೆ ಭೇಟಿ ನೀಡಿದಾಗ, ಅವರು ಹಿಂದಿರುಗಿದ ಸುದ್ದಿ ತಿಳಿದಾಗ, ಹಝ್ರತ್ ಮಸಿಹ್ ಮೌಊದ್(ಅ) ಅವರನ್ನು ಕರೆತರಲು ಬಟಾಲಾಗೆ ಹೋದರು, ಹಝ್ರತ್ ಸಾಹಿಬ್ ಅವರು ಎಂಟು ಕಹರ್‌ಗಳು ಹೊತ್ತೊಯ್ಯುವ ಪಲ್ಲಕ್ಕಿಯಲ್ಲಿ ಹೊರಟರು. ಅವರು ಖಾದಿಯಾನ್‌ನಿಂದ ಹೊರಟುಹೋದ ತಕ್ಷಣ, ಹಜರತ್ ಸಾಹಿಬ್ ಪವಿತ್ರ ಖುರ್‌ಆನ್ ಅನ್ನು ತೆರೆದು ಅವರ ಮುಂದೆ ಇರಿಸಿ ಸೂರಾ ಅಲ್-ಫಾತಿಹಾವನ್ನು ಓದಲು ಪ್ರಾರಂಭಿಸಿದರು. ಹಝ್ರತ್ ಸಾಹಿಬ್ ಅವರು ಬಟಾಲಾ ತನಕ ಸೂರಾ ಅಲ್-ಫಾತಿಹಾವನ್ನು ಪಠಿಸುವುದನ್ನು ಮುಂದುವರೆಸಿದರು ಮತ್ತು ಇನ್ನೊಂದು ಪುಟವನ್ನು ತಿರುಗಿಸಲಿಲ್ಲ. ಒಮ್ಮೆ ದಾರಿಯಲ್ಲಿ ಹಝ್ರತ್ ಸಾಹಿಬ್ ಕಾಲುವೆಯ ಮೇಲೆ ಇಳಿದು ಮೂತ್ರ ವಿಸರ್ಜನೆ ಮಾಡಿ ವಝೂ ಮಾಡಿದ ನಂತರ ಅವರು ಪಲ್ಲಕ್ಕಿಯಲ್ಲಿ ಕುಳಿತುಕೊಂಡರು ಪುನಃ ಅವರು ಸೂರಾ ಅಲ್-ಫಾತಿಹಾವನ್ನು ಅದೇ ರೀತಿಯಲ್ಲಿ ಓದಲು ಪ್ರಾರಂಭಿಸಿದರು. (ಸೀರತ್ ಅಲ್-ಮಹದಿ, ಭಾಗ-2, ಪುಟ-395)

ಹಝ್ರತ್ ಮುಫ್ತಿ ಮುಹಮ್ಮದ್ ಸಾದಿಖ್ ಸಾಹಿಬ್ ಹೇಳುತ್ತಾರೆ:

"ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರನ್ನು ಒಮ್ಮೆ ಮಾತ್ರ ಅಳುವುದನ್ನು ನೋಡಿದ್ದೇನೆ. ಒಮ್ಮೆ ಅವರು ಖುದ್ದಾಮ್ ಅವರೊಂದಿಗೆ ವಾಯುವಿಹಾರಕ್ಕಾಗಿ ಹೋಗುತ್ತಿದ್ದರು ಮತ್ತು ಆ ದಿನಗಳಲ್ಲಿ ಹಾಜಿ ಹಬೀಬ್-ಉರ್-ರೆಹಮಾನ್ ಸಾಹಿಬ್ ಹಾಜಿಪುರ ಅವರ ಅಳಿಯ ಖಾದಿಯಾನ್‌ಗೆ ಬಂದಿದ್ದರು. ಆಗ ಯಾರೋ ಒಬ್ಬರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೆ ಇವರು ಪವಿತ್ರ ಖುರ್‌ಆನ್ ಅನ್ನು ಉತ್ತಮವಾಗಿ ಪಠಿಸುತ್ತಾರೆ ಎಂದು ತಿಳಿಸಿದರು. ಹಝ್ರತ್ ಸಾಹಿಬರು ತಕ್ಷಣವೇ ರಸ್ತೆಯ ಒಂದು ಬದಿಯಲ್ಲಿ ಕುಳಿತು ಖುರ್‌ಆನ್ ಪಠಿಸಿರಿ ಎಂದು ಹೇಳಿದರು. ಹಾಗಾಗಿ ಅವರು ಖುರ್‌ಆನ್ ಪಠಿಸಿದಾಗ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಣ್ಣುಗಳಲ್ಲಿ ನೀರು ತುಂಬಿರುವುದನ್ನು ನಾನು ನೋಡಿದೆ." (ಸೀರತ್ ಅಲ್-ಮಹದಿ, ಭಾಗ-2, ಪುಟ-393)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಪವಿತ್ರ ಖುರ್‌ಆನ್‌ನ ಪ್ರೇಮಿಯಾಗಿದ್ದರು ಎಂಬುದಕ್ಕೆ ಸಾಕ್ಷಿಯಾಗಿರುವ ಕೆಲವು ಘಟನೆಗಳು ನಾನು ನಿಮ್ಮ ಮುಂದೆ ವಿವರಿಸಿದೆನು. ಅವರು ಪವಿತ್ರ ಖುರ್‌ಆನ್ ಅನ್ನು ಅಪಾರವಾಗಿ ಪ್ರೀತಿಸುತ್ತಿದ್ದರು ಮತ್ತು ಹಗಲು ರಾತ್ರಿ ಅದರ ಪಠಣದಲ್ಲಿ ತೊಡಗಿದ್ದರು, ಆದರೆ ಇತರರಿಗೆ, ವಿಶೇಷವಾಗಿ ಅವರ ಅನುಯಾಯಿಗಳಿಗೆ, ಪವಿತ್ರ ಖುರ್‌ಆನ್ ಅನ್ನು ಅಪಾರವಾಗಿ ಪ್ರೀತಿಸಲು ಮತ್ತು ಅದರ ಆಜ್ಞೆಗಳನ್ನು ಆಗಾಗ್ಗೆ ಅಧ್ಯಯನ ಮಾಡಲು ಮತ್ತು ಅದನ್ನು ಅನುಸರಿಸಲು ಒತ್ತು ನೀಡುತ್ತಿದ್ದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಪವಿತ್ರ ಖುರ್‌ಆನ್‌ನ ಮಹಿಮೆ ಮತ್ತು ಅದರ ಶ್ರೇಷ್ಠ ಗುಣಗಳನ್ನು ಉಲ್ಲೇಖಿಸುತ್ತ ಹೇಳುತ್ತಾರೆ:

"ನಾನು ಯೌವನಾವಸ್ಥೆಯಲ್ಲಿದ್ದೆ ಈಗ ನಾನು ವಯಸ್ಸಿಗನಾಗಿದ್ದೇನೆ ಮತ್ತು ನಾನು ಪ್ರಾಪಂಚಿಕ ವ್ಯವಹಾರಗಳಲ್ಲಿ ತೊಡಗಿಸಿಕೊಂಡಿಲ್ಲ ಮತ್ತು ನಾನು ಯಾವಾಗಲೂ ಧಾರ್ಮಿಕ ಚಟುವಟಿಕೆಗಳಲ್ಲಿ ಆಸಕ್ತಿ ಹೊಂದಿದ್ದೇನೆ ಎಂದು ಜನರು ಬಯಸಿದರೆ ಸಾಕ್ಷಿ ಹೇಳಬಹುದು. ನಾನು ಪವಿತ್ರ ಖುರ್‌ಆನ್ ಅನ್ನು ಅತೀ ಪರಿಶುದ್ಧ ಹಾಗೂ ಆಧ್ಯಾತ್ಮಿಕತೆಯಿಂದ ತುಂಬಿರುವುದಾಗಿ ಪಡೆದಿದ್ದೇನೆ. ಅದು ಯಾವ ಮನುಷ್ಯನನ್ನು ದೇವರನ್ನಾಗಿ ಮಾಡುವುದಿಲ್ಲ, ಮತ್ತು ಯಾವ ಆತ್ಮಗಳನ್ನು ಮತ್ತು ದೇಹಗಳನ್ನು ಅವನ ಸೃಷ್ಟಿಯಿಂದ ಹೊರಗಿಡುವ ಮೂಲಕ ಅದನ್ನು ಖಂಡಿಸುವುದಿಲ್ಲ ಮತ್ತು ಯಾವ ಅನುಗ್ರಹಕ್ಕಾಗಿ ಧರ್ಮವನ್ನು ಸ್ವೀಕರಿಸುತ್ತೇವೋ ಅವನನ್ನು ಈ ಗ್ರಂಥವೂ ಮನುಷ್ಯನ ಮನಸ್ಸಿನಲ್ಲಿ ಆವರಿಸುತ್ತದೆ. ಹೀಗೆ ಅವನಿಗೆ ಅಲ್ಲಾಹನ ಅನುಗ್ರಹಕ್ಕೆ ಅರ್ಹನನನ್ನಾಗಿ ಮಾಡುತ್ತದೆ. ಹಾಗಾದರೆ ನಾವು ಏಕೆ ಪ್ರಕಾಶ ದೊರೆತ ನಂತರ ಕತ್ತಲೆಗೆ ಬರಬೇಕು ಮತ್ತು ನಮ್ಮ ಕಣ್ಣುಗಳನ್ನು ತೆರವುಗೊಳಿಸಿದ ನಂತರ ಮತ್ತೆ ಕುರುಡರಾಗಬೇಕು." (ಸನಾತನ್ ಧರ್ಮ್, ರೂಹಾನಿ ಖಝಾಈನ್, ಸಂಪುಟ-19, ಪುಟ-474)

ಪವಿತ್ರ ಖುರ್‌ಆನ್ ಅನ್ನು ಗೌರವಿಸುವ ಮಟ್ಟಿಗೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಹಾಗೆ ಬೇರೆ ಉದಾಹರಣೆ ಇಲ್ಲ. ಅವರು ಪವಿತ್ರ ಖುರ್‌ಆನ್ ಅನ್ನು ಎಷ್ಟು ಗೌರವಿಸುತ್ತಿದ್ದರು ಎಂದರೆ ಪವಿತ್ರ ಖುರ್‌ಆನ್‌ನ ಅಪವಿತ್ರತೆಯನ್ನು ಕ್ಷಣಕ್ಕು ಸಹಿಸುತ್ತಿರಲಿಲ್ಲ. ಈ ನಿಟ್ಟಿನಲ್ಲಿ ಒಂದು ವರದಿ ಹೀಗಿದೆ. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ ಹೀಗೆ ಹೇಳುತ್ತಾರೆ:

ಹಝ್ರತ್ ವಾಲಿದ ಸಾಹಿಬರವರು ನನಗೆ ಹೇಳಿದರು: ಒಮ್ಮೆ ನಿಮ್ಮ ಸಹೋದರ ಮುಬಾರಕ್ ಅಹ್ಮದ್ ಅವರ ಬಾಲ್ಯದ ನಿರ್ಲಕ್ಷ್ಯದಲ್ಲಿ ಅವರಿಂದ ಪವಿತ್ರ ಖುರ್‌ಆನ್‌ಗೆ ಅಗೌರವವಾಯಿತು, ಇದಕ್ಕೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಮುಖವು ಕೆಂಪಾಯಿತು, ಅವರು ಹೋಗಿ ಮುಬಾರಕ್ ಅಹ್ಮದ್‌ಗೆ ಆವೇಶದಲ್ಲಿ ಅವನಿಗೆ ಕಪಾಳಮೋಕ್ಷ ಮಾಡಿದರು. ಹೀಗೆ ಅವನ ಸೂಕ್ಷ್ಮ ದೇಹದ ಮೇಲೆ ಅವರ ಬೆರಳಚ್ಚು ಕಾಣಿಸುವಂತೆ ಮಾಡಿತು, ಈಗ ಅವನನ್ನು ನನ್ನಿಂದ ದೂರವಿಡಿ ಎಂದು ಕೋಪದ ಸ್ಥಿತಿಯಲ್ಲಿ ಹೇಳಿದರು (ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಅವರ ಹೇಳಿಕೆ) ದಿವಂಗತ ಮುಬಾರಕ್ ಅಹ್ಮದ್ ನಮ್ಮ ಎಲ್ಲಾ ಸಹೋದರರಲ್ಲಿ ಕಿರಿಯನಾಗಿದ್ದ ಮತ್ತು ಹಝ್ರತ್ ಸಾಹಿಬ್ ರವರ ಜೀವನದಲ್ಲಿ ಮರಣ ಹೊಂದಿದ್ದ. ಹಝ್ರತ್ ಸಾಹಿಬ್ ಅವನನ್ನು ಬಹಳ ಇಷ್ಟಪಡುತ್ತಿದ್ದರು. ಹೀಗೆ ಅವನ ನಿಧನದ ಸಂದರ್ಭದಲ್ಲಿ ಅವರ ಒಂದು ಕವನ ಹೇಳಿದರು:

**"ಜಿಗರ್ ಕಾ ತುಕ್ಡಾ ಮುಬಾರಕ್ ಅಹ್ಮದ್ ಜೊ ಪಾಕ್ ಶಕಲ್ ಔರ್ ಪಾಕ್ ಖೂ ಥಾ**

**ವೋಹ್ ಆಜ್ ಹಮ್‌ಸೆ ಜುದಾ ಹುವಾ ಹೈ ಹಮಾರೆ ದಿಲ್**

*(ಪುಟ ಸಂಖೆ 18 ರಲ್ಲಿ ಮುಂದುವರಿಸಲಾಗಿದೆ)*

ಜಲ್ಸ ಸಾಲಾನ ಖಾದಿಯಾನ್ 2021ರ ಭಾಷಣ

# ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಸತ್ಯತೆ

**(ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಭವಿಷ್ಯವಾಣಿಗಳ ಬೆಳಕಿನಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಅಭಿವೃದ್ಧಿ)**

*ಮುನೀರ್ ಅಹ್ಮದ್ ಖಾದಿಮ್, ಎಡೀಶ್ನಲ್ ನಾಝಿರ್ ಇಸ್ಲಾಹ್ ವ ಇರ್‌ಷಾದ್ ಜುನೂಬಿ ಹಿಂದ್ ಖಾದಿಯಾನ್*

ಗೌರವಾನ್ವಿತ ಸಭಾಧ್ಯಕ್ಷರೆ!! ನನ್ನ ಭಾಷಣದ ವಿಷಯ "ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಭವಿಷ್ಯವಾಣಿಗಳ ಬೆಳಕಿನಲ್ಲಿ ಅಹ್ಮದೀಯ ಮುಸ್ಲಿಮ್ ಜಮಾಅತ್‌ನ ಅಭಿವೃದ್ಧಿ" ಎಂದಾಗಿದೆ. ಸರ್ವಶಕ್ತನಾದ ಅಲ್ಲಾಹನು ತನ್ನ ನಿಯೋಜಕರನ್ನು ಅಥವಾ ಸಂದೇಶವಾಹಕರನ್ನು ಕಳಿಸಿದರೆ ಆಗ ಆತನ ಬರುವಿಕೆಯ ಸ್ಥಿತಿಯು ಬಹಳ ದೌರ್ಬಲ್ಯ ಜನಕವಾಗಿರುತ್ತದೆ. ಆತನು ಮತ್ತು ಅತನ ಅನುಯಾಯಿಗಳು ತಮ್ಮ ಆಧ್ಯಾತ್ಮಿಕ ಪ್ರವಾಸವನ್ನು ಬಹಳ ಹಿಂಸಾಚಾರದಲ್ಲಿ ಕಳಿಯುತ್ತಾರೆ. ಲೋಕವು ಅವರನ್ನು ಸತಾಯಿಸುತ್ತದೆ, ತೊಂದರೆ ನೀಡುತ್ತದೆ ಮತ್ತು ಆ ಲೋಕದಲ್ಲಿ ಅವರ ಜೀವನವೂ ಬಹಳ ಕಷ್ಟಕರವಾಗುತ್ತದೆ ಎಲ್ಲಾ ಕಡೆಯಿಂದಲೂ ಹಿಂಸಾಚಾರ ನಡೆಯುತ್ತಲೇ ಇರುತ್ತದೆ, ಅಪಹಾಸ್ಯ ಮಾಡುತ್ತಾರೆ, ಕಷ್ಟಗಳನ್ನು ನೀಡುತ್ತಾರೆ, ಅವಮಾನಿಸುತ್ತಾರೆ ಅದರೆ ಅವರು ಕೇವಲ ಅವತರಿಸಿದವನ ಹೆಸರನ್ನು ಶ್ರೇಷ್ಠಗೊಳಿಸುವುದಕ್ಕೆ ಆತನ ಬೆಂಬಲದಿಂದ ತಮ್ಮ ಗುರಿಯನ್ನು ಸಾಧಿಸಲು ಮುನ್ನಡೆಯುತ್ತಿರುತ್ತಾರೆ. ಅಲ್ಲಾಹನು ಅವರ ಕೈಯನ್ನು ಹಿಡಿದುಕೊಳ್ಳುತ್ತಾನೆ ಹೀಗೆ ಅಲ್ಲಾಹನು ಅವನನ್ನು ನಂಬುವವರಿಗೆ ಧೈರ್ಯ ನೀಡುತ್ತಾನೆ ಮತ್ತು ಆತನ ಸತ್ಯತೆಗಾಗಿ ಭಯಪಡಬೇಡಿರೀ ಎಂದು ಹೇಳುತ್ತಾನೆ;

**ಇನ್ನಲ್ಲಝೀನ ಯುಹಾದ್ದೂನಲ್ಲಾಹ ವರಸೂಲಹು ಉಲಾಯಿಕ ಫಿ ಅಝಿಲ್ಲೀನ ಕತಬಲ್ಲಾಹು ಲಅಗ್‌ಲಿಬನ್ನ ಅನಾ ವ ರುಸುಲಿ ಇನ್ನಲ್ಲಾಹ ಖವಿಯ್ಯುನ್ ಅಝೀಝ್** (ಅಲ್‌ಮುಜಾದಿಲ 21–22)

ಅಂದರೆ: ಅಲ್ಲಾಹನನ್ನೂ ಅವನ ಸಂದೇಶ ವಾಹಕನನ್ನೂ ವಿರೋಧಿಸುವವರು ಖಂಡಿತವಾಗಿಯೂ ಅತ್ಯಂತ ಅಧಮರೇ ಆಗಿದ್ದಾರೆ. ನಾನೂ ಮತ್ತು ನನ್ನ ಸಂದೇಶವಾಹಕರೂ ಖಂಡಿತವಾಗಿಯೂ ವಿಜಯಶಾಲಿಗಳಾಗುವೆವು ಎಂದು ಅಲ್ಲಾಹನು(ವಿಧಿ) ಬರೆದಿರುವೆನು. ನಿಶ್ಚಯವಾಗಿಯೂ ಅಲ್ಲಹನು ಶಕ್ತಿಶಾಲಿಯೂ ಪ್ರತಾಪವಂತನೂ ಆಗಿದ್ದಾನೆ.

ಅದೇ ರೀತಿ ತನ್ನ ಸಂದೇಶವಾಹಕರನ್ನು ಉದ್ದೇಶಿಸಿ ಹೇಳುತ್ತಾನೆ:

**ವಲಖದ್ ಸಬಖತ್ ಕಲಿಮತುನಾ ಲಿಇಬಾದಿನಲ್ ಮುರ್‌ಸಲೀನ ಇನ್ನಹುಮ್ ಲಹುಮುಲ್ ಮನ್ಸೂರೂನ ವಿನ್ನ ಜುನ್‌ದನಾ ಲಹುಮುಲ್ ಗಾಲಿಬೂನ್. (ಅಸ್ಸಾಫ್ಫಾತ್: 172–174)**

ಅಂದರೆ ನಮ್ಮ ಭಕ್ತ ದಾಸರಾದ ಸಂದೇಶವಾಹಕರ ಬಗ್ಗೆ ನಮ್ಮ ತೀರ್ಮಾನ ಮೊದಲೇ ವಿಧಿಸಲ್ಪಟ್ಟಿದೆ. ಖಂಡಿತವಾಗಿಯೂ ಅವರಿಗೆ ನೆರವು ನೀಡಲಾಗುವುದು. ನಿಶ್ಚಯವಾಗಿಯೂ ನಮ್ಮ ಸೈನ್ಯವೇ ವಿಜಯಿಯಾಗುವುದು.

ಹೀಗೆ ಎಲ್ಲಾ ಸಂದೇಶವಾಹಕರೂ ಬಹಳ ದೌರ್ಬಲ್ಯ ಸ್ಥಿತಿಯಲ್ಲಿ ಆಗಮಿಸುತ್ತಾರೆ. ಆ ದೌರ್ಬಲ್ಯ ಜನರ ಸತ್ಯತೆಯ ದೃಷ್ಟಾಂತವೂ ಇದಾಗಿರುತ್ತದೆ ಅಂದರೆ ಅವರು ಪ್ರತಿಯೊಂದು ರೀತಿಯ ಹಿಂಸೆಯನ್ನು ಸಹಿಸುತ್ತಾರೆ ತಾಳ್ಮೆಯನ್ನು ಕಳೆದುಕೊಳ್ಳುವುದಿಲ್ಲ ಮತ್ತು ಪ್ರತಿಯೊಂದು ಪ್ರವಾದಿಗೆ ಅಲ್ಲಾಹನು ಹೀಗೆ ಹೇಳಿದ್ದಾನೆ: **ವಸ್ತಈನು ಬಿಸ್ಸಬ್ರಿ ವಸ್ಸಲಾತಿ ವ ಇನ್ನಹಾ ಲಕಬೀರತುನ್ ಇಲ್ಲಾ ಅಲಲ್ ಖಾಶಿಈನ್** ಅಂದರೆ ವೈರಿಗಳ ಹಿಂಸೆಯನ್ನು ಎದುರಿಸುವುದಕ್ಕೆ ಅಲ್ಲಾಹನಿಂದ ಸಹನೆ ಮತ್ತು ದುಆವಿನಿಂದ ಸಹಾಯವನ್ನು ಯಾಚಿಸಿರಿ. (ಅಲ್‌ಬಖರ:46)

ಪ್ರವಾದಿ ಮುಹಮ್ಮದ್(ಸ) ರವರ ಮುಂಚೆಯೂ ಹಝ್ರತ್ ಆದಮ್ ಅಲೈಹಿಸ್ಸಲಾಮ್ ರಿಂದ ಹಿಡಿದು ಪ್ರವಾದಿ ಮುಹಮ್ಮದ್(ಸ)ರವರ ತನಕ ಅಲ್ಲಾಹನ ಈ ಸುನ್ನತನ್ನು ಅನುಸರಿಸಲಾಯಿತು ಮತ್ತು ಪ್ರವಾದಿ ಮುಹಮ್ಮದ್(ಸ) ಹಾಗೂ ಅವರ ಸಹಾಬರವರು ಎಂತಹ ಹಿಂಸಾಚಾರದ ಸಮಯವನ್ನು ಕಳೆದರು ಎಂದು ಇತಿಹಾಸವು ಸಾಕ್ಷಿಯಾಗಿದೆ. ಅವರನ್ನು ಹೊಡೆಯಲಾಯಿತು, ಬಲವಂತ ಮಾಡಲಾಯಿತು, ಬಹಿಷ್ಕರಿಸಲಾಯಿತು, ಸಾಮಾಜಿಕ ಹಕ್ಕುಗಳಿಂದ ವಂಚಿಸಲಾಯಿತು, ಮನೆಗಳಿಂದ ಹೊರಹಾಕಲಾಯಿತು, ಕೊಲೆಯ ಬೆದರಿಕೆ ನೀಡಲಾಯಿತು ಮತ್ತು ಅವರಲ್ಲಿ ಅನೇಕರನ್ನು ಶಹೀದ್ ಮಾಡಲಾಯಿತು ಹೀಗೆ ಈ ಹಿಂಸಾಚಾರವೂ ಅನೇಕ ವರ್ಷಗಳ ಕಲ ನಡೆಯಿತು ಮುಸ್ಲಿಮರು ತಾಳ್ಮೆವಹಿಸಿದರು ಮತ್ತು ಸಹನೆ ಮತ್ತು ದುಆವಿನಿಂದ ಅಲ್ಲಾಹ ಸಹಾಯವನ್ನು ಯಾಚಿಸಿದರು. ಈ ಪೀಡಿತರ ಶ್ರೇಷ್ಠತೆ ಎಂತಹದ್ದಾಗಿತ್ತು ಎಂದರೆ ಹಿಂಸಚಾರವನ್ನು ಅನುಭವಿಸಿದ ನಂತರ ಅಲ್ಲಾಹನು ಅವರಿಗೆ ವಿಜಯಶಾಲಿಯನ್ನಗಿ ಮಾಡಿದಾಗ ಅವರು ತಮ್ಮ ವೈರಿಗಳನ್ನು ಕ್ಷಮಿಸಿದರು ನಿಸ್ಸಂದೇಹವಾಗಿಯು ಇದು ಅವರ ಸತ್ಯತೆಗೆ ದೊಡ್ಡ ದೃಷ್ಟಾಂತವಾಗಿದೆ.

ಗೌರವಾನ್ವಿತ ಕೇಳುಗರೇ!! ಈ ಅಲ್ಲಾಹನ ಸುನ್ನತ್ ಪ್ರವಾದಿ ಮುಹಮ್ಮದ್(ಸ)ರವರ ನೈಜ ಗುಲಾಮರು ಮತ್ತು ಕಾಲಘಟ್ಟದ ಇಮಾಮರಾದ ಹಝ್ರತ್ ಮಿರ್ಝ ಗುಲಾಮ್ ಅಹ್ಮದ್ ಖಾದಿಯಾನಿ ಅಲೈಹಿಸ್ಸಲಾಮ್‌ರವರ ಅನುಗ್ರಹದಾಯಕ ಕಾಲದಲ್ಲಿಯೂ ಜಾರಿಯಾಯಿತು. ಅವರು ಈ ಕಾಲಘಟ್ಟದ ಬಗ್ಗೆ ಪ್ರವಾದಿ ಮುಹಮ್ಮದ್(ಸ) ರವರು ಮೊದಲೇ ಭವಿಷ್ಯವಾಣಿ ನುಡಿದಿದ್ದರು ಅಂದರೆ ತಮ್ಮ ಕಾಲಘಟ್ಟದ ದುರ್ದೈವ ವಿರೋಧಿಗಳು ಪ್ರವಾದಿ ಮುಹಮ್ಮದ್(ಸ) ಅವರೊಂದಿಗೆ ಹಾಗೂ ಅವರ ಸಹಾಬರವರ ಕಾಲಘಟ್ಟದ ದುರ್ದೈವ ವಿರೋಧಿಗಳು ನಡೆದುಕೊಂಡ ರೀತಿಯಲ್ಲೇ ನಡೆದುಕೊಳ್ಳುವರು. ಇದರ ಬಗ್ಗೆ ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೀಗೆ ನುಡಿದಿದ್ದರು: ಅಂದರೆ ಬನೀ ಇಸ್ರಈಲ್‌ನಲ್ಲಿ ಎಪ್ಪತ್ತೆರಡು ಪಂಗಡಗಳಾದವು ಆದರೆ ನನ್ನ ಉಮ್ಮತ್ತಿನಲ್ಲಿ ಎಪ್ಪತ್ತಮೂರು ಪಂಗಡಗಳಾಗುವುದು ಅವರಲ್ಲಿ ಒಂದನ್ನು ಮಾತ್ರ ಹೊರತುಪಡಿಸಿ ಎಲ್ಲಾ ಪಂಗಡಗಳು ಅಗ್ನಿ ಪ್ರವೇಶೀಸುವುದು. ಆಗ ಜನರು ಪ್ರಶ್ನಿಸಿದರು ಯಾ ರಸೂಲಲ್ಲಾಹ್! ಅವರ ಯಾರಾಗಿರುವರು ಅವರ ದೃಷ್ಟಾಂತಗಳೇನಾಗುವುದು? ಅದಕ್ಕೆ ಪ್ರವಾದಿ(ಸ) ಹೇಳಿದರು: ನನ್ನ ಹಾಗೂ ನನ್ನ ಸಹಾಬರವರೊಂದಿಗೆ ಪ್ರಾಥಮಿಕ ಕಾಲದಲ್ಲಿದ್ದ ಸ್ಥಿತಿಯೇ ಅವರ ಸ್ಥಿತಿಯೂ ಆಗುವುದು. ನನ್ನ ಮತ್ತು ನನ್ನ ಸಹಾಬರವರೊಂದಿಗೆ ನಡೆದ ವಿರೋಧದ ರೀತಿಯಲ್ಲೆ ಆಗಮಿಸಬೇಕಾದ ವಾಗ್ದಾತ್ತ ಮಸೀಹನ ಹಾಗೂ ಅವರ ಸಹಾಬರವರೊಂದಿಗೆಯೂ ವಿರೋಧ ನಡೆಯುವುದು ಇದು ಅವರಿಗೆ ದೃಷ್ಟಾಂತವಾಗಿರುವುದು.

ಹೀಗೆ ಓರ್ವ ಮಹಾನ್ ಸೂಫಿಯಾದ ಹಝ್ರತ್ ಮುಹಿಯುದ್ದೀನ್ ಇಬ್ನ್ ಅರಬಿ(ರ) ರವರು ಬರೆದಿದ್ದಾರೆ:

**ಇಝಾ ಖರಜ ಹಾಝುಲ್ ಮಹ್‌ದಿ ಲಮ್ ಯಕುನ್ ಲಹೂ ಅಅ್‌ದಾಅ ಇಲ್ಲಲ್ ಘುಖಹಾಅ ಖಾಸ್ಸ**

ಅಂದರೆ ಇಮಾಮ್ ಮಹ್ದಿಯವರು ಆಗಮಿಸಿದಾಗ ಆ ಕಾಲದ ಧರ್ಮಜ್ಞಾನಿಗಳು ಅವರ ಕಟು ವೈರಿಗಳಾಗುವರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಮ್‌ರವರ ಪ್ರಾಥಮಿಕ ಕಾಲದಲ್ಲಿ ಅವರ ಸಂಬಂಧಿಕರಿಂದ ಹಿಡಿದು ಆ ಪ್ರದೇಶದ ಜನರು ವಿಶೇಷವಾಗಿ ಮೌಲವಿಗಳು (ಭವಿಷ್ಯವಾಣಿಯಲ್ಲಿ ನುಡಿದಿರುವ ಹಾಗೆ) ಕಟು ವಿರೋಧಿಗಳಾದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಸಂಬಂಧಿಕರಲ್ಲಿ ತಮ್ಮ ಚಿಕ್ಕಪ್ಪನ ಮಗನಾದ ಮಿರ್ಝ ನಿಝಾಮುದ್ದೀನ್ ಮತ್ತು ಮಿರ್ಝ ಇಮಾಮುದ್ದೀನ್ ತಮ್ಮ ಕಟು ವಿರೋಧಿಯಾಗಿದ್ದರು ಅವರು ಅಂಗಡಿ ನಿರ್ವಹಿಸುತ್ತಿರುವುದು ಎಂದು ಹೇಳುತ್ತಿದ್ದರು ನೌಝುಬಿಲ್ಲಾಹ್ ಕೆಲವೊಮ್ಮೆ ಯಾರನ್ನಾದರು ಇಡೀ ರಾತ್ರಿ ಅವರ ಮನೆಗಡೆ ತಿರುಗಿ ಕೆಟ್ಟ ಕೊಳಕ ಬೈಗುಳಗಳನ್ನು ಬೈಯುವುದಕ್ಕೆ ನಿಶ್ಚಯಿಸುತ್ತಿದ್ದರು. ಇಂತಹ ವ್ಯಕ್ತಿವೋರ್ವನ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಹೇಳಿದರು ಇಡೀ ರಾತ್ರಿ ಬೈದು ಬೈದು ಆಯಸ್ಸಾಗಿರಬಹುದು ಆತನ್ನು ತಿನ್ನಲು ಏನನ್ನಾದರೂ ಕಳುಹಿಸಿರಿ, ಸುಬ್ಹಾನಲ್ಲಾಹ್ ತಮ್ಮ ಸರದಾರರಾದ ಪ್ರವಾದಿ ಮುಹಮ್ಮದ್(ಸ)ರವರ ಗುಲಾಮಗಿರಿಯಲ್ಲಿ ತಮ್ಮ ನೈತಿಕತೆಯು ಎಂತಹ ದೊಡ್ಡದ್ದಾಗಿತ್ತು. ಖಾದಿಯಾನ್‌ನಲ್ಲಿ ತಮ್ಮ ಸಂಬಂಧಿಕರನ್ನು ಹೊರತುಪಡಿಸಿ

ಅಹ್ಮದಿಯೇತರರು ಮತ್ತು ಮುಸ್ಲೇತರರು ಸಹ ಕಟು ವಿರೋಧಿ ಮತ್ತು ವೈರಿಗಳಾಗಿದ್ದರು. ಓಮ್ಮೆ ಅಹ್ಮದ್ ನುರ್ ಕಾಬುಲಿ ಸಾಹೇಬರು ಹೇಳುತ್ತಾರೆ ಹುಝೂರ್, ವಿರೋಧಿಗಳು ತೀವ್ರವಾಗಿ ದ್ವೇಶಿಸುತ್ತಾರೆ ಮತ್ತು ವಿರೋಧಿಸುತ್ತಾರೆ ನೀವು ನಮಗೆ ಅವರನ್ನು ಎದುರಿಸಲು ಅನುಮತಿ ನೀಡಿರಿ. ಹೇಳಿದರು: ಇಲ್ಲ ತಾಳ್ಮೆಯಿಂದಿರಿ ಮತ್ತು ತಾಳ್ಮೆಯನ್ನು ಯಾವತ್ತೂ ಕಳೆದುಕೊಳ್ಳ ಬೇಡಿರಿ. ತಾಳ್ಮೆವಹಿಸಲು ಆಗದಿದ್ದರೆ ಕಾಬುಲ್‌ಗೆ ಹಿಂದಿರುಗಿರಿ. ನಿಮ್ಮನ್ನು ನಿಮ್ಮದೇ ರಸ್ತೆಯಲ್ಲಿ ಅಡ್ಡ ಹಾಕಿ ಒಂದು ಗೋಡೆಯನ್ನು ನಿರ್ಮಿಸಿ ನಿಮ್ಮನ್ನು ಮತ್ತು ನಿಮ್ಮ ಸಹಾಬರವರನ್ನು ತೊಂದರೆ ನೀಡಲಾಯಿತು. ಮುಖದ್ದಮೆ ನಡೆದಾಗ ಹುಝೂರ್ ಅಲಯಹಿಸ್ಸಲಾಮ್‌ರವರ ಪರವಾಗಿ ತೀರ್ಪು ನೀಡಲಾಯಿತು. ಹುಝೂರ್ ಅಲೈಹಿಸ್ಸಲಾಮ್‌ರವರಿಗೆ ನೀವು ಖರ್ಚುವೆಚ್ಚವನ್ನು ಕೇಳಬಹುದು ಎಂದು ಅನುಮೋದಿಸಲಾಯಿತು ಆದರೆ ಹುಝೂರ್ ಅಳಯಹಿಸ್ಸಲಾಮ್‌ರವರು ಅವರಿಗೆ ಕ್ಷಮಿಸಿದರು. ಇದು ಸಂಬಂಧಿಕರ ದುರಾವಸ್ಥೆ ಆಗಿತ್ತು. ಇನ್ನೊಂದೆಡೆ ಮೌಲವಿ ಮುಹಮ್ಮದ್ ಹುಸೇನ್ ಬಟಾಲ್ವಿಯವರು ಇಡೀ ಭಾರದ ದೇಶವನ್ನು ಸುತ್ತಿ 200 ಮೌಲವಿಗಳಿಂದ (ನೌಝೂಬಿಲ್ಲಾಹ್) ಹುಝೂರ್ ಅಲೈಹಿಸ್ಸಲಾಮ್‌ರವರು ಕಾಫಿರ್ ಮತ್ತು ದಜ್ಜಾಲ್ ಆಗಿದ್ದಾರೆ ಅವರ ಹಿಂದ ನಮಾಝ್ ಆಗುವುದಿಲ್ಲ, ಸಲಾಮ್ ಹೇಳುವುದು ಅವರೊಂದಿಗೆ ಮತನಾಡುವುದು ಧರ್ಮನಿಷಿದ್ಧವಾಗಿದೆ ಎಂದು ಫತ್ವಗಳನ್ನು ಪಡೆದುಕೊಂಡನು.

ಇದರ ಕಾರಣದಿಂದ ಇಡೀ ಭಾರತದಲ್ಲಿ ವಿರೋಧದ ಚಂಡಮಾರುತವೆ ಸೃಷ್ಟಿಯಾಯಿತು. ಅಹ್ಮದಿಯರನ್ನು ಹೊಡಿಯಲಾಗುತ್ತಿತ್ತು, ಅವರ ಆಸ್ತಿಗಳನ್ನು ಲೂಟಿ ಮಾಡಲಾಗುತ್ತಿತ್ತು ಎಲ್ಲಿಯವರೆಗೆ ಎಂದರೆ ಕೆಲವರನ್ನು ಶಹೀದ್ ಸಹ ಮಾಡಲಾಯಿತು ಶಹೀದ್ ಆದವರಲ್ಲಿ ಹಝ್ರತ್ ಮೌಲವಿ ಅಬ್ದುರ್ರಹ್ಮಾನ್ ಸಾಹಿಬ್ ಶಹೀದ್ ಮತ್ತು ಹಝ್ರತ್ ಮೌಲಾನ ಅಬ್ದುಲ್ಲತೀಫ್ ಸಾಹಿಬ್‌ರವರು ಅಹ್ಮದಿ ಹುತಾತ್ಮರ ಪಟ್ಟಿಯಲ್ಲಿ ಶಾಮಿಲ್ ಆಗಿದ್ದಾರೆ.

ಇಲ್ಲಿ ವಿರೋಧ ವ್ಯಕ್ತವಾದರೆ ಅಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರಿಗೆ ಅಲ್ಲಾಹನು ಜಮಾಅತ್ತಿಗೆ ಅಭಿವೃದ್ಧಿಯ ಶುಭವಾರ್ತೆಯನ್ನು ನೀಡುತ್ತಿದ್ದನು. ಅಲ್ಲಾಹನು ಅತ್ಯಂತ ಬೃಹತ್ ವಿಜಯಗಳ ಶುಭವಾರ್ತೆಯನ್ನು ನೀಡಿದನು. ಹೀಗೆ ಅಲ್ಲಾಹನು ಅವರಿಗೆ ಶುಭವಾರ್ತೆಯನ್ನು ನೀಡುತ್ತ ಹೇಳಿದನು:

ನೀನು ಪರಾಜಿತನಾಗಿ, ಅಂದರೆ ಬಾಹ್ಯವಾಗಿ ನೀನು ಪರಾಜಿತನಾಗಿ ಕೀಳಾಗಿ ಕಂಡರೂ ಅಂತಿಮವಾಗಿ ನೀವು ವಿಜಯಶಾಲಿಯಾಗುವಿರಿ, ಅಂತಿಮ ಫಲಿತಾಂಶವು ನಿಮ್ಮ ಪರವಾಗಿರುತ್ತದೆ. ನಿಮ್ಮ ಬೆನ್ನು ಮುರಿದಿರುವ ಎಲ್ಲಾ ಹೊರೆಗಳಿಂದ ನಾವು ನಿಮ್ಮನ್ನು ಮುಕ್ತಗೊಳಿಸುತ್ತೇವೆ. ನಿಮ್ಮ ಅನನ್ಯತೆ, ನಿಮ್ಮ ಶ್ರೇಷ್ಠತೆ ಮತ್ತು ನಿಮ್ಮ ಪರಿಪೂರ್ಣತೆಯ ಬಗ್ಗೆ ಹರಡಲು ಅಲ್ಲಾಹನು ನಿರ್ಧರಿಸಿದ್ದಾನೆ. ಅಲ್ಲಾಹನು ನಿಮ್ಮ ಮುಖವನ್ನು ಬಹಿರಂಗಗೊಳಿಸುತ್ತಾನೆ ಮತ್ತು ನಿಮ್ಮ ಛಾಯೆಯನ್ನು ವಿಸ್ತರಿಸುತ್ತಾನೆ. ಓರ್ವ ಮುನ್ನೆಚ್ಚರಿಕೆ ನೀಡುವವನು ಜಗತ್ತಿಗೆ ಬಂದನು, ಆದರೆ ಜಗತ್ತು ಅವನನ್ನು ಸ್ವೀಕರಿಸಲಿಲ್ಲ, ಆದರೆ ಅಲ್ಲಾಹನು ಅವನನ್ನು ಸ್ವೀಕರಿಸುತ್ತಾನೆ ಮತ್ತು ಅವನ ಸತ್ಯವನ್ನು ಪ್ರಬಲ ಆಕ್ರಮಣಗಳೊಂದಿಗೆ ಪ್ರದರ್ಶಿಸುತ್ತಾನೆ. ಶೀಘ್ರದಲ್ಲೇ ಅವನಿಗೆ ಒಂದು ದೊಡ್ಡ ರಾಜ್ಯವನ್ನು ದಯಪಾಲಿಸಲಾಗುತ್ತದೆ............ ಮತ್ತು ಸಂಪತ್ತುಗಳು ಅವನಿಗೆ ತೆರೆದುಕೊಳ್ಳುತ್ತವೆ......... ನಾನು ನಿನ್ನನ್ನು ಭೂಮಿಯ ತುದಿಯವರೆಗೂ ಗೌರವದಿಂದ ಪ್ರಸಿದ್ಧಿಪಡಿಸುವೆ ಮತ್ತು ನಿನ್ನ ಹೆಸರನ್ನು ಉನ್ನತೀಕರಿಸುವೆನು ಮತ್ತು ನಿನ್ನ ಪ್ರೀತಿಯನ್ನು ಜನರ ಹೃದಯದಲ್ಲಿ ಇರಿಸುವೆನು. ನಾವು ನಿಮ್ಮನ್ನು ಮಸಿಹ್ ಇಬ್ನ್-ಎ-ಮರ್ಯಮ್ (ಮರಿಯಮ್‌ನ ಮಗ ಮೆಸ್ಸಿಹನ್ನಾಗಿ) ಮಾಡಿದ್ದೇವೆ.

(ತಧ್ಕಿರಃ: ಪುಟ–148–149)

ಗೌರವಾನ್ವಿತ ಕೇಳುಗರೇ!! ಬೃಹತ್ ವೈಭವಯುತ ಭವಿಷ್ಯವಾಣಿಗಳ ಪ್ರಕಾರ ವಿಜಯಗಳ ಸರಪಳಿಯು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಅನುಗ್ರಹದಾಯಕ ಕಾಲದಲ್ಲಿಯೇ ಪ್ರಾರಂಭವಾಗಿದ್ದವು. ಅವರು 1884ರಲ್ಲಿ ಬರಾಹೀನೆ ಅಹ್ಮದಿಯಾ ಎಂಬ ಗ್ರಂಥವನ್ನು ರಚಿಸಿದಾಗ ಇಡೀ ರಾಷ್ಟ್ರದಲ್ಲಿ ಅದರ ಮೆಚ್ಚುಗೆ ಪಡೆದಿತ್ತು. ಮತ್ತು ಅದರ ಮೂಲಕ ಇಸ್ಲಾಮ್‌ನ ಘನತೆ ಮತ್ತು ಗೌರವ ವ್ಯಕ್ತವಾಗುವ ಧ್ವನಿ ಕೇಳಿಸಿತು. ಬರಾಹೀನೆ ಅಹ್ಮದಿಯಾ ಗ್ರಂಥದ ಮೂಲಕ ಅವರು ಇಸ್ಲಾಮ್‌ನ ಘನತೆಗಾಗಿ ಎಂತಹ ಸೇವೆ ನೀಡಿದರು ಎಂದರೆ ಅಂತಹ ಸೇವೆ 1400 ವರ್ಷಗಳ ಕಾಲ ಯಾರೂ ನೀಡಲಿಲ್ಲ ಎಂದು ವಿರೋಧಿಗಳು ಹೇಳತೊಡಗಿದರು. ತದನಂತರ 1891ರಲ್ಲಿ ಅಲ್ಲಾಹನ ಆಜ್ಞೆಯ ಮೆರೆಗೆ ಅವರು ಮಸೀಹಿಯ್ಯತ್ ಹಾಗೂ ಮಹ್‌ದಿವೀಯತ್‌ನ ದಾವೆ ಮಾಡಿದಾಗ ಕಟು ವಿರೋಧವನ್ನು ಎದುರಿಸಿದರು. ಪ್ರಸಿದ್ಧ ಮೌಲ್ವಿಗಳಾದ ಮೌಲವಿ ನಝೀರ್ ಹುಸೇನ್ ದೆಹಲ್ವಿ, ಮೌಲವಿ ಮುಹಮ್ಮದ್ ಹುಸೇನ್ ದೆಹಲ್ವಿ ಮತ್ತು ಮುಹಮ್ಮದ್ ಬಶೀರ್ ಅಹ್ಮದ್ ಅವರೆಲ್ಲರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರೊಂದಿಗೆ ಚರ್ಚೆಗಳನ್ನು ನಡೆಸಿದರು. ಆ ಚರ್ಚೆಗಳಲ್ಲಿ ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಅಖ್ದಸ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೆ ವಿಜಯಶಾಲಿಯನ್ನಾಗಿಸಿರುವುದು ಇತಿಹಾಸಿ ಸಾಕ್ಷಿಯಾಗಿದೆ. ಮತ್ತು ಮೌಲವಿಗಳು ಪವಿತ್ರ ಖುರ್‌ಆನಿನಿಂದ ಈಸ ಮಸೀಹನ ಜೀವಂತಿಕೆಯನ್ನು ಸಾಬೀತು ಪಡಿಸಲು ವಿಫಲರಾದರು ಮತ್ತು ಈ ಮಹಾನ್ ವಿಜಯ ಇಂದಿಗೂ ಜಾರಿಯಲ್ಲಿದೆ ಮತ್ತು ಮೌಲವಿಗಳ ಪ್ರಸ್ತುತ ಕಾಲದಲ್ಲಿ ಈಸ ಮಸೀಹರ ಮರಣದ ಕುರಿತು ಮಾತನಾಡಲು ಹಿಂಜರಿಯುತ್ತಾರೆ. ಅವರ ಪರಿಸ್ಥಿತಿ ಹೇಗಾಗಿದೆ ಎಂದರೆ ಅವರು ಈಸ ಮಸೀಹರ ಮರಣದ ಕುರಿತು ಅಥವಾ ಜೀವಂತಿಕೆಯ ಕುರಿತು ಅಥವಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಸತ್ಯತೆ ಕುರಿತು ಪವಿತ್ರ ಖುರ್‌ಆನ್ ಹಾಗೂ ಹದೀಸ್‌ನ ಬೆಳಕಿನಲ್ಲಿ ಎಂಬುದರ ಬಗ್ಗೆ ಸಾಕ್ಷ್ಯಾಧಾರದಿಂದ ಮಾತನಾಡದೆ ಕೇವಲ ಬೈಗುಳದಿಂದಲೇ ತಮ್ಮ ದಾಹವನ್ನು ತೀರಿಸಿಕೊಳ್ಳುತ್ತಾರೆ. ಪವಿತ್ರ ಖುರ್‌ಆನ್ ಅಲ್ಲಾಹನು ತನ್ನ ಕಡೆಯಿಂದ ಸಂದೇಶವಾಹಕರನ್ನು ಕಳುಹಿಸಿದಾಗ ಆ ಕಾಲಘಟ್ಟದ ವಿರೋಧಿಗಳು ಸಾಕ್ಷ್ಯಧಾರಗಳಿಂದ ಸೋತು ಹೋಗಿ ಆತನ್ನನು ಅವಮಾನಿಸುತ್ತಾರೆ ಎಂದು ಸ್ಪಷ್ಟವಾಗಿ ಹೇಳುತ್ತದೆ ಎಂದು ಅವರು ಅರಿಯುವುದಿಲ್ಲ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳುತ್ತಾನೆ:

**ಯಾ ಹಸರತನ್ ಅಲಲ್ ಇಬಾದಿ ಮಾ ಯಾತೀಹಿಮ್ ಮಿರ್ರಸೂಲಿನ್ ಇಲ್ಲ ಕಾನೂ ಬಿಹೀ ಯಸ್‌ತಹ್‌ಝಿಊನ್**

**(ಯಾಸೀನ್: 31)**

ಈ ವಿರೋಧದ ಕಾಲದಲ್ಲಿ ತಮ್ಮ ಕೆಲವು ಆತ್ಮೀಯರಿಂದ ನಷ್ಟ ಅನುಭವಿಸಿದ್ದರು. ಅಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಅಲ್ಲಾಹನ ಆಜ್ಞೆಯಿಂದ 1891ರಲ್ಲಿ ಜಲ್ಸ ಸಲಾನದ ಬುನಾದಿಯನ್ನು ಹಾಕಿದರು. ಅಲ್ಲಾಹನಿಂದ ಜ್ಞಾನವನ್ನು ಪಡೆದು ಹೀಗೆ ಘೋಷಿಸಿದರು:

"ಈ ಜಲ್ಸಾವನ್ನು ಸಾಮಾನ್ಯ ಜಲ್ಸಾಗಳಂತೆ ಯೋಚಿಸದಿರಿ. ಇಲ್ಲಿ ನಡೆಯುವಂತಹ ಎಲ್ಲಾ ಕಾರ್ಯಗಳು ದೇವ ಸಮ್ಮತಿ ಹೊಂದಿವೆ ಮತ್ತು ಇಸ್ಲಾಮಿನ ಮಹೋನ್ನತ ಸ್ಥಾನ ಪ್ರದರ್ಶಿಸುವುದಾಗಿದೆ. ಈ ಸಂಘಟನೆಯ ಬುನಾದಿಯನ್ನು ಅಲ್ಲಾಹನು ಸ್ವತಃ ತನ್ನ ಕೈಯಿಂದ ಇಟ್ಟಿರುವನು. ಇದಕ್ಕಾಗಿ ಸಮುದಾಯಗಳನ್ನು ಸಿದ್ಧಗೊಳಿಸಲಾಗಿದೆ. ಅವು ಅತೀ ಶೀಘ್ರದಲ್ಲಿ ಬಂದು ಸೇರುವುದು. ಏಕೆಂದರೆ ಇದು ಆ ಪ್ರತಾಪವಂತನಾದ ಸರ್ವಶಕ್ತನಾದ ಅಲ್ಲಾಹನ ಕಾರ್ಯವಾಗಿದೆ ಅವನ ಮುಂದೆ ಯಾವುದೂ ಅಸಾಧ್ಯವಲ್ಲ" (ಇಶ್ತಿಹಾರ್ 7–12–1891)

ಆ ಕಾಲದಲ್ಲಿ, ಮೊದಲ ಜಲ್ಸದಲ್ಲಿ 70 ಜನರು ಭಾಗಿಯಾಗಿದ್ದರು. ವೈರಿಗಳು ಅವರ ಮೇಲೆ ಫತ್ವಗಳನ್ನು ಹೊರಡಿಸಿ ಅವರು ಮುಸ್ಲಿಮರನ್ನು ತಮ್ಮೊಂದಿಗೆ ಬಂದು ಸೇರಲು ಮತ್ತು ಬೈಅತ್ ಮಾಡಲು ತಡೆಗಟ್ಟಿದ್ದಾರೆ ಎಂದು ಭಾವಿಸಿದರು ಆದರೆ ಆ ಎಲ್ಲಾ ವೈರಿಗಳು ತಪ್ಪಾದರು, ಖಾದಿಯಾನ್‌ನಲ್ಲಿ ಕಾಂತಿಯು ಇನ್ನು ಬೆಳೆಯಿತು.

ತದನಂತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ನಿಧನದ ನಂತರ ಖಿಲಾಫತೆ ಅಹ್ಮದಿಯಾದ ಮೊದಲನೇ ಜಲ್ಸದಲ್ಲಿ ಮೂರು ಸಾವಿರ ಜನರು ಭಾಗವಹಿಸಿದರು. ಹೀದೆ ಖಿಲಾಫತ್ ಕಾಲಘಟ್ಟದಲ್ಲಿ ಜಲ್ಸ ಸಲಾನದ ಕಾಂತಿಯು ಪ್ರತಿಯೊಂದು ರೂಪದಲ್ಲಿ ಬೆಳೆಯಲು ಪ್ರಾರಂಭಿಸಿತು ಮತ್ತು ಹಾಜರಾಗುವವರ ಜನಸಂಖ್ಯೆಯೂ ಸಾವಿರಾರು ಗಟ್ಟಲೆಯಿಂದ

ಲಕ್ಷಾಂತರ ಮಟ್ಟಿಗೆ ತಲುಪಿತು. ಲೋಕದ ಅನೇಕ ಕಡೆಯಿಂದ ಇ ಜಲ್ಸದಲ್ಲಿ ಪ್ರತಿನಿಧಿಗಳು ಭಾಗವಹಿಸುತ್ತಾರೆ, ಅನೇಕ ಮುಸ್ಲಿಮೇತರು, ಅಹ್ಮದೀಯೇತರು, ಸಾಹಿತಿಗಳು, ನೇತಾರರು ಮತ್ತು ಅನ್ಯ ರಾಷ್ಟ್ರಗಳ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಲು ಮತ್ತು ತಮ್ಮ ಕಡೆಯಿಂದ ಸಂದೇಶಗಳನ್ನು ಕಳುಹಿಸುವುದರಲ್ಲಿ ತಮ್ಮ ಗೌರವದ ವಿಷಯ ಎಂದು ಭಾವಿಸುತ್ತಾರೆ. ಮತ್ತು ಪ್ರತಿಯೊಂದು ಧರ್ಮದ ಪ್ರೀತಿ, ಪ್ರೇಮ, ವಾತ್ಸಲ್ಯ ಮತ್ತು ಶಾಂತಿಯನ್ನು ಎತ್ತಿ ಹಿಡಿಯಲು ಒಂದು ಉತ್ತಮ ವೇದಿಕೆಯನ್ನು ನೀಡುತ್ತದೆ. ಅಲ್ಲಿ ಯಾವುದೇ ರೀತಿಯ ಧರ್ಮ, ಜನಾಂಗ, ಪ್ರದೇಶ ಎಂಬ ಭೇದಭಾವ ಇಲ್ಲದೆ ಪ್ರತಿಯೊಬ್ಬರು ಪ್ರೀತಿಯ ಧ್ವನಿಯನ್ನು ಎತ್ತಿ ಹಿಡಿಯುತ್ತಾರೆ ಮತ್ತು ಪ್ರೀತಿಯ ಸಂದೇಶವನ್ನು ಕಳುಹಿಸುತ್ತಾರೆ. ಅಲ್‌ಹಮ್‌ದುಲಿಲ್ಲಾಹ್! ಈಗ ಈ ಜಲ್ಸವನ್ನು ಎಂ.ಟಿ.ಎ ಮೂಲಕ ಇಡೀ ಲೋಕದಲ್ಲಿ ಕೇಳಲಾಗುತ್ತದೆ ಮತ್ತು ನೋಡಲಾಗುತ್ತದೆ ಮತ್ತು ಪ್ರಪಂಚದ ಅನೇಕ ಭಾಷೆಗಳಲ್ಲಿ ಅನುವಾದವೂ ಜೊತೆ ಜೊತೆಗೆ ನಡೆಯುತ್ತದೆ. ಮತ್ತು ಈಗ 2021ರಲ್ಲಿ ಯು.ಕೆ ಜಲ್ಸ ಸಲಾನ ನಡೆಯಿತು ಅದರಲ್ಲಿ ಜಗತ್ತು ಒಂದು ಅದ್ಭುತವಾದ ದೃಶ್ಯ ಕಂಡಿತು. ಅದೇನೆಂದರೆ ಅದರಲ್ಲಿ ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ಜಲ್ಸವನ್ನು ಆಲಿಸುವವರು, ಒಬ್ಬರನ್ನೊಬ್ಬರು ತಮ್ಮ ತಮ್ಮ ದೇಶದಲ್ಲಿ ಜಲ್ಸವನ್ನು ಆಲಿಸುತ್ತಿರುವುದು ನೋಡಿದರು ಹೀಗೆ ಪೂರ್ವಿಕ ಹಿರಿಯರ ಭವಿಷ್ಯವಾಣಿಯೂ ಪೂರ್ಣಗೊಂಡಿತು ಅದೇನೆಂದರೆ: **ಇನ್ನಲ್ ಮುಮಿನು ಫೀ ಝಮಾ........... (ಬಹಾರುಲ್ ಅನ್ವಾರ್, ಶೀಖ್ ಮುಹಮ್ಮದ್ ಬಾಖಿರ್ ಅಲ್‌ಮಜ್ಲಸಿ ಬಾಬ್ 27, ಪುಟ–441)**

ಅರ್ಥಾತ್:ಇಮಾಮ್ ಮಹ್‌ದಿಯವರ ಕಾಲಘಟ್ಟದಲ್ಲಿ ಪೂರ್ವದಿಕ್ಕಿನಲ್ಲಿರುವ ಮುಮಿನ್ ಪಶ್ಚಿಮದಲ್ಲಿರುವ ತನ್ನ ಸಹೋದರನನ್ನು ನೋಡುವನು. ಅದೇ ರೀತಿ ಪಶ್ಚಿಮದಿಕ್ಕಿನಲ್ಲಿರುವ ಮುಮಿನ್ ಪೂರ್ವದಲ್ಲಿರುವ ತನ್ನ ಸಹೋದರನನ್ನು ನೋಡುವನು. ಅಲ್ಲಾಹನ ಅಪಾರವಾದ ಅನುಗ್ರಹದಿಂದ ಖಿಲಾಫತ್ ಅಹ್ಮದಿಯಾದ ಮೂಲಕ ಹಾಗೂ ಹಝ್ರತ್ ಅಖ್ದಸ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಅಲ್ಲಾಹನ ಆಜ್ಞೆಯಿಂದ ಆರಂಬಿಸಿರುವ ಜಲ್ಸ ಸಲಾನದ ಮೂಲಕ ಇಸ್ಲಾಮ್ ಧರ್ಮದ ಪ್ರಾಬಲ್ಯದ ಈ ಭವಿಷ್ಯವಾಣಿಯು ಬಹಳ ವೈಭವದಿಂದ ಪೂರ್ಣಗೊಂಡಿದೆ. ಅದೇ ರೀತಿ ಹೇಳಿದರು:

**ಯುನಾದಿ ಮುನಾದಿ ಮಿನಸ್ಸಮಾಯಿ ಬಿಇಸ್ಮಿಲ್ ಮಹದಿ ಫಯಸ್‌ಮು ಮಿನ್ ಬಿಲ್ ಮಶ್ರಿಖಿ ವಮಿನ್ ಬಿಲ್ ಮಗ್ರಿಬಿ ಹತ್ತಾ ಲಾ ಯಬ್ಖ ರಾಖಿದ್ ಇಲ್ಲ ಇಸ್ತೈಖಝ್. (ಅಖ್ದುದ್ದರ್ ಫೀ ಅಖ್ಬಾರಿಲ್ ಮುನ್‌ತಝರ್ ಅಲ್‌ಫಸ್ಲ್ ಅಸ್ಸಾಲಿಸ್, ಪುಟ–171, ಅರ್ದನ್ ಮುದ್ರಣ)**

ಅರ್ಥಾತ್: ಮಹ್ದಿಯು ಹೆಸರಿನಲ್ಲಿ ಅಹ್ವಾನಿಸುವವನು ಅಹ್ವಾನಿಸುತ್ತಾನೆ ಮತ್ತು ಆತನ ಕರೆಯನ್ನು ಪೂರ್ವ ಮತ್ತು ಪಶ್ಚಿಮದ ಪ್ರತಿಯೊಂದು ವ್ಯಕ್ತಿಯು ಕೇಳಿಸಿಕೊಳ್ಳುವನು ಎಲ್ಲಿಯವರೆಗೆ ಎಂದರೆ ಒಂದು ಸಂದರ್ಭದಲ್ಲಿ ಮಲಗಿರುವವನು ಜಾಗೃತಗೊಳ್ಳುವನು.

ಅದಲ್ಲದೆ ಈ ಜಲ್ಸವೂ ಪ್ರಪಂಚದ ಎಲ್ಲ ಆತ್ಮಗಳಿಗೆ ಬೈಅತ್‌ನ ಮೂಲಕ ಏಕತ್ವದ ಲಡಿಯಲ್ಲಿ ಪೋಣಿಸುತ್ತಿದೆ. ಇದರ ಬಗ್ಗೆ ಹಝ್ರತ್ ಶಾಹ್ ರಫೀಉದ್ದೀನ್ ಸಾಹಿಬ್‌ರವರ ಭವಿಷ್ಯವಾಣಿ 'ಇಮಾಮ್ ಮಹದಿಯವರ ಕಾಲದಲ್ಲಿ ಬೈಅತ್‌ನ ಸಂದರ್ಭದಲ್ಲಿ ಆಕಾಶದಿಂದ ಒಂದು ಧ್ವನಿ ಕೇಳಿಸಲಾಗುವುದು ಅಂದರೆ **ಹಾಝಾ ಖಲೀಫತುಲ್ಲಾಹಿಲ್ ಮಹದಿ ಫಸ್‌ಮಊ ಲಹು ವಅತೀಊ** ಅಂದರೆ ಇವರು ಖಲೀಫತುಲ್ಲಾಹ್ ಮಹದಿ ಯಾಗಿರುವರು ಆತನನ್ನು ಸ್ವೀಕರಿಸಿರಿ ಮತ್ತು ಅವನೊಂದಿಗೆ ವಿಧೇಯರಾಗಿರಿ. (ಖಿಯಾಮತ್‌ನಾಮ, ಪುಟ–4) ಬೈಅತ್‌ನ ವೈಭವಯುತ ದೃಶ್ಯವು ಜಲ್ಸ ಸಲಾನದ ಸತ್ಯತೆ ಹಾಗೂ ಮಸೀಹ್ ಮೌಊದ್‌ರ ಬೃಹತ್ ವಿಜಯಕ್ಕೆ ಸಾಕ್ಷಿಯಾಗಿದೆ.

ಹೀಗಾಗಿ ಜಲ್ಸ ಸಲಾನ ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಭವಿಷ್ಯವಾಣಿಗಳ ಸತ್ಯತೆ ಆಗಿದೆ ಮತ್ತು ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಅಭಿವೃದ್ಧಿಯಲ್ಲಿ ಒಂದು ಮೈಲಿಗಲ್ಲಿನ ಸ್ಥಾನ ಪಡೆದಿದೆ. ಇದರ ನಂತರ 1894ರಲ್ಲಿ ಅಲ್ಲಾಹನು ತನ್ನ ಅನುಗ್ರಹದಿಂದ ಇಮಾಮ್ ಮಹದಿಯ ಬಗ್ಗೆ ಪ್ರವಾದಿ ಮುಹಮ್ಮದ್(ಸ)ರವರ ಸೂರ್ಯ ಚಂದ್ರ ಗ್ರಹಣದ ಬಗ್ಗೆ ಇರುವ ಭವಿಷ್ಯವಾಣಿಯನ್ನು ಬಹಳ ವೈಭವದಿಂದ ಸಂಪೂರ್ಣಗೊಳಿಸಿ ಸಯ್ಯದುನಾ ಹಝ್ರತ್ ಅಖ್ದಸ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ ಅಲೈಹಿಸ್ಸಲಾಮ್‌ರವರ ಸತ್ಯತೆಗೆ ಒಂದು ದೃಷ್ಟಾಂತವನ್ನು ವ್ಯಕ್ತಗೊಳಿಸಿದನು. ಪ್ರವಾದಿ ಮುಹಮ್ಮದ್(ಸ) ರವರ ಆ ಭವಿಷ್ಯವಾಣಿಯು ಸತ್ಯವಾಗಿದ್ದಕ್ಕೆ ಆಕಾಶದ ಸಾಕ್ಷಿಯ ರೂಪದಲ್ಲಿ ಪ್ರಕಾಶಗೊಳ್ಳುತ್ತಿರುವ ಸೂರ್ಯನ ಹಾಗೆ ಅವರ ಸತ್ಯತೆಯನ್ನು ಸಾಬೀತು ಪಡಿಸಿದನು.

ಆದರೆ ಲೋಕವು ಈ ಆಕಾಶದ ಪುರಾವೆಯಿಂದ ಲಾಭಗಳಿಸದಿದ್ದಾಗ ಪುರಾತನ ಗ್ರಂಥದ ಭವಿಷ್ಯವಾಣಿಗಳ ಬೆಳಕಿನಲ್ಲಿ ಅಂದರೆ ಇಮಾಮ್ ಮಹ್ದಿಯ ಕಾಲದಲ್ಲಿ ತಾಊನ್(ಪ್ಲೇಗ್) ಮಹಾಮಾರಿಯು ಹರಡುವುದು. 1898ರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅಲ್ಲಾಹನಿಂದ ಇಲ್‌ಹಾಮ್ ಪಡೆದು ತಾಊನ್ (ಪ್ಲೇಗ್) ರೋಗವು ಹರಡುವುದು ಎಂಬ ಭವಿಷ್ಯವಾಣಿ ನುಡಿದರು. ಈ ಭವಿಷ್ಯವಾಣಿಯು ಪವಿತ್ರ ಖುರ್‌ಆನಿನಲ್ಲಿಯೂ ಇದೆ ಮತ್ತು ಪ್ರವಾದಿ ಮುಹಮ್ಮದ್(ಸ) ಸಹ ಈ ಭವಿಷ್ಯವಾಣಿಯನ್ನುಡಿದರು.

ಪವಿತ್ರ ಖುರ್‌ಆನಿನಲ್ಲಿ ಸೂರಃ ಅನ್ನಮ್ಲ್‌ನ ವಚನ 83ರಲ್ಲಿ ಹೀಗಿದೆ: **ವ ಇಝಾ ವಖಅಲ್ ಖೌಲು ಅಲೈಹಿಮ್ ಅಖ್‌ರಜ್‌ನಾ ಲಹುಮ್ ದಾಬ್ಬತುಮ್ಮಿನಲ್ ಅರ್ಝಿ ತುಕಲ್ಲಿಮುಹುಮ್ ಅನ್ನ ನ್ನಾಸ ಕಾನೂ ಬಿಆಯಾತಿನಾ ಲಾ ಯು ಖಿನೂನ್**

ಅಂದರೆ: ಅವರ ನಾಶದ ಕುರಿತಿರುವ ಭವಿಷ್ಯದ ವಚನ ಈಡೇರಿದರೆ ಅವರಿಗಾಗಿ ಭೂಮಿಯಿಂದ ಒಂದು ಕ್ರಿಮಿಯನ್ನು ಹೊರಡಿಸುವೆವು. ಅದು ಅವರನ್ನು ಘಾಸಿಗೊಳಿಸುವುದು, ಏಕೆಂದರೆ ಜನರು ನಮ್ಮ ದೃಷ್ಟಾಂತಗಳನ್ನು ನಂಬಲಿಲ್ಲ.

ಹದೀಸಿನಲ್ಲಿ ಹೀಗೆ ವರದಿಯಾಗಿದೆ ಅಂದರೆ ಇಮಾಮ್ ಮಹದಿಯ ಕಾಲಘಟ್ಟದಲ್ಲಿ ಈ ದೃಷ್ಟಾಂತವು ಕಣಿಸಿಕೊಳ್ಳುವುದು ಅಂದರೆ ಆ ಕಾಲದಲ್ಲಿ ಎಷ್ಟು ತೀವ್ರವಾಗಿ ಪ್ಲೇಗ್ ರೋಗವು ಹರಡುವುದು ಎಂದರೆ ಯಾರ ಮನೆಯಲ್ಲಿ 7 ಜನರಿದ್ದಾರೋ ಅವರಲ್ಲಿ 5 ಜನರು ಮರಣ ಹೊಂದುವರು. ಹೇಳಿದರು ಇಮಾಮ್ ಮಹದಿ ಅಲೈಹಿಸ್ಸಲಾಮ್‌ರವರ ಆಗಮನಕ್ಕಿಂತ ಮುಂಚೆ 2 ರೀತಿಯ ಮರಣಗಳು ಉಂಟಾಗುವುದು ಅದೇನೆಂದರೆ ಕೆಂಪು ಮರಣ ಮತ್ತು ಬಿಳಿ ಮರಣ. ಕೆಂಪು ಮರಣ ಎಂದರೆ ಯುದ್ಧಗಳು ಮತ್ತು ಬಿಳಿ ಮರಣಗಳು ಎಂದರೆ ಪ್ಲೇಗ್ ಮತ್ತು ಮಹಾಮಾರಿ ಹರಡುವುದು ಒಂದು ಮನೆಯಲ್ಲಿ 7 ಜನರಿದ್ದರೆ ಅವರಲ್ಲಿ 5 ಜನರು ಮರಣ ಹೊಂದುವರು. (ಬಹಾರುಲ್ ಅನ್ವಾರ್, ಪುಟ–156, ಅಕ್ಮಾಲುದ್ದೀನ್, ಮುದ್ರಣ ಅಲ್‌ಹೈದರ್ ಅನ್ನಜಫ್)

ಹೀಗೆ ಈ ಭವಿಷ್ಯವಾಣಿಗಳ ಪ್ರಕಾರ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಇಲ್‌ಹಾಮ್‌ನ ಬೆಳಕಿನಲ್ಲಿ ಹಝ್ರತ್ ಅಖ್ದಸ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರ ಕಾಲದಲ್ಲಿ ಭಾರತದಲ್ಲಿ ಬಹಳ ತೀವ್ರವಾಗಿ ಪ್ಲೇಗ್ ರೋಗವು ಹರಡಿತು, ಅದರಿಂದ ಲಕ್ಷಾಂತರ ಜನರು ಮರಣ ಹೊಂದಿದರು. ಇನ್ನೊಂದೆಡೆ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರಿಗೆ ಹೇಳಿದನು: ಯಾರು ನಿಮ್ಮ ಮನೆಯ ನಾಲ್ಕು ಗೋಡೆಗಳಲ್ಲಿ ಇರುವರೋ ಅವರು ಲಸಿಕೆ ಪಡದಿದ್ದರೂ ಪ್ಲೇಗ್ ರೋಗದಿಂದ ರಕ್ಷಿಸಲ್ಪಡುವರು. ಇದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕುಟುಂಬದವರಲ್ಲಿ ಮತ್ತು ನಿಮ್ಮ ಸಹಾಬರವರಲ್ಲಿ ಒಬ್ಬ ವ್ಯಕ್ತಿಯು ಸಹ ಪ್ಲೇಗ್‌ನಿಂದ ಮರಣ ಹೊಂದಿಲ್ಲ. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರನ್ನು ಅವಮಾನಿಸುವ ವಿರೋಧಿ ವಿದ್ವಾಂಸರಲ್ಲಿ ಅನೇಕ ಜನರು ಪ್ಲೇಗ್‌ನಿಂದ ಮರಣ ಹೊಂದಿದರು. ಹೀಗೆ ಅಲ್ಲಾಹನು ಇಡೀ ಪ್ರಪಂಚಕ್ಕೆ ಈ ಪವಾಡವನ್ನು ತೋರಿಸಿದನು. ಮತ್ತು ಹುಝೂರ್ ಅಲೈಹಿಸ್ಸಲಾಮ್‌ರವರು ವಾಗ್ದಾತ್ತ ಮಸೀಹ್ ಹಾಗೂ ಮಹದಿ ಎಂದು ಘೋಷಿಸಿದರು ಮತ್ತು ಪ್ಲೇಗ್ ರೋಗದ ಹರಡುವಿಕೆಯ ಬಗ್ಗೆಯೂ ಭವಿಷ್ಯವಾಣಿ ನುಡಿದಿದ್ದರು. ಅವರು ನುಡಿದಿದ್ದ ಭವಿಷ್ಯವಾಣಿಯ ಪ್ರಕಾರ ಪ್ಲೇಗ್ ರೋಗವು ಹರಡಿತು ಅದೇ ರೀತಿ ತಮ್ಮನ್ನು ಹಾಗೂ ತಮ್ಮ ಕುಟುಂಬದವರನ್ನು ಮತ್ತು ತಮ್ಮ ಮನೆಯ ನಾಲ್ಕು ಗೋಡೆಗಳೊಳಗೆ ಇರುವ ಎಲ್ಲರನ್ನು ರಕ್ಷಿಸಲಾಯಿತು. ಹೀಗೆ ಇಡೀ ಪ್ರಪಂಚವು ಈ ಪ್ಲೇಗ್ ರೋಗದ ಕಾರಣದಿಂದ ಅನೇಕ ಜನರು ಹಝ್ರತ್ ಅಖ್ದಸ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಮೇಲೆ ವಿಶ್ವಾಸ ತಂದರು ಮತ್ತು ಪ್ಲೇಗ್ ರೋಗವು ಸಹ ತಮ್ಮ ಅಭಿವೃದ್ಧಿಗೆ ಒಂದು ದೃಷ್ಟಾಂತವಾಗಿ ನೆಲೆನಿಂತಿತು ಎಂದು

ಸಾಕ್ಷಿಯಾಗಿದ್ದಾರೆ.

ಗೌರವಾನ್ವಿತ ಕೇಳುಗರೇ!! ಹಝ್ರತ್ ಅಖದ್ದಸ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಅನುಗ್ರಹದಾಯಕ ಕಾಲದಲ್ಲಿ ನೀವು ಜಮಾಅತೆ ಅಹ್ಮದಿಂಯಾದ ಅಭಿವೃದ್ಧಿಯ ಬಗ್ಗೆ ಮಾಡಿದ ಭವಿಷ್ಯವಾಣಿಗಳಲ್ಲಿ ಒಂದು ಭವಿಷ್ಯವಾಣಿ ಖಿಲಾಫತೆ ಅಹ್ಮದಿಯಾದ್ದಾಗಿದೆ. ಅದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು 'ಅಲ್‌ವಸಿಯ್ಯತ್' ಎಂಬ ಗ್ರಂಥದಲ್ಲಿ ಪ್ರಸ್ತಾಪಿಸಿದ್ದಾರೆ:

ಅವರು ಹೇಳುತ್ತಾರೆ: ಅಲ್ಲಾಹನ ದಿವ್ಯ ಶಕ್ತಿಯ ಎರಡನೆಯ ಪ್ರಕಟನೆಯನ್ನು ನೀವು ನೋಡುವುದು ಅವಶ್ಯಕವಾಗಿದೆ. ಅದು ಆಗಮಿಸುವುದು ನಿಮಗೆ ಉತ್ತಮವಾಗಿದೆ. ಅದು ಶಾಶ್ವತವಾಗಿದೆ. ಅದರ ಸರಪಳಿ ಪುನರುತ್ಥಾನದ ದಿನದ ತನಕ ಕಡಿದು ಹೋಗಲಾರದು. ನಾನು ನಿಮ್ಮ ಬಳಿಯಿಂದ ನಿರ್ಗಮಿಸದೆ ಆ ದ್ವಿತೀಯ ದಿವ್ಯ ಶಕ್ತಿ ಆಗಮಿಸಲಾರದು. ಆದರೆ ನಾನು ನಿಮ್ಮನ್ನು ಬಿಟ್ಟು ಹೋಗುವಾಗ ಅಲ್ಲಾಹನು ತನ್ನ ದ್ವಿತೀಯ ಶಕ್ತಿಯನ್ನು ನಿಮಗಾಗಿ ಕಳುಹಿಸಿ ಕೊಡುವನು. "ಬರಾಹೀನೆ ಅಹ್ಮದಿಯಾ" ಎಂಬ ಗ್ರಂಥದಲ್ಲಿ ಅಲ್ಲಾಹನ ವಾಗ್ದನವನ್ನು ಉಲ್ಲೇಖಿಸಲಾಗಿದೆ. ಆ ವಾಗ್ದನ ಪ್ರಕಾರ ದ್ವಿತೀಯ ದಿವ್ಯ ಶಕ್ತಿ ಸದಾಕಾಲ ನಿಮ್ಮ ಜೊತೆಗಿರುವುದು. ಆ ವಾಗ್ದನ ನನ್ನ ಬಗ್ಗೆ ಅಲ್ಲ. ಅದು ನಿಮ್ಮ ಎಂದರೆ ಜಮಾಅತ್ ಬಗ್ಗೆಯಾಗಿದೆ. ಅಲ್ಲಾಹನು ಹೀಗೆ ಹೇಳಿದ್ದಾನೆ. ನಿನ್ನ ಅನುಯಾಯಿಗಳ ಈ ಜಮಾತಿಗೆ ಪುನರತ್ಥಾನದ ದಿನದ ತನಕ ಅನ್ಯರ ಮೇಲೆ ಜಯವನ್ನು ದಯಪಾಲಿಸುವೆನು. (ಅಲ್ ವಸಿಯ್ಯತ್, ಪುಟ-8)

ಹೀಗಾಗಿ 27 ಮೇ 1908ರಿಂದ ಅಹ್ಮದಿಯಾ ಮುಸ್ಲಿಮ್ ಜಮಾಅತ್ತಿನಲ್ಲಿ ಖಿಲಾಫತ್ ವ್ಯವಸ್ಥೆಯು ಪ್ರಾರಂಭವಾಗಿದೆ. ಇಲ್ಲಿಯ ತನಕ 113 ವರ್ಷಗಳು ಕಳೆದಿದೆ ಮತ್ತು 'ಖಿಲಾಫತೆ ಅಹ್ಮದಿಯಾ'ದ ಮೂಲಕ ಅಹ್ಮದಿಯಾ ಜಮಾಅತ್ ಬಹಳ ಶೀಘ್ರವಾಗಿ ಅಭಿವೃದ್ಧಿ ಹೊಂದುತ್ತಾ ಹೋಗಿದೆ ಎಂದು ಇಡೀ ಲೋಕವೇ ಸಾಕ್ಷಿಯಾಗಿದೆ. ಇಂತಹ ಉದಾಹರಣೆ ಎಲ್ಲಿಯೂ ಕಾಣಲು ಸಾಧ್ಯವಿಲ್ಲ.

ಇಂದು ಅಹ್ಮದಿಯ್ಯತ್ ಖಾದಿಯಾನ್‌ನಿಂದ ಹೊರಟು ಪ್ರಪಂಚದ 213 ರಾಷ್ಟ್ರಗಳಲ್ಲಿ ಹರಡಿದೆ. ಇದರ ಬಗ್ಗೆ ಹಝ್ರತ್ ಅಮೀರುಲ್ ಮುಮಿನೀನ್(ಅತಬಿಅ) ರವರು 2019ರಲ್ಲಿ ಲಂಡನ್‌ನಲ್ಲಿ ಆಯೋಜಿಸಲಾದ ಜಲ್ಸ ಸಲಾನದಲ್ಲಿ ನೀಡಿದ ಭಾಷಣದಲ್ಲಿ ಘೋಷಿಸಿದರು. ಈ ಭಾಷಣವನ್ನು ಹುಝೂರ್(ಅತಬಿಅ) ರವರು 4 ಆಗಸ್ಟ್ 2019ರಂದು ನೀಡಿದರು. ಇದರಲ್ಲಿ ಅವರು ಕೇವಲ 2019 ಜಮಾಅತ್‌ನ ಅಭಿವೃದ್ಧಿಯ ಬಗ್ಗೆ ವಿವರಿಸಿದರು: 2018-2019ರ ತನಕ ಇಡೀ ವಿಶ್ವದಲ್ಲಿ 213 ರಾಷ್ಟ್ರಗಳಲ್ಲಿ ಹರಡಿವೆ. ಹುಝೂರ್(ಅತಬಿಅ) ರವರು ಇದನ್ನು ಸ್ಪಷ್ಟಿಸುತ್ತ ಹೇಳಿದರು: ಇದುವರೆಗೆ UNO ನಲ್ಲಿ 195 ರಾಷ್ಟ್ರಗಳ ಪ್ರತಿನಿಧಿಗಳಿದ್ದಾರೆ ಆದರೆ ಅದಲ್ಲದೆ ಇನ್ನು ಕೆಲವು ರಾಷ್ಟ್ರಗಳಿವೆ ಅವು UNO ನ ಸದಸ್ಯತ್ವ ಹೊಂದಿಲ್ಲ ಆದರೆ ಒಂದು ರಾಷ್ಟ್ರದ ಹಾಗೆ ಉಳಿದಿದೆ. ಹುಝೂರ್ ಅನ್ವರ್ ಹೇಳುತ್ತಾರೆ 1984ರಲ್ಲಿ ಕಾಲಘಟ್ಟದ ಖಲೀಫರಿಗೆ ಪಾಕಿಸ್ತಾನದ ಕಟು ವಿರೋಧದ ಕಾರಣದಿಂದ ವಲಸೆ ಹೋಗಬೇಕಾಯಿತು 1984 ರಿಂದ ಇದುವರೆಗೆ 121 ರಾಷ್ಟ್ರಗಳಲ್ಲಿ ಜಮಾಅತ್ ಹರಡಿದೆ. ಅಂದರೆ 1889 ರಿಂದ 1984ರವರೆಗೆ 95 ವರ್ಷಗಳಲ್ಲಿ ಕೇವಲ 92 ರಾಷ್ಟ್ರಗಳ ವರೆಗೆ ಜಮಾಅತ್ ಹರಡಿತ್ತು ವಲಸೆಯ ನಂತರ 37 ವರ್ಷಗಳಲ್ಲಿ 121 ರಾಷ್ಟ್ರಗಳಲ್ಲಿ ಜಮಾಅತ್ ಪ್ರವೇಶಿಸಿದೆ. ಈ ವೈಭವ ಪೂರ್ವ ಪ್ರಾಬಲ್ಯವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರನ್ನು ಅಲ್ಲಾಹನು ಬೃಹತ್ ವಿಜಯಗಳ ಬಗ್ಗೆ ನೀಡಿದ ಭವಿಷ್ಯವಾಣಿಗಳು ನಿಜವಾಗಿದೆ ಎಂಬುದರ ಬಗ್ಗೆ ಸಾಕ್ಷಿಯಾಗಿದೆ. ಮತ್ತು ಇದು ನಿಮ್ಮ ಸತ್ಯತೆಗೆ ಒಂದು ಅದ್ಭುತವಾದ ದೃಷ್ಟಾಂತವಾಗಿದೆ.

ಇದಲ್ಲದೆ ಜಲ್ಸ ಸಲಾನ 2021ರ ಸಂದರ್ಭದಲ್ಲಿ ಹುಝೂರ್ ಅನ್ವರ್(ಅತಬಿಅ) ರವರು ಕೇವಲ ಒಂದು ವರ್ಷದಲ್ಲಿ ಅಹ್ಮದಿಯಾ ಜಮಾಅತ್‌ನ ಅಭಿವೃದ್ಧಿಯ ಬಗ್ಗೆ ಅದ್ಭುತವಾಗಿ ವಿವರಿಸಿದ್ದಾರೆ ಅದು ಸಹ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಸತ್ಯತೆಗೆ ಹಾಗೂ ಖಿಲಫತೆ ಅಹ್ಮದಿಯಾಗೆ ಒಂದು ಸ್ಪಷ್ಟವಾದ ಪುರಾವೆಯಾಗಿದೆ. ಅದು ಸಯ್ಯದುನಾ ಹಝ್ರತ್ ಮುಹಮ್ಮದ್ ಮುಸ್ತಫಾ(ಸ)ರವರು ಮುಂದಿನ ಕಾಲದಲ್ಲಿ ಆಗಮಿಸಲಿರುವ ಇಮಾಮ್ ಮಹ್ದಿಯ ಬಗ್ಗೆ ಹಾಗೂ ಅವರ ವಿಜಯಗಳ ಬಗ್ಗೆ ಮಾಡಿದ ಭವಿಷ್ಯವಾಣಿಗಳು ಸತ್ಯವಾಗಿದೆ ಎಂಬುದಕ್ಕೆ ಸಾಕ್ಷಿಯಾಗಿದೆ.

ಹುಝೂರ್ ಅನ್ವರ್(ಅತಬಿಅ)ರವರು ಕೇವಲ ಒಂದು ವರ್ಷದ ಅಭಿವೃದ್ಧಿಯನ್ನು ವಿವರಿಸುತ್ತ ಹೇಳುತ್ತಾರೆ: ಒಂದು ವರ್ಷದಲ್ಲಿ 403 ಹೊಸ ಜಮಾಅತ್‌ಗಳು ಸ್ಥಾಪಣೆಯಾಗಿದೆ, 829 ಪ್ರದೇಶಗಳಲ್ಲಿ ಮೊದಲ ಬಾರಿಗೆ ಜಮಾಅತ್ ಪ್ರವೇಶಿಸಿದೆ. 211 ಹೊಸ ಮಸೀದಿಗಳನ್ನು ನಿರ್ಮಿಸಲಾಗಿದೆ, 92 ರಾಷ್ಟ್ರಗಳಲ್ಲಿ 384 ಪುಸ್ತಕಗಳು, ಕರಪತ್ರಿಕೆಗಳು 39 ಭಾಷೆಗಳಲ್ಲಿ ಪ್ರಕಟಿಸಲಾಗಿದೆ, 123 ಹೊಸ ಮಿಷನ್ ಹೌಸ್‌ಗಳು ನಿರ್ಮಿಸಲಗಿದೆ, 90 ರಷ್ಟ್ರಗಳಲ್ಲಿ ಗ್ರಂಥಾಲಯಗಳಲ್ಲಿ ಪುಸ್ತಕಗಳನ್ನು ಇರಿಸಲಾಯಿತು 1970 ಪ್ರದರ್ಶನಗಳನ್ನು ಆಯೋಜಿಸಲಾಯಿತು 103 ರಾಷ್ಟ್ರಗಳಲ್ಲಿ 69 ಲಕ್ಷಕ್ಕಿಂತ ಹೆಚ್ಚು ಹಸ್ತಪತ್ರಿಕೆಗಳನ್ನು ಹಂಚಲಾಯಿತು.

ಅಲ್‌ಹಮ್‌ದುಲಿಲ್ಲಾಹ್!! ಈಗ MTA 8 ಚ್ಯಾನಲ್‌ಗಳು ನಿರ್ವಹಿಸತ್ತಿವೆ. ಅದು ದಿನವಿಡಿ 24ಗಂಟೆ ಪ್ರಪಂಚದ 17 ಭಾಷೆಗಳಲ್ಲಿ ಇಸ್ಲಾಮಿನ ಕಾರ್ಯಕ್ರಮಗಳನ್ನು ಪ್ರದರ್ಶಿಸಲಾಗುತ್ತದೆ ಇದರಿಂದ ಲಕ್ಷಾಂತ ಜನರು ಪ್ರಯೋಗ ಪಡೆಯುತ್ತಿದ್ದಾರೆ.

27 ರೇಡಿಯೋ ಸ್ಟೇಶನ್‌ಗಳು ಕಾರ್ಯ ನಿರ್ವಹಿಸತ್ತಿವೆ, ಪುಸ್ತ ಮಳಿಗೆಗಳಿಂದ 22 ಲಕ್ಷ ಜನರು ಅದರಿಂದ ಪ್ರಯೋಗ ಪಡೆದರು ಅದೇ ರೀತಿ Humanity First ನಿಂದ 345 ಮೆಡಿಕಲ್ ಕ್ಯಾಂಪ್‌ಗಳು ಆಯೋಜಿಸಲಾಯಿತು.

75 ಸಾವಿರಕ್ಕಿಂತ ಹೆಚ್ಚು ವಾಖಿಫೀನೆ ನೌ ಹಾಗೂ ವಾಖಿಫಾತೆ ನೌ ರವರ ಆಧ್ಯಾತ್ಮಿಕ ಸೈನ್ಯವೂ ಸಿದ್ಧಗೊಳಿಸಲಾಗುತ್ತಿದೆ.
ಸುಮಾರು 3000 ನೀರಿನ ಪಂಪ್‌ಗಳನ್ನು ನಿರ್ಮಿಸಲಾಗಿದೆ.

12 ರಾಷ್ಟ್ರಗಳಲ್ಲಿ 685 ಶಾಲೆಗಳು ಮತ್ತು ಅನೇಕ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ.

2020-21ರಲ್ಲಿ 1,21,179 ಹೊಸ ಬೈಅತ್‌ಗಳಾದವು.

**ಫಲ್‌ಹಮ್‌ದುಲಿಲ್ಲಾಹಿ ಅಲಾ ಝಾಲಿಕ್**

ಗೌರವಾನ್ವಿತರೇ!! ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ವೈಭವಯುತ ಅಭಿವೃದ್ಧಿಯ ಕುರಿತು ಪ್ರಸ್ತಾಪಿಸಿದ ನಂತರ ಕೊನೆಯಲ್ಲಿ ನಾನು ಹೇಳಲು ಬಯಸುವುದೇನಂದರೆ ಕಳೆದ 2 ವರ್ಷಗಳಿಂದ ಪ್ರಪಂಚವು ಕರೋನ ಸಾಂಕ್ರಮಿಕ ರೋಗದಿಂದ ಬಳಲುತ್ತಿದೆ, ಯಾವುದೇ ವಿಭಾಗವೂ ಸಹ ಇದರ ಪ್ರಭಾವದಿಂದ ಉಳಿದಿಲ್ಲ. ಪ್ರತಿಯೊಂದು ಕಡೆಯಿಂದಲೂ ಸಂಕಷ್ಟ ತೊಂದರೆಗಳು ಆವರಿಸಿವೆ. ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಪ್ರತಿಯೊಂದು ಕ್ಷೇತ್ರಗಳಲ್ಲಿ ಅಭಿವೃದ್ಧಿ ಹೊಂದುತ್ತಲೇ ಹೋಗುತ್ತಿದೆ. ಹುಝೂರ್ ಅನ್ವರ್(ಅತಬಿಅ) ರವರು ಜಮಾಅತ್ತಿನ ಅಭಿವೃದ್ಧಿಯ ಬಗ್ಗೆ ನೀಡಿದ ಒಂದು ಪಕ್ಷಿ ನೋಟವು ಅಲ್ಲಾಹನು ಜಮಾತ್ತನ್ನು ಪ್ರತಿಯೊಂದು ಕ್ಷೇತ್ರದಲ್ಲಿ ಅಭಿವೃದ್ಧಿ ನೀಡಿದ್ದಾನೆ ಎಂಬುದಕ್ಕೆ ಸಾಕ್ಷಿಯಾಗಿದೆ. ಜಮಾಅತ್ತಿನ ಜನಸಂಖ್ಯೆಯಲ್ಲೂ ಅನುಗ್ರಹಿಸಲಾಗುತ್ತಿದೆ, ಜಮಾಅತ್ತಿನ ಸಂಪತ್ತಿನಲ್ಲೂ ಅನುಗ್ರಹಿಸಲಾಗುತ್ತಿದೆ ಮತ್ತು ಪ್ರಪಂಚದ ಎಲ್ಲಾ ಕ್ಷೇತ್ರಗಳಲ್ಲಿಯೂ ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಖಿಲಾಫತ್‌ನ ಛಾಯೆಯಲ್ಲಿ ವಿಜಯಶಾಲಿಯಾಗುತ್ತಿದೆ.

ಕೊನೆಗೆ ನಾನು ಹಝ್ರತ್ ಅಖದ್ದಸ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಎರಡು ಉಲ್ಲೇಖಗಳನ್ನು ಪ್ರಸ್ತಾಪಿಸಿ ನನ್ನ ಈ ಭಾಷಣವನ್ನು ಮುಕ್ತಾಯಗೊಳಿಸುತ್ತೇನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

"ಹೊಸ ಭೂಮಿ ಇರುವುದು ಮತ್ತು ಹೊಸ ಆಕಾಶ ಇರುವುದು. ಈಗ ಆ ಕಾಲ ಸಮೀಪವಾಗುವುದು ಅಂದರೆ ಸತ್ಯದ ಸೂರ್ಯವು ಪಶ್ಚಿಮದಿಂದ ಉದಯಿಸುವುದು. ಯೂರೋಪ್‌ನ ಜನರಿಗೆ ನಿಜವಾದ ದೇವರ ಅರಿವಾಗುವುದು. ತದನಂತರ ತೌಬ (ಪಶ್ಚಾತ್ತಾಪದ) ಬಾಗಿಲು ಮುಚ್ಚಲಾಗುವುದು ಏಕೆಂದರೆ ಪ್ರವೇಶಿಸುವರು ಬಹಳ ಬಲದಿಂದ ಪ್ರವೇಶಿಸುವರು. ಸ್ವಭಾವತಃ ಯಾರ ಮನಸ್ಸುಗಳು ಮುಚ್ಚಲ್ಪಟ್ಟಿವೆಯೋ ಅವರು ಹೊರತು ಪಡಿಸಿ ಎಲ್ಲರು ಪ್ರವೇಶಿಸುತ್ತಾರೆ. ಅವರೇ ಶಾಶ್ವತವಾಗಿ ಉಳಿದಿರುವವರು. ಪ್ರಕಾಶವನ್ನು ಅವರು ಪ್ರೀತಿಸುವುದಿಲ್ಲ ಅದರ ಬದಲು ಅವರು ಅಂಧಾಕಾರವನ್ನು ಪ್ರೀತಿಸುವರು. ಸಂದರ್ಭ ಒದಗಿ ಬಂದಿದೆ ಎಲ್ಲಾ ಧರ್ಮಗಳು ನಶಿಸುವವು. ಆದರೆ ಇಸ್ಲಾಮ್ ಧರ್ಮ ಮಾತ್ರ ಉಳಿದಿರುವುದು ಮತ್ತು ಎಲ್ಲಾ ಶಸ್ತ್ರಗಳು ಮುರಿಯುವವು. ಆದರೆ

ಇಸ್ಲಾಮ್ ಧರ್ಮದ ದೈವಿಕ ಶಸ್ತ್ರ ಉಳಿದಿರುವುದು ಅದು ದಜ್ಜಾಲ್ ಸ್ವಭಾವವನ್ನು ಕತ್ತರಿಸುವತನಕ ಮುರಿಯುವುದಿಲ್ಲ. ಸಮಯ ಒದಗಿ ಬಂದಿದೆ ಅಂದರೆ ಕಾಡುಗಳಲ್ಲಿ ವಾಸವಾಗಿರುವವರು ಮತ್ತು ಅನಕ್ಷರಸ್ತರು ಸಹ ಅಲ್ಲಾಹನ ನೈಜ ತೌಹೀದ್ ಏಕತ್ವವನ್ನು ತಿಳಿಯುವರು. ಎಲ್ಲ ರಾಷ್ಟ್ರಗಳಲ್ಲಿ ಸುತ್ತಾಡುತ್ತಾರೆ. ಆ ದಿವಸ ಯಾವ ಪ್ರಾಯಶ್ಚಿತವೂ ಬರುವುದಿಲ್ಲ ಮತ್ತು ಯಾವ ದೇವನೂ ಬರುವುದಿಲ್ಲ. ಮತ್ತು ಅಲ್ಲಾಹನ ಕೇವಲ ಒಂದೇ ಕೈ ನಿರಾಕರಿಸುವವರ ಎಲ್ಲಾ ಉಪಾಯಗಳನ್ನು ವ್ಯರ್ಥಗೊಳಿಸುತ್ತಾನೆ. ಯಾವ ಖಡ್ಗದಿಂದ ಅಥವಾ ಯಾವ ಕೋವಿಯಿಂದಲ್ಲ ಅದರ ಬದಲು ಶ್ರದ್ಧೆಯ ಆತ್ಮಗಳ ಪ್ರಕಾಶ ನೀಡುವ ಮುಖಾಂತರ ಮತ್ತು ಶುದ್ಧ ಹೃದಯಗಳ ಮೇಲೆ ಪ್ರಕಾಶವು ಅವತರಿಸುವ ಮೂಲಕ. ಆಗ ನಾನು ಹೇಳುವಂತಹ ಈ ಎಲ್ಲಾ ವಿಷಯಗಳು ನಿಮಗೆ ತಿಳಿದು ಬರುತ್ತದೆ." (ತಬ್‌ಲೀಗೆ ರಿಸಾಲತ್, ಸಂಪುಟ–6, ಪುಟ–8)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

"ಸರ್ವಶಕ್ತನಾದ ಅಲ್ಲಾಹನು ನನಗೆ ಹಿರಿಮೆಯನ್ನು ನೀಡುತ್ತಾನೆ ಮತ್ತು ನನ್ನ ಪ್ರೀತಿಯನ್ನು ಹೃದಯಗಳಲ್ಲಿ ಇರಿಸುತ್ತಾನೆ ಮತ್ತು ಪ್ರಪಂಚದಾದ್ಯಂತ ನನ್ನ ಸರಪಳಿಯನ್ನು(ಜಮಾಅತ್ತನ್ನು) ಹರಡಿಸುತ್ತಾನೆ ಮತ್ತು ನನ್ನ ಪಂಗಡವನ್ನು ಎಲ್ಲಾ ಪಂಗಡಗಳ ಮೇಲೆ ಮೇಲುಗೈ ಸಾಧಿಸುತ್ತದೆ ಎಂದು ನನಗೆ ಪದೇ ಪದೇ ತಿಳಿಸಿದ್ದಾನೆ. ಮತ್ತು ನನ್ನ ಪಂಗಡದ ಜನರು ಜ್ಞಾನ ಮತ್ತು ದೈವಜ್ಞಾನದಲ್ಲಿ ಪರಿಪೂರ್ಣತೆಯನ್ನು ಪಡೆಯುತ್ತಾರೆ, ಅವರು ತಮ್ಮ ಸತ್ಯಾಂಶದ ಪ್ರಕಾಶದಿಂದ, ತಮ್ಮ ಪುರಾವೆಗಳಿಂದ ಮತ್ತು ದೃಷ್ಟಾಂತಗಳ ಬೆಳಕಿನಿಂದ ಪ್ರತಿಯೊಬ್ಬರ ಬಾಯಿಯನ್ನು ಮುಚ್ಚುತ್ತಾರೆ ಮತ್ತು ಪ್ರತಿಯೊಂದು ಜನಾಂಗವೂ ಈ ಚಿಲುಮೆಯಿಂದ ನೀರನ್ನು ಕುಡಿಯುತ್ತಾರೆ. ಈ ಸರಪಳಿಯು (ಜಮಾಅತ್) ಭೂಮಿಯನ್ನು ಆವರಿಸುವವರೆಗೆ ಬಲವಾಗಿ ಬೆಳೆಯುತ್ತದೆ ಮತ್ತು ಪ್ರವರ್ಧಮಾನಕ್ಕೆ ಬರುತ್ತದೆ. ಅನೇಕ ಅಡೆತಡೆಗಳು, ಸಂಕಷ್ಟಗಳು ಎದುರಾಗುತ್ತವೆ ಆದರೆ ಅಲ್ಲಾಹನು ಅವೆಲ್ಲವನ್ನು ಮಧ್ಯದಿಂದ ಎಬ್ಬಿಸಿ ತನ್ನ ವಾಗ್ದಾನವನ್ನು ಪೂರೈಸುತ್ತಾನೆ. ಮತ್ತು ಅಲ್ಲಾಹನು ನನಗೆ ಹೇಳಿರುವನು, ನಾನು ನಿನಗೆ ಎಷ್ಟು ಅನುಗ್ರಹ ನೀಡುವನೆಂದರೆ ಅರಸರು ನಿನ್ನ ವಸ್ತ್ರಗಳಿಂದ ಅನುಗ್ರಹವನ್ನು ಹುಡುಕುವರು.

ಕೇಳಿರಿ!! ಈ ಅಲ್ಲಾಹನ ಮಾತುಗಳನ್ನು ನೆನಪಿನಲ್ಲಿಡಿ ಮತ್ತು ಈ ಭವಿಷ್ಯವಾಣಿಗಳನ್ನು ತಮ್ಮ ಸಂದೂಖುಗಳಲ್ಲಿ ಸಂರಕ್ಷಿಸಿ ಇರಿಸಿಕೊಳ್ಳಿರಿ ಏಕೆಂದರೆ ಇದು ಸರ್ವಶಕ್ತನಾದ ಅಲ್ಲಹನ ಮಾತುಗಳಾಗಿವೆ, ಒಂದಲ್ಲ ಒಂದು ದಿವಸ ಇದು ಪೂರ್ಣಗೊಳ್ಳುತ್ತದೆ. (ತಜಲ್ಲಿಯಾತೆ ಇಲಾಹಿಯ್ಯ, ರೂಹಾನಿ ಖಝಾಈನ್ ಸಂಪುಟ–20, ಪುಟ–408–410)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ಓ ಎಲ್ಲಾ ಜನರೇ!! ನೆನಪಿಡಿ ಇದು ಭೂಮಿಯನ್ನು ಮತ್ತು ಆಕಾಶವನ್ನು ಸೃಷ್ಟಿಸಿದವನ ಭವಿಷ್ಯವಾಣಿಯಾಗಿದೆ. ಅವನು ತನ್ನ ಜಮಾಅತ್ತನ್ನು ಎಲ್ಲಾ ದೇಶಗಳಲ್ಲಿ ಹರಡಿಸುತ್ತಾನೆ ಮತ್ತು ಸ್ಪಷ್ಟ ಪುರಾವೆಗಳಿಂದ ಎಲ್ಲರ ಮೇಲೆ ಪ್ರಾಬಲ್ಯ ನೀಡುತ್ತಾನೆ. ದಿನಗಳು ಸಮೀಪಿಸುತ್ತಿವೆ ಪ್ರಪಂಚಾದ್ಯಂತ ಒಂದೇ ಧರ್ಮವಿರುವುದು ಇದನ್ನು ಮಾತ್ರ ಗೌರವದಿಂದ ಪರಿಗಣಿಸುವುದು. ಅಲ್ಲಾಹನು ಈ ಧರ್ಮವನ್ನು ಮತ್ತು ಈ ಜಮಾಅತ್ತಿನಲ್ಲಿ ಅತ್ಯುತ್ತಮ ಅನುಗ್ರಹಗಳನ್ನು ನೀಡಲಾಗುವುದು. ಮತ್ತು ಅದನ್ನು ನಾಶಮಾಡಲು ಪ್ರಯತ್ನಿಸುವವರೆಲ್ಲರ ವಿನ್ಯಾಸಗಳನ್ನು ನಿರಾಶೆಗೊಳಿಸುತ್ತಾನೆ ಮತ್ತು ಪ್ರಪಂಚವೂ ಅಂತ್ಯ ಗೊಳ್ಳುವ ತನಕ ಇದರ ಪ್ರಾಬಲ್ಯವೂ ಉಳಿದಿರುವುದು. (ತಝ್ಕಿರತ್ತುಶ್ಶಹದತೈನ್, ರೂಹಾಮಿ ಖಝಾಈನ್ ಸಂಪುಟ–20, ಪುಟ–66–67)

ಅಲ್ಲಾಹನು ನಮಗೆ ಆ ಕೊನೆಯ ವಿಜಯವನ್ನು ನೋಡಲು ಅನುಗ್ರಹಿಸಲಿ. ಆಮೀನ್

**ವಆಖಿರುದ್ದಅ್‌ವನ ಅನಿಲ್ ಹಮ್‌ದು ಲಿಲ್ಲಾಹಿ ರಬ್ಬಿಲ್ ಆಲಮೀನ್**

**************

**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

ಪುಟ ಸಂಖ್ಯೆ 01ರ ಉಳಿದ ಭಾಗ

**ವಾಗ್ದತ್ತ ಮಸೀಹರಿಗೆ ತತ್ವಾಧಾರಿತ ಬರಹದ ಪವಾಡವನ್ನು ಉಕ್ಕುವ ಸಮುದ್ರ ರೀತಿಯಲ್ಲಿ ನೀಡಲಾಗಿದೆ. ಅಂತಹ ವ್ಯಕ್ತಿಯೊಬ್ಬನ ಮೇಲೆ ಆಕ್ಷೇಪ ಮಾಡುವವನು ಓರ್ವ ಶಾಪಗ್ರಸ್ತ ಕ್ರಿಮಿ ಹೊರತು ಮನುಷ್ಯನಲ್ಲ. ಏಕೆಂದರೆ ಸ್ವಯಂ ನಿಷ್ಪ್ರಯೋಜಕನಾಗಿ, ಅಂತಹ ವ್ಯಕ್ತಿಯೊಬ್ಬನ ಮೇಲೆ ಆರೋಪ ಮಾಡುತ್ತಿದ್ದಾನೆ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಮನುಷ್ಯನು ಲೇಖನಿ ಸರದಾರನಾದರೆ ಅವನ ಜ್ಞಾನ ಮತ್ತು ಜಾಣ್ಮೆ ಹಲವು ರೀತಿಯಲ್ಲಿ ಸಾಹಿತ್ಯಕ ಶೃಂಗಾರದಿಂದ ಬರಹ ಮತ್ತು ಅರ್ಥಗರ್ಭಿತ ಹಾಗೂ ತತ್ವಪೂರ್ಣ ಉದಾಹರಣೆಗಳನ್ನು ನೀಡುವುದಾದರೆ ಮತ್ತು ಅವನಿಗೆ ಅಲ್ಲಾಹನ ಸಾನಿಧ್ಯದಲ್ಲಿ ಗದ್ಯ ಹಾಗೂ ಪದ್ಯ ಬರೆಯುವುದರಲ್ಲಿ ಪ್ರಾವೀಣ್ಯತೆ ಪಡೆಯುವಂತಾದರೆ ಮತ್ತು ಯಾವುದೆ ಕುಂದುಕೊರತೆ ಬಾಕಿ ಉಳಿಯದಿದ್ದರೆ ಅಂತಹ ಪರಿಪೂರ್ಣತೆ ಮತ್ತು ಮಹಾನತೆ ಸ್ಥಿತಿಯಲ್ಲಿ ಅವನ ಬರಹದಲ್ಲಿ ಸಮಯೋಚಿತವಾಗಿ ಸಂಧರ್ಭಾನುಸಾರ ಕೆಲ ಖುರ್‌ಆನ್‌ನ ವಚನಗಳು ಸೇರಿದರೆ ಅಥವಾ ಪೂರ್ವ ಮಹಾತ್ಮರುಗಳ ಕೆಲ ನುಡಿ ಮುತ್ತುಗಳು ಮತ್ತು ಉದಾಹರಣೆಗಳು ಬಂದರೆ ಅದು ಆಕ್ಷೇಪಾರ್ಹ ಆಗುವುದಿಲ್ಲ. ಏಕೆಂದರೆ ಅದು ಅವನ ಭಾಷಾ ಪಾಂಡಿತ್ಯದ ಒಂದು ಒಪ್ಪತಕ್ಕ ವಿಷಯವಾಗಿರುತ್ತದೆ. ಅದು ನದಿಯ ರೀತಿ ಹರಿಯುತ್ತಾ ಮತ್ತು ವಾಯುವಿನಂತೆ ನಡೆಯುವ ಕ್ರಿಯೆ ಆಗಿರುತ್ತದೆ. ಸ್ವಯಂ ಏನೂ ತಿಳಿಯದೆ ನಿಷ್ಪ್ರಯೋಜಕನಾಗಿ ಸಾರಗರ್ಭಿತ ತತ್ವಪೂರ್ಣ ಬರಹಗಾರನೊಬ್ಬನ ಮೇಲೆ ಆಕ್ಷೇಪವೆತ್ತುವೆನು. ಒಬ್ಬ ಶಾಪಗ್ರಸ್ತ ಕ್ರಿಮಿ ಆಗಬಹುದೆ ಹೊರತು ಮನುಷ್ಯನಲ್ಲ. ಏಕೆಂದರೆ ಅವನು ಹಲವು ಅರಬಿ ಗ್ರಂಥಗಳನ್ನು ಅರ್ಥಗರ್ಭಿತ, ತತ್ವಾಧಾರಿತ ರೀತಿಯಲ್ಲಿ ಬರೆದು ತನ್ನ ಪವಾಡ ಪ್ರದರ್ಶಿಸಿದ ಒಬ್ಬನ ಮೇಲೆ ಆಕ್ಷೇಪ ಮಾಡುವುದೆಂದರೆ ಅದು ಅರ್ಥಹೀನ. ಅವನಿಗೆ ತತ್ವಾಧಾರಿತ ಬರಹಗಳ ಪವಾಡದ ಅಸೀಮ ಸಮುದ್ರ ರೀತಿಯ ಜ್ಞಾನ ನೀಡಲಾಗಿದೆ.

**ಈ ಜನರು ಅದೇ ಮಣ್ಣಿನಂತೆ ಸೃಷ್ಟಿಗೊಂಡವರಾಗಿದ್ದಾರೆ. ಆ ವ್ಯಕ್ತಿಯ ನಾಲಿಗೆಯಿಂದ ಹೊರಡಿತ್ತು "ಫತಬಾರಕಲ್ಲಾಹು ಅಹಸನಲ್ ಖಾಲಿಖೀನ್" ಕಾಕತಾಳಿಯದಂತೆ ಅದೇ ವಚನ ಅವತರಿಸಿತು ಆಗ ಅವನು ಧರ್ಮಭ್ರಷ್ಟನಾದನು.**

ಈ ರೀತಿಯ ದುಷ್ಟ ಸ್ವಭಾವದವರು ಸದಾ ಇರುತ್ತಾರೆ. ಅವರು ಅಲ್ಲಾಹನ ಗ್ರಂಥದ ಮೇಲೆಯೇ ಆಕ್ಷೇಪಿಸುವುದರಿಂದ ಹೆದರಲಿಲ್ಲ, ತಿರುಳಿಲ್ಲದವರಾದರೂ ಟೀಕೆ ಮಾಡುವುದರಿಂದ ಹಿಂದುಳಿಯಲಿಲ್ಲ. ಉದಾಹರಣೆಗೆ ಪವಿತ್ರ ಖುರ್‌ಆನ್‌ನ ಸೂರದ ಕೆಲ ವ್ಯಾಕ್ಯಗಳನ್ನು (ವಚನಗಳನ್ನು) ಉಮ್ರಾಉಲ್ ಯಕೀನ್‌ರ ಒಂದು ಖಸೀದದ ಅಧ್ಯಾಪನೆಯಾಗಿದೆ ಎಂದು ಆ ದುಷ್ಟರು ಆಕ್ಷೇಪವೆತ್ತುತ್ತಾರೆ. ಅಂದರೆ ಅವರಿಗೆ ತಿಳಿಯಬೇಕಾಗಿತ್ತು. ಪವಿತ್ರ ಖುರ್‌ಆನ್ ಆ ಕಥೆಗಳು ಪುರಾತನ ಪುಸ್ತಕದ ಅತ್ಯಂತ ವರ್ಣರಂಜಿತ ಬರಹವೆಂದು ವರ್ಣಿಸಲಾಗಿದೆ. ಮತ್ತು ಅವು ದೈವಿಕ ಜ್ಞಾನದ ಸಾಕ್ಷ್ಯಗಳನ್ನು ಪವಾಡ ರೀತಿಯಲ್ಲಿ ವಿವರಿಸಲಾಗಿದೆ. ಅವು ಯಾವ ಅರಬ್ ಕವಿಯ ಕವನವಾಗಿದೆ ಅಥವಾ ಅಧ್ಯಾಪನೆ ಆಗಿದೆ ಎಂದು. ಹಾಗೆ ಅಂತಹ ವ್ಯಕ್ತಿಯೊಬ್ಬನು ಕುರುಡನಾಗಿದ್ದಾನೆಯೇ ಹೊರತು ದೃಷ್ಟಿ ಹೊಂದಿದವನಲ್ಲ, ಅಂತಹವರು ನದಿಯ ರೀತಿಯಲ್ಲಿ ಹರಿಯುತ್ತಿರುವ ಮಹಾನತೆಯನ್ನು ಕಾಣುತ್ತಿಲ್ಲ. ಒಂದೆರಡು ಪೂರ್ವಿಕ ರೀತಿಯಲ್ಲಿರುವ ವಚನಗಳ ಮೇಲೆ ಸಂಶಯ ಪ್ರವೃತ್ತಿಯಿಂದ ಸಂಶಯವನ್ನು ಉಂಟು ಮಾಡುತ್ತಾರೆ. ಅಂತಹ ಜನರು ಆ ವ್ಯಕ್ತಿಯ ಸಮಾನದಂತೆ ಅವನ ನಾಲಿಗೆಯಿಂದ ಹೊರಟಿತ್ತು. ಪತಬಾಕಕಲ್ಲಾಹು ಅಹಸನುಲ್ ಖಾಲಿಖೀನ್: ಕಾಕತಾಳಿಯುವಾಗಿ ಅದೇ ವಚನ ಅವತರಿಸಿತು. ಆಗ ಅವನು ಧರ್ಮಭ್ರಷ್ಟನಾದನು. ಏಕೆಂದರೆ ಅವನು ತಿಳಿದುಕೊಂಡದ್ದೇನೆಂದರೆ ನನ್ನ ವಾಕ್ಯವೇ ಖುರ್‌ಆನ್‌ನಲ್ಲಿ ಸೇರಿಸಲಾಗಿದೆ ಎಂದು. ಇಗ ಪೀರ್ ಮಹರ್ ಆಲಿ ಶಾಹ್ ಸಾಹಿಬರ ಕಾರ್ಯಾಚರಣೆ ನೋಡಿದರೆ ಅವರು ಸ್ವಯಂ ನನ್ನ ಹನ್ನೆರಡು ಭಾಗದ ಗ್ರಂಥದ ಎದುರಿನಲ್ಲಿ ಒಂದು ಭಾಗವು ಸಹ ಬರೆಯಲಾಗಲಿಲ್ಲ. ಅವರು ಅಷ್ಟೊಂದು ಬೃಹತ್ ಗ್ರಂಥದಿಂದ ಒಂದೆರಡು ವಾಕ್ಯಗಳನ್ನು ಪ್ರಸ್ತುತಪಡಿಸಿದ್ದಾರೆ. ಇದು ಇಂತಹದೊಂದು ಪುಸ್ತಕದಲ್ಲಿ ಇದೆ ಎಂದು. ಈಗ ಯೋಚಿಸಿ ಅದು ಎಷ್ಟೊಂದು ಹೇಡಿತನದ ಮಾತಾಗಿದೆ. ಅದನ್ನು ಯಾವೊಬ್ಬ ಸಾಹಿತ್ಯಗಾರನು ಮೆಚ್ಚುವನೇ? ಸಾಹಿತ್ಯಗಾರರು ಬಲ್ಲರು, ಸಾವಿರಾರು ವಾಕ್ಯಗಳಿಂದ ಒಂದೆರಡು ವಾಕ್ಯಗಳು ಅಧ್ಯಾಪನೆ ರೂಪದಲ್ಲಿ

ಬಂದು ಸೇರಿದರೆ ಅದರಿಂದ ಸಾರಗರ್ಭಿತ್ವದಲ್ಲಿ ವ್ಯತ್ಯಾಸವೇನು ಉಂಟಾಗುವುದಿಲ್ಲ. ಬದಲು ಈ ರೀತಿಯ ಬಳಕೆಯಿಂದ ಇನ್ನಷ್ಟು ಮೆರಗು ಹೆಚ್ಚಾಗುತ್ತದೆ. (ಅದೇ ಪುಟ 4420.)

**ಪೀರ್ಮಹರ್ ಅಲಿ ಶಾಹ್ ಕೇವಲ, ಸುಳ್ಳುಗಾರರಲ್ಲ, ಬದಲು ಅಪ್ಪಟ ಸುಳ್ಳುಗಾರರಾಗಿದ್ದಾರೆ, ಜೊತೆಯಲ್ಲಿ ಕುಷ್ಟ ರೋಗಿಯೂ ಹೌದು.**

ಒಬ್ಬ ನ್ಯಾಯವಂತ ಮನುಷ್ಯನು ತಿಳಿಯಬಹುದು. ಯಾವ ವ್ಯಕ್ತಿ ಅಷ್ಟೊಂದು ದೀರ್ಘ ಸಮಯ ಪಡೆದರೂ ತನ್ನ ಏಕಾಂತ ಅವಸ್ಥೆಯಲ್ಲಿ ಒಂದೆರಡು ಪುಟಗಳ 'ಇಜಾಝುಲ್ ಮಸೀಹ್" ರೀತಿಯ ಗ್ರಂಥದ ನಮೂನೆ ಪ್ರಸ್ತುತಪಡಿಸಲಾಗಲಿಲ್ಲ. ಅಂತಹವರು ಲಾಹೋರಿನಲ್ಲಿ ಅವಕಾಶ ದೊರೆತರೆ ಬರೆಯಬಹುದಾಗಿತ್ತು. ಒಬ್ಬನ ಆಶ್ರಯಪಡೆದು ಸಹ ಏಳಲಾಗದಂತಹ ವೃದ್ಧನು ಆಶ್ರಯವಿಲ್ಲದೆ ಎದ್ದು ಬರಲು ಹೇಗೆ ಸಾಧ್ಯ? ನಿಸ್ಸಂಶಯವಾಗಿಯೂ ತಿಳಿದುಕೊಳ್ಳಿರಿ. ಪೀರ್ ಮಹರ್ ಅಲಿ ಶಾಹ್ ಕೇವಲ ಸುಳ್ಳಿನ ಆಸರೆಯಿಂದ ತಮ್ಮ ಕುಷ್ಟರೋಗದ ಮೇಲೆ ಪರದೆ ಎಳೆಯುತ್ತಿದ್ದಾರೆ ಮತ್ತು ಅವರು ಕೇವಲ ಸುಳ್ಳುಗಾರರಲ್ಲ. ಬದಲು ಅಪ್ಪಟ ಸುಳ್ಳುಗಾರರಾಗಿದ್ದಾರೆ. ಅವರ ಈ ಕೊನೆಯ ಸುಳ್ಳು ಸಹ ನನಗೆ ಮರೆಯಲು ಸಾಧ್ಯವಿಲ್ಲ. ಅವರು ಮತ್ತೊಮ್ಮೆ ಈ ಪುಸ್ತಕದಲ್ಲಿ ಆ ತಕರಾರು ಎತ್ತಿದ್ದಾರೆ. ನಾನು ನನ್ನ ವಾಗ್ದಾನ ಪ್ರಕಾರ ಲಾಹೋರಿಗೆ ಬಂದೆ. ಆದರೆ ನೀವು ಖಾದಿಯಾನಿನಿಂದ ಹೊರಗೆ ಸಹ ಬರಲಿಲ್ಲ. ಆದರೆ ಯಾವ ಜನರು ಅವರ ಜಾಹೀರಾತನ್ನು ನೋಡಿದ್ದಾರೆ. ಅವರು ಬೇಕಾದರೆ ಸಾಕ್ಷ್ಯ ನೀಡಬಹುದು. ಅವರು ಜಾಣನರಿಯಂತೆ ಎದುರಾಗದೆ ಪರಾರಿಯ ಮಾರ್ಗ ತುಳಿದಿದ್ದಾರೆ. (ಅದೆ ಪುಟ 443).

**ಈ ದೇಶದ ಪೀಠಾಧಿಪತಿಗಳು ಇವರಾಗಿದ್ದಾರೆ. ಅವರು ಸದಾಕಾಲಕ್ಕಾಗಿ ತಮ್ಮ ಮುಖದ ಮೇಲೆ ಒಂದು ಕಪ್ಪು ಕಲೆಯನ್ನು ಹಚ್ಚಿಕೊಂಡಿದ್ದಾರೆ.**

ಇಜಾಝುಲ್ ಮಸೀಹ್ ಗ್ರಂಥಧ ಪ್ರಸಾರದಿಂದ ಪೀರ್ ಮಹರ್ ಅಲಿ ಸಾಹೇಬರಿಗೆ ಮತ್ತೊಂದು ಅವಕಾಶ ನೀಡಲಾಗಿತ್ತು. ಅವರಿಂದ ಸಾಧ್ಯವಾದರೆ ಈಗಲಾದರೂ ತನ್ನ ಶೈಕ್ಷಣಿಕ ಸಾಮರ್ಥ್ಯದಿಂದ ನನ್ನ ಈ ಪ್ರತಿಭೆಯನ್ನು ಕುಗ್ಗಿಸಿ ತೋರಿಸಿರಿ. ಅದರಿಂದ ನೂರಾರು ಜನರು ನನ್ನ ಸಂಘಟನೆಯಲ್ಲಿ ಬೈಅತ್ ಮಾಡಿ ಸೇರಿಕೊಳ್ಳುತ್ತಿದ್ದಾರೆ. ಆದರೆ ಅವರು ಸಂಕೇತದಿಂದ ಸಹ ಮಾತನಾಡದ ಮೂಕನಂತಿದ್ದಾರೆ. ಅವರು ಏನಾದರೂ ಮಾಡಿ ತೋರಿಸಿದ್ದಾರೆ ಅಂದರೆ ಅದು ಯಾರು ಎರಡು ನೂರು ಗ್ರಂಥದ ಪುಟಗಳಿಂದ ಒಂದೆರಡು ವಾಕ್ಯಗಳನ್ನು ಹಿಡಿದು ಅದು ಕೃತಿಚೌರ್ಯವಾಗಿದೆ ಅಂದದ್ದು ಮತ್ತು ಕೇವಲ ಒಂದೆರಡು ಮುದ್ರಿತ ತಪ್ಪುಗಳನ್ನು ಹಿಡಿದು ವ್ಯಾಕರಣದ ತಪ್ಪು ಎಂದಿದ್ದಾರೆ. ತಮ್ಮ ಅಜ್ಞಾನತೆಯಿಂದ ಕೆಲ ಸಾರಗರ್ಭಿತ ಮತ್ತು ವ್ಯಾಕರಣಭರಿತ ವಾಕ್ಯಗಳನ್ನು ಬೇಕಂತಲೂ ಅತಥ್ಯವಾಗಿದೆ ಮತ್ತು ತಪ್ಪಾಗಿದೆ ಎಂದು ಸಾರಿರುವರು ಇವರಾಗಿದ್ದಾರೆ. ಈ ದೇಶದ ಪೀಠಾಧಿಪತಿಗಳು ಅವರು ಅನಗತ್ಯವಾಗಿ ಮೌಲ್ವಿ ಎಂದುಕೊಂಡು ಸದಾಕಲಕ್ಕಾಗಿ ತಮ್ಮ ಮುಖದ ಮೇಲೆ ಒಂದು ಕಪ್ಪು ಕಲೆಯನ್ನು ಹಚ್ಚಿಕೊಂಡಿದ್ದಾರೆ. (ಅದೇ ಪುಟ 444).

**ಇವರು ಮೆಹರ್ ಅಲಿ ಅಲ್ಲ ಬದಲಿಗೆ ಮುಹರ್ ಅಲಿ ಆಗಿದ್ದಾರೆ**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಅಂದಹಾಗೆ ಅವರ ಹೆಸರು ಮಹರ್ ಅಲಿ ಅಲ್ಲ, ಬದಲು ಮುಹರ್ ಅಲಿಯಾಗಿದೆ. ಏಕೆಂದರೆ ಅವರು ತಮ್ಮ ವಿವಶತೆ ಮೂಲಕ ಮತ್ತು ಮೌನವಹಿಸುವ ಮೂಲಕ "ಇಜಾಝುಲ್ ಮಸೀಹ್" ಗ್ರಂಥಧ ಮಹಾನತೆಯ ಮೇಲೆ ತಮ್ಮ ಮುಹರ್ (ಮುದ್ರೆ) ಹಾಕಿದಂತಾಗಿದೆ. (ನುಝುಲುಲ್ ಮಸೀಹ್, ರೂಹಾನಿ ಖಝಾಈನ್, ಸಂಪುಟ–18, ಪುಟ–432 ಟಿಪ್ಪಣಿ).

ಈಗ ಕೆಳಗೆ ನಾವು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಕೆಲ ಆ ವಿಶ್ವಾಸವರ್ಧಕ ಅಧ್ಯಾಪನೆಗಳನ್ನು ಪ್ರಸ್ತುತಪಡಿಸುತ್ತೇವೆ. ಅದರಲ್ಲಿ ಅವರು ಅಲ್ಲಾಹನು ಅವರಿಗೆ ದಯಪಾಲಿಸಿದ ವಿಶೇಷವಾದ ಖುರ್‌ಆನ್‌ನ ಜ್ಞಾನವನ್ನು ವಿವರಿಸಿದ್ದಾರೆ. ಹಾಗೂ ಯಾರಿಗೂ ಪ್ರತಿರೂಪ ತರಲು ಸಾಧ್ಯವಾಗಲಿಲ್ಲ. ಅದೇ ರೀತಿ ಅರಬಿಯ ಜ್ಞಾನವನ್ನು ಸಹ ಅಲ್ಲಾಹನು ಅವರಿಗೆ ದಯಪಾಲಿಸಿದ್ದ. ಅದು ಅವರಿಗೆ ಒಂದು ಪವಾಡ ಮತ್ತು ದೃಷ್ಟಾಂತ ರೂಪದಲ್ಲಿ ನೀಡಲಾಗಿತ್ತು. ಅದೇ ಆಧಾರದಲ್ಲಿ ಅವರು ಮೌಲ್ವಿಗಳಿಗೆ ಮತ್ತು ದರ್ಗಾ ಪೀಠಾಧಿಪತಿಗಳಿಗೆ ಪ್ರತಿವಾದಿಯಾಗಿ ಬರಲು ಆಹ್ವಾನಿಸುತ್ತಿದ್ದರು. ಏಕೆಂದರೆ ಈ ಜ್ಞಾನ ಅವರಿಗೆ ಅಲ್ಲಾಹನು ಒಂದು ಪವಾಡ ಸ್ವರೂಪವಾಗಿ ನೀಡಿದ್ದನು.

**ಈಗ ಯಾರಿಗೂ ಸಹ ಖುರ್‌ಆನ್‌ನ ಸಾಕ್ಷ್ಯಗಳನ್ನು ಎದುರಿಸುವ ಶಕ್ತಿಯಿಲ್ಲ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ಇನ್ನೊಂದು ಭವಿಷ್ಯವಾಣಿಯೂ ಸಹ ದೈವಿಕ ದೃಷ್ಟಾಂತವಾಗಿದೆ. ಅದು ಬರಾಹೀನೆ ಅಹ್ಮದಿಯಾದ ಪುಟ 238 ರಲ್ಲಿ ನಮೂದಿತವಾಗಿದೆ. ಅದು "ಅರ್ರಹ್‌ಮಾನ್ ಅಲ್ಲಮಲ್ ಖುರ್‌ಆನ್" ಎಂಬುದಾಗಿದೆ. ಈ ವಚನದಲ್ಲಿ ಅಲ್ಲಾಹನು ಖುರ್‌ಆನ್‌ನ್ನು ಕಲಿಸುವ ವಾಗ್ದಾನ ನೀಡಿದ್ದನು. ಹಾಗೆ ಈ ವಾಗ್ಧನವನ್ನು ಯಾವ ರೀತಿಯಲ್ಲಿ ಪೂರ್ತಿಕರಿಸಿದ್ದಾನೆಂದರೆ ಈಗ ಯಾರಿಗೂ ಖುರ್‌ಆನ್‌ನ ಸಾಕ್ಷ್ಯಗಳನ್ನು ಅಲ್ಲಗಳೆಯುವ ಶಕ್ತಿ ಇಲ್ಲ. ನಾನು ಸತ್ಯವಾಗಿ ಹೇಳುತ್ತೇನೆ. ಈ ದೇಶದ ಎಲ್ಲ ಮೌಲ್ವಿಗಳಲ್ಲಿ ಯಾರಾದರು ಒಬ್ಬ ಮೌಲ್ವಿ ಖುರ್‌ಆನ್‌ನ ಸಾಕ್ಷ್ಯಗಳ ವಿಷಯದಲ್ಲಿ ನನ್ನನ್ನು ಎದುರಿಸಲು ಮುಂದೆ ಬಂದರೆ, ನಾನು ಬರೆದ ಯಾವುದೆ ಸೂರದ ಒಂದು ವ್ಯಾಖ್ಯಾನ ಮತ್ತು ನನ್ನ ಯಾರಾದರು ವಿರೋಧಿ ಬರೆದದ್ದುನ್ನು ತುಲನೆ ಮಾಡಿದರೆ ಅವನು ಅತ್ಯಂತ ಅಪಮಾನಿತನಾಗುವನು ಮತ್ತು ನನ್ನನ್ನು ಎದುರಿಸಲಾರನು. ಅದೇ ಕಾರಣದಿಂದಾಗಿಯೇ ಮೌಲ್ವಿಗಳಿಗೆ ಪದೇ ಪದೇ ಪ್ರತಿವಾದಿಗಳಾಗಲು ಆಹ್ವಾನಿಸಿದರು. ಇತ್ತ ಮುಖ ಮಾಡಲಿಲ್ಲ. ಹಾಗೆ ಇದೊಂದು ಮಹೋನ್ನತವಾದ ದೃಷ್ಟಾಂತವಾಗಿದೆ. ಆದರೆ ನ್ಯಾಯವಂತರಿಗೆ ಮತ್ತು ವಿಶ್ವಾಸ ಉಳ್ಳವರಿಗೆ ಮಾತ್ರ.

(ಝುಮೀಮ ರಿಸಾಲ ಅಂಜಾಮೆ ಆಥಮ್, ರೂಹಾನಿ ಖಝಾಈನ್, ಸಂಪುಟ–11, ಪುಟ–291)

ಈ ದೇವವಾಣಿ ಮೂಲಕ ಅಲ್ಲಾಹನು ನನಗೆ ಖುರ್‌ಆನ್‌ನ ಜ್ಞಾನವನ್ನು ನೀಡಿರುವನು ಮತ್ತು ನನ್ನ ಹೆಸರು ಅವ್ವಲುಲ್ ಮೂಮಿನೀನ್ (ಸತ್ಯವಿಶ್ವಾಸಿಗಳಲ್ಲಿ ಪ್ರಥಮನು) ಎಂದು ಕರೆದಿರುವನು. ಮತ್ತು ನನಗೆ ಸಮುದ್ರ ರೀತಿಯ ಜ್ಞಾನ ಹಾಗೂ ಸಾಕ್ಷ್ಯಗಳಿಂದ ತುಂಬಿಕೊಟ್ಟಿರುವನು. ಮತ್ತು ನನಗೆ ಪದೇ ಪದೇ ದಿವ್ಯವಾಣಿಯಾಗಿದೆ. ಈ ಕಾಲಘಟ್ಟದಲ್ಲಿ ದೈವಿಕ ಜ್ಞಾನ ಹೊಂದಿದವರಾಗಲಿ, ದೈವಿಕ ಪ್ರೇಮ ಹೊಂದಿದವರಾಗಲಿ ನಿನ್ನ ಜ್ಞಾನ ಮತ್ತು ಪ್ರೇಮಕ್ಕೆ ಸರಿಸಾಟಿಯಾಗಿರುವುದಿಲ್ಲ.

(ಝುರೂರತುಲ್ ಇಮಾಮ್, ರೂಹಾನಿ ಖಝಾಈನ್, ಸಂಪುಟ–13, ಪುಟ–502)

**ನನಗೆ ಖುರ್‌ಆನ್‌ನ ಸಾಕ್ಷ್ಯಗಳ ಜ್ಞಾನ ಅರಿವಿಕೆಯಲ್ಲಿಯೂ ಎಲ್ಲರ ಮೇಲೆ ಒಂದು ವಿಜಯವನ್ನು ದಯಪಾಲಿಸಿರುವನು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ನನಗೆ ಆ ದೇವ ಮೇಲೆ ಆಣೆ ಅವನ ಕೈಯಲ್ಲಿ ಜೀವವಿದೆ, ಖುರ್‌ಆನ್‌ನ ಜ್ಞಾನ ಮತ್ತು ಸಾಕ್ಷ್ಯಗಳನ್ನು ಅರಿಯುವ ಪ್ರತಿಯೊಬ್ಬನ ಆತ್ಮದ ಮೇಲೆ ನನಗೆ ವಿಜಯ ನೀಡಲಾಗಿದೆ. ಹಲವು ಸಲ ವಿರೋದಿ ಮೌಲ್ವಿಗಳಿಗೆ ಖುರ್‌ಆನ್‌ನ ತಫ್ಸೀರ್ (ವ್ಯಾಖ್ಯಾನ) ಬರೆಯಲು ಆಹ್ವಾನಿಸಿರುತ್ತೇನೆ. ಆದರೆ ಅವರು ಬರಲಿಲ್ಲ. ಬಂದರೂ ಅಲ್ಲಾಹನು ಅವರಿಗೆ ಅಪಮಾನಿತರಾಗಿ ನಾಚಿಕೆ ಪಡುವಂತೆ ಮಾಡುತ್ತಿದ್ದನು. ಹಾಗೆ ಆ ರೀತಿಯ ಖುರ್‌ಆನ್‌ನ ಅರಿವು ನನಗೆ ನೀಡಲಾಗಿದೆ. ಇದು ಅಲ್ಲಾಹನ ಒಂದು ದೃಷ್ಟಾಂತವಾಗಿದೆ. (ಸಿರಾಜೆ ಮುನೀರ್, ರೂಹಾನಿ ಃಝಾಈನ್, ಸಂಪುಟ–12, ಪುಟ–41)

ನನಗೆ ವಿಜಯಿಯಾಗಿಯೇ ಪಡೆಯುವರು. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಧರ್ಮದ ಮತ್ತು ಖುರ್‌ಆನ್‌ನ ಜ್ಞಾನ ಸಾಕ್ಷ್ಯಗಳನ್ನು ಮತ್ತು ರಹಸ್ಯಗಳನ್ನು ಯಾವ ಅರ್ಥಗರ್ಭಿತ ಮತ್ತು ತತ್ವಭರಿತವಾಗಿ ನಾನು ಬರೆಯಬಲ್ಲೆನೋ ಅದನ್ನು ಇನ್ನೊಬ್ಬರು ಬರೆಯಲು ಸಾಧ್ಯವಿಲ್ಲ. ಒಂದು ಲೋಕವೇ ಒಟ್ಟುಗೂಡಿ ನನ್ನನ್ನು ಪರೀಕ್ಷಿಸಲು ಮುಂದಾದರೆ ನನ್ನನ್ನು ವಿಜಯಿಯಾಗಿ ಕಾಣುವರು. ಎಲ್ಲ ಜನರು ನನ್ನ ಎದುರಾಗಿ ನಿಂತರೂ ಅಲ್ಲಾಹನು ತನ್ನ ಅನುಗ್ರಹದಿಂದ ನನ್ನ ಬಲವೇ ಹೆಚ್ಚಾಗಿಸುವುದನ್ನು ನೋಡುವಿರಿ. ನಾನು ಕೂಲಂಕುಶವಾಗಿ ಹೇಳುವೆನು. ಮತ್ತು ದೃಡ ಶಬ್ಧಗಳಲ್ಲಿ ಹೇಳುವೆನು ಈ ಸಮಯ ಓ ಮುಸಲ್ಮಾನರೆ! ನಿಮ್ಮಲ್ಲಿ ಮುಹದ್ದಿಸ್ ಮುಫಸ್ಸಿರ್ ಜನರು ಸಹ ಇದ್ದಾರೆ ಮತ್ತು ಖುರ್‌ಆನ್‌ನ ಜ್ಞಾನಗಳನ್ನು ತಿಳಿದವರು ಎನ್ನುವವರೂ ಇದ್ದಾರೆ, ಸಾಹಿತ್ಯದ ತತ್ವಭರಿತದ ದಾವೆ ಮಾಡುವವರು ಇದ್ದಾರೆ, ಸಜ್ಜನರು ಎನಿಸಿಕೊಳ್ಳುವವರೂ ಇದ್ದಾರೆ ಮತ್ತು ಚಿಶ್ತಿ ಖಾದರಿ, ನಕ್ಷ್‌ಬಂಧಿ, ಸಹರ್‌ವರ್ದಿ ಎಂದು ತಮ್ಮನ್ನ ಕರೆಯಿಸಿಕೊಳ್ಳುವವರೂ ಇದ್ದಾರೆ. ಆದ್ದರಿಂದ ಏಳಿರಿ. ಮತ್ತು ಈ ಸಮಯ ನನ್ನನ್ನು ಎದುರಿಸಿ ತೋರಿಸಿರಿ.

(ಅಯ್ಯಾಮುಸ್ಸುಲಹ್, ರೂಹಾನಿ ಖಝಾಈನ್, ಸಂಪುಟ–14, ಪುಟ–407)

**ದೈವಿಕ ಅರಿವು ವಾಗ್ದತ್ತ ಮಸೀಹರೊಂದಿಗಿದೆ.**

ನಾನು ನಿಮಗೆ ದೃಢಪಡಿಸುವೆನು. ದೈವಿಕ ಅರಿವು ನನ್ನ ಜೊತೆಗಿದೆ. ಆ ಪರಮ ಜ್ಞಾನಿಯೂ ಬಯಸಿದಾಗಲೆಲ್ಲ ಖುರ್‌ಆನ್‌ನ ಸಾಕ್ಷ್ಯಗಳನ್ನು ನನಗೆ ಅನುಗ್ರಹಿಸುತ್ತಾನೆ. ವಾಸ್ತವವಾದ ತನ್ನ ಇಂಗಿತವು ಕೆಲ ವಚನಗಳ ಮೂಲಕ ಅದರ ಸಾಕ್ಷ್ಯಗಳೊಂದಿಗೆ ನನ್ನ ಮೇಲೆ ಪ್ರಕಟಗೊಳಿಸುತ್ತಾನೆ. ಒಂದು ಕಬ್ಬಿಣದ ಸಲಾಖೆಯಂತೆ ಏಕತ್ವ ಹೃದಯದೊಳಗೆ ದಾಖಲಿಸುತ್ತಾನೆ. ಈಗ ನಾನು ಆ ದೇವನ ಅನುಗ್ರಹವನ್ನು ಹೇಗೆ ತಳ್ಳಿಹಾಕಲಿ ಮತ್ತು ಮಳೆ ಸುರಿಸುವ ರೀತಿಯಲ್ಲಿ ಸುರಿಯುತ್ತಿರುವ ಅವನ ಅನುಗ್ರಹವನ್ನು ಹೇಗೆ ನಿರಾಕರಿಸಲಿ. (ಮುಬಾಹಿಸ್ ಲೂಧಿಯಾನ, ರೂ. ಖ ಸಂ 4, ಪುಟ 21).

**ಯಾವುದಾದರೂ ಮೌಲ್ವಿ ನನ್ನ ಎದುರಿನಲ್ಲಿ ಅರಬಿಯ ಅರ್ಥ ಹಾಗೂ ತತ್ವದಲ್ಲಿ ಎದುರಿಸಲು ಬಂದರೆ ಪರಾಜಿತನಾಗುವನು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ನಾನು ಮತ್ತೊಮ್ಮೆ ಸತ್ಯವಾದಿಗಳ ಅವಗಾಹನೆಗಾಗಿ ಹೇಳಬಯಸುವುದೇನೆಂದರೆ, ಅವರು ಇನ್ನು ಸಹ ತಿಳಿದುಕೊಳ್ಳದಿದ್ದರೆ ಹೊಸದಾಗಿ ಮತ್ತೊಮ್ಮೆ ದೃಢಪಡಿಸಿಕೊಳ್ಳಲಿ. ನೆನಪಿಡಿರಿ ಅಲ್ಲಾಹನ ಆರು ದೃಷ್ಟಾಂತಗಳು ನನ್ನೊಂದಿಗಿದೆ. ಮೊದನೆಯದಾಗಿ ಹೇಳುವುದೇನೆಂದರೆ ಯಾರಾದರೂ ಮೌಲ್ವಿ ಅರಬಿಯ ಸಾರವನ್ನು ತತ್ವಾಧಾರಿತವಾಗಿ ನನ್ನ ಗ್ರಂಥದಿಂದ ಎದುರಿಸಿದರೆ ಅಲ್ಲಾಹನು ನಿಮ್ಮನ್ನು ಅಪಮಾನಗೊಳಿಸುವನು. ನಾನು ಪ್ರತಿಯೊಬ್ಬ ಅಹಂಕಾರರಿಗೆ ಈ ಹಕ್ಕು ನೀಡುತ್ತೇನೆ. ನನ್ನ ಅದೇ ಅರಬಿ ಪತ್ರದ ಎದುರಾಗಿ ಬರೆದು ಪರೀಕ್ಷಿಸಿ ನೋಡಿಕೊಳ್ಳಲಿ. ಅವರು ಈ ಪತ್ರವನ್ನೇ ಎದುರಾಗಿ ಸ್ವೀಕರಿಸಿ ಒಂದು ಪತ್ರಿಕೆ ವ್ಯವಸ್ಥೆಗೊಳಿಸಿದರೆ, ಕವನ ಅಥವಾ ಬರಹ ಸಿದ್ಧಗೊಳಿಸಿದರೆ, ಮತ್ತು ಅದನ್ನು ಓರ್ವ ಅರಬಿ ಮಾತೃಭಾಷೆಯವರು ಪ್ರಮಾಣ ಮಾಡಿ ಅದನ್ನು ದೃಢೀಕರಿಸಿದರೆ ನಾನು ಸುಳ್ಳುಗಾರ.

ಎರಡನೆಯದಾಗಿ ಈ ದೃಷ್ಟಾಂತ ಸ್ವೀಕಾರ ಮಾಡುವುದಿಲ್ಲ ಎಂದರೆ ನನ್ನ ವಿರೋಧಿಗಳು ಯಾವುದೇ ಖುರ್‌ಆನ್‌ನ ಒಂದು ಸೂರದ ಪ್ರತಿಯಾಗಿ ವ್ಯಾಖ್ಯಾನ ಬರೆದು ತೋರಿಸಲಿ. ಅಂದರೆ ಸಮಕ್ಷಮ ಒಂದು ಸ್ಥಳದಲ್ಲಿ ಕುಳಿತುಕೊಂಡು ಅಂದಾಜಿನಂತೆ ಪವಿತ್ರ ಖುರ್‌ಆನ್ ತೆರೆದು ಅದರಿಂದ ಮೊದಲು ಏಳು ವಚನಗಳನ್ನು ಆಯ್ದುಕೊಂಡು ಅದರ ವ್ಯಾಖ್ಯಾನ ನಾನು ಬರೆಯುತ್ತೇನೆ. ನನ್ನ ವಿರೋಧಿಗಳು ಸಹ ಬರೆಯಲಿ, ಸತ್ಯಸಾಕ್ಷ್ಯಗಳ ವಿವರಣೆಯಲ್ಲಿ ನಾನು ವಿಜಯಿಯಾಗಲಿಲ್ಲ ಎಂದರೆ ನಾನು ಸುಳ್ಳುಗಾರ ಎಂದು ತಿಳಿಯಲಿ. (ಝುಮೀಮ ರಿಸಾಲ ಅಂಜಾಮೆ ಆಥಮ್, ರೂಹಾನಿ ಖಝಾಈನ್, ಸಂಪುಟ–11, ಪುಟ–304)

ನಾನು ಈ ಜ್ಞಾನ ಪಡೆದು ಎಲ್ಲಾ ವಿರೋಧಿಗಳಿಗೆ ಅದು ಅಬ್ದುಲ್ ಹಕ್ಕು ಅವರ ಪಂಥವಾಗಲಿ, ಬಟಾಲ್ವಿ ಅವರ ಪಂಥವಾಗಲಿ, ಒಟ್ಟಿನಲ್ಲಿ ಎಲ್ಲರಿಗೂ ಉಚ್ಚ ಸ್ವರದಲ್ಲಿ ಆಹ್ವಾನಿಸಿ ಹೇಳಿದ್ದೇನೆ. ನನಗೆ ಖುರ್‌ಆನ್‌ನ ಸತ್ಯಸಾಕ್ಷ್ಯಗಳು ಮತ್ತು ಜ್ಞಾನವನ್ನು ನೀಡಲಾಗಿದೆ. ನಿಮ್ಮಲ್ಲಿ ಯಾರಿಂದಲೂ ನನ್ನ ಎದುರಾಗಿ ಖುರಆನ್‌ನ ಸತ್ಯಸಾಕ್ಷ್ಯಗಳು ವಿವರಿಸಲು ಸಾಧ್ಯವಿಲ್ಲ. ಹಾಗೆ ಈ ಘೋಷಣೆ ಆದ ನಂತರ ಯಾರೂ ಸಹ ನನ್ನ ಎದುರಿಗೆ ಬರಲಿಲ್ಲ. ಹೀಗೆ ಅಜ್ಞಾನತೆ ಅದು ಎಲ್ಲ ನೀಚತನದ ಬೇರಾಗಿದೆ. ಅದರ ಮೇಲೆ ಅವರು ಮುದ್ರೆ ಹಾಕಿದರು. (ಅದೇ ಪುಟ 311 ಟಿಪ್ಪಣಿ.)

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಪ್ರತಿಯೊಂದು ತಪ್ಪಿಗೆ ಒಂದು ರೂಪಾಯಿ ಬಹುಮಾನ ಪಡೆಯಲು ವಿಧಿಸಿದ ಶರತ್ತೇನೆಂದರೆ– * ಮೆಹೆರ್ ಅಲಿ ನನ್ನ ಪ್ರತಿಯಾಗಿ ವ್ಯಾಖ್ಯಾನ ಬರೆಯಬೇಕು * ವ್ಯಾಖ್ಯಾನ ಅರಬಿಯಲ್ಲಿ ಬರೆಯಬೇಕು. ಕೊಟ್ಟ ಅವಧಿಯೊಳಗೆ ಬರೆಯಬೇಕು. ಒಂದು ದೀರ್ಘ ಅವಧಿಯ ನಂತರ ಮಹರ್ ಅಲಿ ಅವರು "ಸೈಫ್ ಚಿಶ್ತಿಯಾಯಿ" ಹೆಸರಿನ ಒಂದು ಪುಸ್ತಕ ಉರ್ದುವಿನಲ್ಲಿ ಬರೆದು ಹಝ್ರತ್ ಮಸೀಹ್ ಮೌಊದ್(ಅ) ಅವರಿಗೆ ಕಳುಹಿಸಿದ್ದರು. ಅದು ಸೂರ: ಫಾತಿಹದ ವ್ಯಾಖ್ಯಾನ ಆಗಿರಲಿಲ್ಲ. ಬದಲು ಕೇವಲ ನಿಷ್ಪ್ರಯೋಜಕ ಟೀಕೆ ಟಿಪ್ಪಣಿ ಆಧಾರಿತ ಒಂದು ಅರ್ಥಹೀನ ಪುಸ್ತಕವಾಗಿತ್ತು. ಅದರ ವಿವರ ನಾವು ಇನ್‌ಶಾಅಲ್ಲಾಹ್ ಮುಂದಿನ ಸಂಚಿಕೆಯಲ್ಲಿ ನೀಡುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

**ಪ್ರೀತಿ ಯಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**

*(ಪುಟ 11ರ ಉಳಿದ ಭಾಗ)*

**ಕೋ ಹಝೀಂ ಬನಾ ಕರ್"**

(ಅರ್ಥಾತ್: ಯಕೃತ್ತಿನ ತುಂಡು ಮುಬಾರಕ್ ಅಹ್ಮದ್ ಶುದ್ಧ ರೂಪ ಮತ್ತು ಶುದ್ಧ ರಕ್ತ, ಅವರು ಇಂದು ನಮ್ಮಿಂದ ಬೇರ್ಪಟ್ಟಿದ್ದಾರೆ, ನಮ್ಮ ಹೃದಯವನ್ನು ದುಃಖಪಡಿಸುತ್ತಿದ್ದಾರೆ)

ಮುಬಾರಕ್ ಅಹ್ಮದ್ ಉತ್ತಮ ವ್ಯಕ್ತಿತ್ವ ಹೊಂದಿದ್ದರು. ಅವರ ನಿಧನದ ಸಮಯದಲ್ಲಿ, ಅವರು ಕೇವಲ ಎಂಟು ವರ್ಷ ವಯಸ್ಸಿನವರಾಗಿದ್ದರು. ಆದರೆ ಹಝ್ರತ್ ಸಾಹಿಬರು ಪವಿತ್ರ ಖುರ್‌ಆನ್‌ನ ಅಪವಿತ್ರತೆಯನ್ನು ನೋಡಿ ಅದನ್ನು ಶಿಸ್ತುಬದ್ಧಗೊಳಿಸುವುದು ಅಗತ್ಯವೆಂದು ಪರಿಗಣಿಸಿದರು. (ಸಿರತ್ ಅಲ್–ಮಹದಿ, ಭಾಗ–2, ಪುಟಗಳು. 301–302)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪವಿತ್ರ ಖುರ್‌ಆನ್ ಮೇಲಿನ ಪ್ರೀತಿ, ಅವರ ಓದುವ ಉತ್ಸಾಹ, ಪವಿತ್ರ ಖುರ್‌ಆನ್ ಬಗ್ಗೆ ಗೌರವ ಮತ್ತು ಅವರ ಹೃದಯದಲ್ಲಿದ್ದ ಹೆಮ್ಮೆಯನ್ನು ತೋರಿಸುವ ಕೆಲವು ಘಟನೆಗಳು ಇದಾಗಿವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರು ತಮ್ಮ ಜಮಾಅತ್ತಿಗೆ ಸಲಹೆ ನೀಡುತ್ತಾ ಹೇಳಿದರು:

"ನೀವು ಪವಿತ್ರ ಖುರ್‌ಆನನ್ನು ಪರಿತ್ಯಜಿಸಲಾದ ವಸ್ತುವಿನ ಹಾಗೆ ಬಿಟ್ಟು ಬಿಡಬೇಡಿರಿ. ಅದರಲ್ಲಿಯೇ ನಿಮ್ಮ ಜೀವಿತವು ಅಡಕವಾಗಿದೆ. ಪವಿತ್ರ ಖುರ್‌ಆನಿಗೆ ಗೌರವ ನೀಡುವವರು ಆಕಾಶದಲ್ಲಿ ಗೌರವಿಸಲ್ಪಡುವರು. ಯಾರು ಪ್ರತಿಯೊಂದು ಹದೀಸ್ ಮತ್ತು ಪ್ರತಿಯೊಂದು ಮಾತಿನ ಮೇಲೆ ಪವಿತ್ರ ಖುರ್‌ಆನಿಗೆ ಅಗ್ರಸ್ಥಾನ ನೀಡುತ್ತಾರೋ ಅವರಿಗೆ ಆಕಾಶದಲ್ಲಿ ಅಗ್ರಸ್ಥಾನ ದೊರಕುವುದು. ಮಾನವರಿಗೆ ಭೂಲೋಕದಲ್ಲಿ ಪವಿತ್ರ ಖುರ್‌ಆನಿನ ಹೊರತು ಈಗ ಬೇರೆ ಗ್ರಂಥವಿಲ್ಲ, ಎಲ್ಲಾ ಆದಮ್ ಸಂತತಿಗಳಿಗೆ ಈಗ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವಸಲ್ಲಂ ರ ಹೊರತು ಅನ್ಯ ಸಂದೇಶ ವಾಹಕನಾಗಲಿ ಶಿಫಾರಸು ಗಾರನಾಗಲೀ ಇಲ್ಲ. ನೀವು ಸತ್ಯವಾದ ಪ್ರೀತಿಯನ್ನು ಈ ವೈಭವಶಾಲಿಯೂ ಪ್ರತಾಪಶಾಲಿಯೂ ಆಗಿರುವ ಪ್ರವಾದಿಯೊಂದಿಗೆ ಇರಿಸಲು ಪ್ರಯತ್ನಿಸಿರಿ ಅನ್ಯರಿಗೆ ಅವರ ಮೇಲೆ ಯಾವುದೇ ಶ್ರೇಷ್ಠತೆ ನೀಡಬೇಡಿರಿ ಆಗ ನೀವು ಆಕಾಶದಲ್ಲಿ ಮೋಕ್ಷಗಳಿಸಿದವರೆಂದು ಬರೆಯಲ್ಪಡುವಿರಿ ನೀವು ನೆನಪಿಡಿರಿ. (ಕಶ್ತಿ ಎ ನೂಹ್, ರೂಹಾನಿ ಖಝಾಈನ್, ಸಂಪುಟ–19, ಪುಟ–13)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಈ ಅಧ್ಯಾಪನೆಗಳ ಬೆಳಕಿನಲ್ಲಿ, ಹಝ್ರತ್ ಅಮೀರ್–ಉಲ್–ಮುಮಿನೀನ್ ಖಲೀಫತುಲ್ ಮಾಸಿಹ್ ಖಾಮಿಸ್(ಅತಬಿಅ) ಹೇಳುತ್ತಾರೆ:

"ಆದ್ದರಿಂದ ನಾವು, ಪ್ರತಿಯೊಬ್ಬರೂ ಪವಿತ್ರ ಖುರ್‌ಆನ್ ಅನ್ನು ಎಷ್ಟರಮಟ್ಟಿಗೆ ಪ್ರೀತಿಸುತ್ತಾರೆ, ಅದರ ಆಜ್ಞೆಗಳನ್ನು ಪಾಲಿಸುತ್ತಾರೆ ಮತ್ತು ಅನುಸರಿಸಲು ಪ್ರಯತ್ನಿಸುತ್ತಾರೆ ಎಂದು ಮೌಲ್ಯಮಾಪನ ಮಾಡಬೇಕು. ಪ್ರೀತಿಯನ್ನು ವ್ಯಕ್ತಪಡಿಸಲು ಮಾರ್ಗಗಳಿವೆ. ಪ್ರತಿಯೊಬ್ಬ ಅಹ್ಮದಿಯು ಮಾಡಬೇಕಾದ ಪ್ರಮುಖ ವಿಷಯವೆಂದರೆ ಆತನು ಪ್ರತಿ ದಿವಸ ಕನಿಷ್ಠ ಎರಡು ಅಥವಾ ಮೂರು ರುಕು ಪವಿತ್ರ ಖೂರ್‌ಆನ್ ಅನ್ನು ಪಠಿಸಬೇಕು. ತದನಂತರ ಮುಂದಿನ ಹಂತದಲ್ಲಿ ಅನುವಾದವನ್ನು ಓದಿ, ಪ್ರತಿದಿನ ಪಠಣದೊಂದಿಗೆ ಅನುವಾದವನ್ನು ಓದುವ ಮೂಲಕ ಕ್ರಮೇಣ ಈ ಸುಂದರವಾದ ಬೋಧನೆಯು ಅಗ್ರಾಹ್ಯ ರೀತಿಯಲ್ಲಿ ಮನಸ್ಸಿನಲ್ಲಿ ನೆಲೆಗೊಳ್ಳಲು ಪ್ರಾರಂಭಿಸುತ್ತದೆ." (ಶರಾಏತೆ ಬೈಅತ್ ಔರ್ ಅಹ್ಮದಿ ಕೀ ಝಿಮ್ಮೆದಾರಿಯಾಂ, ಪುಟ 12–13)

ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನ್ ಅನ್ನು ಅಪಾರವಾಗಿ ಪ್ರೀತಿಸುವ, ಹಗಲು ರಾತ್ರಿ ಅದನ್ನು ಪಠಿಸುವ ಮತ್ತು ಅದರ ಆಜ್ಞೆಗಳನ್ನು ಅನುಸರಿಸುವ ಸಾಮರ್ಥ್ಯವನ್ನು ನಮಗೆ ನೀಡಲಿ. **ಆಮೀನ್**.

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.

EDITOR
TARIQ AHMED IDRIS.
Mobile : +91 8050330779
website:www.akhbarbadarqadian.in
E-mail : kannadabadar@gmail.com

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
ಕನ್ನಡ ಬದರ್ ವಾರ ಪತ್ರಿಕೆ Weekly BADAR Qadian
Qadian - 143516 Distt. Gurdaspur (Pb.) INDIA
Vol No.03, Thursday, 10-17 March 2022, Issue No. 10-11

MANAGER
SHAIKH MUJAHID AHMAD
Mobile : +91 99153 79255
e-mail:managerbadrqnd@gmail.com
www.alislam.org/badr
SUBSCRIPTION
ANNUAL: Rs. 575/-

**ನನ್ನ ಪ್ರಭು ಒಂದು ದಿನ ಕೂಡ ನನ್ನಿಂದ ಬೇರ್ಪಟ್ಟಿಲ್ಲ, ಅವನು ತನ್ನ ಭವಿಷ್ಯವಾಣಿಗಳ ಪ್ರಕಾರ ಒಂದು ಲೋಕವನ್ನೇ ನನ್ನತ್ತ ಬಗ್ಗಿಸಿರುವನು. ನಾನು ಬಡವ ಹಾಗೂ ನಿರ್ಗತಿಕನಾಗಿದ್ದೆ. ಅವನು ಲಕ್ಷಾಂತರ ರೂಪಾಯಿಗಳನ್ನು ನನಗೆ ದಯಪಾಲಿಸಿದನು ಮತ್ತು ಒಂದು ದೀರ್ಘ ಕಾಲದ ಸಾಂಪತ್ತಿಕ ವಿಜಯದ ಸುವಾರ್ತೆಯು ನನಗೆ ಮುಂಚಿತವಾಗಿಯೇ ನೀಡಿದನು ಹಾಗೂ ಪ್ರತಿಯೊಂದು ಮುಬಾಹಲದಲ್ಲಿ (ಪ್ರಾರ್ಥನಾ ಸಮರ) ನನಗೆ ವಿಜಯ ನೀಡಿರುವನು ಮತ್ತು ನನ್ನ ನೂರಾರು ಪಾರ್ಥನೆಗಳನ್ನು ಸ್ವೀಕರಿಸಿರುವನು ಹಾಗೂ ನನಗೆ ಎಣಿಸಲು ಅಸಾಧ್ಯವಾದಂತಹ ಅನುಗ್ರಹಗಳನ್ನು ದಯಪಾಲಿಸಿರಿವನು.**


## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ಅಧ್ಯಾಪನೆ

ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

ನಾನು ಸತ್ಯವಾಗಿ ಹೇಳುತ್ತೇನೆ, ನನಗೆ ದಿವ್ಯವಾಣಿಗಳು ಅವತೀರ್ಣವಾಗಲು ಪ್ರಾರಂಭವಾದ ಸಮಯದಲ್ಲಿ ನಾನು ಯುವಕನಾಗಿದ್ದೆ. ಇದೀಗ ವೃದ್ಧನಾದೆನು ಮತ್ತು ನನಗೆ ಸುಮಾರು ಎಪ್ಪತ್ತು ವರ್ಷ ಪ್ರಾಯವಿದೆ. ಆ ಕಾಲದಿಂದ ಇಲ್ಲಿಯ ವರೆಗೆ ಸುಮಾರು 35 ವರ್ಷಗಳು ದಾಟಿ ಹೋಗಿವೆ. ಆದರೆ ನನ್ನ ಪ್ರಭು ಒಂದು ದಿನ ಕೂಡ ನನ್ನಿಂದ ಬೇರ್ಪಟ್ಟಿಲ್ಲ. ಅವನು ತನ್ನ ಭವಿಷ್ಯವಾಣಿಗಳ ಪ್ರಕಾರ ಒಂದು ಲೋಕವನ್ನೇ ನನ್ನತ್ತ ಬಗ್ಗಿಸಿರುವನು. ನಾನು ಬಡವ ಮತ್ತು ನಿರ್ಗತಿಕನಾಗಿದ್ದೆ. ಅವನು ಲಕ್ಷಾಂತರ ರೂಪಾಯಿಗಳನ್ನು ನನಗೆ ದಯಪಾಲಿಸಿದನು. ಒಂದು ದೀರ್ಘ ಕಾಲದ ಸಾಂಪತ್ತಿಕ ವಿಜಯದ ಸುವಾರ್ತೆ ನನಗೆ ಮುಂಚಿತವಾಗಿಯೇ ನೀಡಿದನು ಮತ್ತು ಪ್ರತಿಯೊಂದು ಮುಬಾಹಲದಲ್ಲಿ (ಪ್ರಾರ್ಥನ ಸಮರ) ನನಗೆ ವಿಜಯ ನೀಡಿರುವನು ಹಾಗೂ ನನ್ನ ನೂರಾರು ಪ್ರಾರ್ಥನೆಗಳನ್ನು ಸ್ವೀಕರಿಸಿದನು. ನನಗೆ ಎಣಿಸಲು ಅಸಾಧ್ಯವಾದಷ್ಟು ಅನುಗ್ರಹಗಳನ್ನು ದಯಪಾಲಿಸಿರುವನು. ಒಬ್ಬ ಸುಳ್ಳುಗಾರನ ಪರವಾಗಿ ಇಷ್ಟೆಲ್ಲ ಔದಾರ್ಯಗಳನ್ನೂ ಉಪಕಾರಗಳನ್ನೂ ಅಲ್ಲಾಹನು ಮಾಡುವನೇ? ನನ್ನ ವಿರೋಧಿಗಳ ಪ್ರಕಾರ ನಾನು ಮೂವತ್ತು ಮೂವತ್ತೆರಡು ವರ್ಷಗಳಿಂದ ಅಲ್ಲಾಹನ (ದೇವನ) ಹೆಸರಲ್ಲಿ ಸುಳ್ಳು ಹೇಳುತ್ತಿದ್ದೇನೆ ಮತ್ತು ಪ್ರತಿ ರಾತ್ರಿ ಸ್ವತಃ ಒಂದು ವಚನವನ್ನು ತಯಾರಿಸಿ ಮುಂಜಾನೆ ಎದ್ದು ಇದು ಅಲ್ಲಾಹನ ಕಡೆಯಿಂದ ಎಂದು ಸಾರುತ್ತಿದ್ದೇನೆ. ಆದರೆ ಅದಕ್ಕೆ ಪ್ರತಿಫಲವೆಂಬಂತೆ, ಸತ್ಯವಿಶ್ವಾಸಿಗಳು ಎಂದು ಹೇಳಲ್ಪಡುವ ಜನರ ಮೇಲೆ ಅಲ್ಲಾಹನು ನನಗೆ ವಿಜಯ ನೀಡುತ್ತಾನೆ. ಮುಬಾಹಲದ ಸಮಯದಲ್ಲಿ ಅವರನ್ನು ನನ್ನ ಎದುರಿನಲ್ಲಿ ನಾಶಗೊಳಿಸುತ್ತಾನೆ ಅಥವಾ ಅವಮಾನಗೊಳಿಸುತ್ತಾನೆ ಮತ್ತು ತನ್ನ ಭವಿಷ್ಯವಾಣಿಗಳ ಪ್ರಕಾರ ಒಂದು ಲೋಕವನ್ನೇ ನನ್ನ ಕಡೆಗೆ ಸೆಳೆಯುತ್ತಾನೆ. ಹೀಗೆ ಪ್ರತಿಯೊಂದು ಮೈದಾನದಲ್ಲಿ, ಪ್ರತಿಯೊಂದು ನೆಲೆಯಲ್ಲಿ, ಪ್ರತಿಯೊಂದು ಆಪತ್ತಿನ ಸಮಯದಲ್ಲಿ ನನಗೆ ಸಹಾಯವನ್ನು ಮಾಡುತ್ತಾನೆ. ಅವನ ದೃಷ್ಟಿಯಲ್ಲಿ ಸತ್ಯವಾದಿ ಅಲ್ಲದವರಿಗೆ ಅವನು ಇಂತಹ ಸಹಾಯ ಎಂದಿಗೂ ಮಾಡುವುದಿಲ್ಲ ಮತ್ತು ಇಂತಹ ದೃಷ್ಟಾಂತಗಳು ಅವನಿಗಾಗಿ ಪ್ರಕಟಮಾಡಿಸುವುದಿಲ್ಲ.

**(ತತಿಮ್ಮ ಹಖೀಖತುಲ್ ವಹ್ಯ್, ರೂಹಾನಿ ಖಝಾಇನ್, ಸಂಪುಟ–22, ಪುಟ–461)**

Printed & Published by: Jameel Ahmed Nasir On Behalf Of Nigran Board Of Badar, Name Of Owner: Nigran Board Of Badar. And Printed at Fazle-Umar Printing Press, Harchowal Road, Qadian. Dist. Gurdaspur-143516, Punjab. And Published at Office Of Weekly Badar Mohalla Ahmadiyya, Qadian. Dist. Gurdaspur-143516, Punjab. INDIA. Editor: Tariq Ahmed Idris.



شبیہ مبارک حضرت مرزا غلام احمد صاحب قادیانی مسیح موعود و مہدی معہود علیہ السلام (1835ء - 1908ء)